

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜನವರಿ 19 ಗುರುವಾರ 2023

ಸಂಪುಟ: 43 | ಸಂಚಿಕೆ: 272 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4







ಸುತ್ತೂರು ಜಾತ್ರಾ ಮಹೋತ್ಸವಕ್ಕೆ ವರ್ಣರಂಜಿತ ಚಾಲನೆ

ನಂಜನಗೂಡು, ಜ.18–ಸುತ್ತೂರು ಶ್ರೀ ಕ್ಷೇತ್ರದಲ್ಲಿ ಆದಿ ಜಗದ್ಗುರು ಶ್ರೀ ಶಿವರಾತ್ರಿ ಶಿವಯೋಗಿಗಳವರ ಜಾತ್ರಾ ಮಹೋತ್ಸವಕ್ಕೆ ಬುಧವಾರ ವರ್ಣರಂಜಿತ ಚಾಲನೆ ದೊರೆಯಿತು. ಹೊಸಮಠದ ಚಿದಾನಂದ ಸ್ವಾಮೀಜಿ, ಸಚ್ಚಿದಾನಂದ ಭಾರತೀ ಶ್ರೀಪಾದಂಗಳು, ಸುತ್ತೂರು ಶ್ರೀ ಶಿವರಾತ್ರಿ ದೇಶಿ ಕೇಂದ್ರ ಸ್ವಾಮೀಜಿಗಳ ದಿವ್ಯ ಸಾನ್ನಿಧ್ಯದಲ್ಲಿ ವಸ್ತು ಪ್ರದರ್ಶನವನ್ನು ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಉದ್ಘಾಟಿಸಿದರು. ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗದ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಸಾಂಸ್ಕೃತಿಕ ಮೇಳ ಮತ್ತು ಭಜನಾಂಜಲಿ ಕೃತಿಯನ್ನು ಬಿಡುಗಡೆಗೊಳಿಸಿದರು. ಕೃಷಿ ಮೇಳವನ್ನು ಕೃಷಿ ಸಚಿವ ಬಿ.ಸಿ.ಪಾಟೀಲ್ ಉದ್ಘಾಟಿಸಿದರು. ಸಿರಿಧಾನ್ಯ ಮೇಳವನ್ನು ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ, ದೋಣಿ ವಿಹಾರವನ್ನು ಶಾಸಕ ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಸಿದರು.



ಆರೋಗ್ಯ ತಪಾಸಣಾ ಶಿಬಿರ ಮತ್ತು ರಂಗೋಲಿ, ಸೋಬಾನೆ ಪದ ಸ್ಪರ್ಧೆಗೂ ಚಾಲನೆ ದೊರೆಯಿತು. ಮುಖ್ಯ ಅತಿಥಿಗಳಾಗಿ ಶಾಸಕ ನಿರಂಜನಕುಮಾರ್, ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯ ಡಾ.ವಿ.ಲೋಕೇಶ್ ಕ್ಯಾನ್ಸರ್ ಸಂಬಂಧ ಉಪನ್ಯಾಸ ▶ 8ನೇ ಪುಟಕ್ಕೆ

ಮಠ ಮಾನ್ಯಗಳಿಂದ ವೈಷಮ್ಯ ದೂರ: ಶೆಟ್ಟರ್

ನಂಜನಗೂಡು, ಜ.18– ಮಠ ಮಾನ್ಯಗಳು ಧಾರ್ಮಿಕ ಜಾಗೃತಿ ಜೊತೆಗೆ ಶೈಕ್ಷಣಿಕ, ಆರೋಗ್ಯ ಹಾಗೂ ಸಾಮಾಜಿಕ ಬದಲಾವಣೆ ತರುವ ಕೆಲಸದಲ್ಲಿ ತೊಡಗಿದಾಗ ಸಮಾಜದಲ್ಲಿನ ವೈಷಮ್ಯ ಮರೆಯಾಗಿ ಸಮಾಜ ಬದಲಾವಣೆಯಾಗಲು ಸಾಧ್ಯ ಎಂದು ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಹೇಳಿದರು. ಸುತೂರು ಶ್ರೀ ಕ್ಷೇತ್ರದಲ್ಲಿ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದಲ್ಲಿ ವಸ್ತುಪ್ರದರ್ಶನ, ಕೃಷಿ, ಸಿರಿಧಾನ್ಯ, ಮತ್ತು ಸಾಂಸ್ಕೃತಿಕ ಮೇಳ, ಆರೋಗ್ಯ ತಪಾಸಣಾ ಶಿಬಿರ, ರಂಗೋಲಿ, ಸೋಬಾನೆ ಪದ ಸ್ಪರ್ಧೆ, ದೋಣಿ ವಿಹಾರ ಕಾರ್ಯಕ್ರಮಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸುತ್ತೂರು ಮಠ ಆರೋಗ್ಯ, ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆಯನ್ನು ತರುವಂತಹ ಕೆಲಸದಲ್ಲಿ ನಿರತವಾಗುವ ಮೂಲಕ ಸರ್ಕಾರ ಮಾಡುವ ಕೆಲಸವನ್ನು ಮಾಡುತ್ತಿದೆ ಎಂದ ಅವರು ಸಮಾಜದಲ್ಲಿ ಒಗ್ಗಟ್ಟು ಕಡಿಮೆಯಾಗಿ ವೈಷಮ್ಯ, ಸಂಘರ್ಷ ಹೆಚ್ಚಾಗಿ ಶಾಂತಿ ಭಂಗವಾಗುತ್ತಿದೆ. ಸುತ್ತೂರು ಶ್ರೀಗಳ ನೇತೃತ್ವದಲ್ಲಿ ಎಲ್ಲಾ ಸಮಾಜಗಳನ್ನು ಒಟ್ಟಾಗಿಸುವಂತಹ ಕೆಲಸಕ್ಕೆ ನಾಂದಿ ಹಾಡಬೇಕು ಎಂದರು. ▶ 8ನೇ ಪುಟಕ್ಕೆ



ವಿಕಿಪೀಡಿಯಾ ವಿಶ್ವಾಸಾರ್ಹವಲ್ಲ

ನವದೆಹಲಿ:ವಿಕಿಪೀಡಿಯಾದಂತಹ ಆನ್‌ಲೈನ್ ಮಾಹಿತಿ ಮೂಲಗಳು ಜನ ಸಮೂಹ ಒದಗಿಸುವ ಮಾಹಿತಿಯನ್ನು ಆಧರಿಸಿರುತ್ತವೆ. ತಮಗೆ ಗೊತ್ತಿರುವ ವಿಚಾರಗಳನ್ನು ಸೇರ್ಪಡೆ ಮಾಡುವ ಅವಕಾಶವನ್ನು ಅವು ಬಳಕೆದಾರರಿಗೆ ಒದಗಿಸುತ್ತವೆ. ಹೀಗಾಗಿ ಅವುಗಳನ್ನು ಸಂಪೂರ್ಣವಾಗಿ ಅವಲಂಬಿಸುವಂತಿಲ್ಲ. ಅವು ದಾರಿ ತಪ್ಪಿಸುವಂತಹ ಮಾಹಿತಿ ಪಸರಿಸುವ ಸಾಧ್ಯತೆಯೂ ಇದೆ ಎಂದು ಸುಪ್ರೀಂಕೋರ್ಟ್ ಅಭಿಪ್ರಾಯಪಟ್ಟಿದೆ. ಅರ್ಜಿಯೊಂದು ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ವಿಕ್ರಂ ನಾಥ್ ಅವರ ನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠ, ವಿಕಿಪೀಡಿಯಾ ದಂತಹ ಮಾಹಿತಿ ಮೂಲಗಳು ಉಚಿತವಾಗಿ ಜ್ಞಾನ ಒದಗಿಸುತ್ತವೆ ಎಂಬುದನ್ನು ನಾವು ಒಪ್ಪುತ್ತೇವೆ. ಆದರೆ ಕಾನೂನು ವಿವಾದಗಳಿಗೆ ಸಂಬಂಧಿಸಿದ ಮಾಹಿತಿಗಾಗಿ ಇಂತಹ ಮೂಲಗಳನ್ನು ಅವಲಂಬಿಸುವಾಗ ಎಚ್ಚರದಿಂದ ಇರಬೇಕು ಎಂದಿದೆ.

ಕಾಂಗ್ರೆಸ್‌ನಲ್ಲಿ ಬಂಡಾಯದ ಬಿಸಿ: ಮೊದಲ ಪಟ್ಟಿ ಬಿಡುಗಡೆಗೆ ಬ್ರೇಕ್

- ಮಾಸಾಂತ್ಯಕ್ಕೆ ಹೊರ ಬೀಳಬೇಕಿದ್ದ ಪಟ್ಟಿ ತಿಂಗಳ ಕಾಲ ಮುಂದೂಡಿಕೆ
- ಬಿಜೆಪಿ, ಜೆಡಿಎಸ್ ಪಟ್ಟಿ ಹೊರ ಬಿದ್ದ ನಂತರವಷ್ಟೇ ಪಟ್ಟಿ ಬಿಡುಗಡೆಗೆ ನಿರ್ಧಾರ

ಬೆಂಗಳೂರು, ಜ.18(ಕೆಎಂಶಿ)– ನಾಯಕರ ಮುಸುಕಿನ ಗುದ್ದಾಟದಿಂದ ಕಂಗೆಟ್ಟಿರುವ ಕಾಂಗ್ರೆಸ್‌ಗೆ ಬಂಡಾಯದ ಬಿಸಿ ಮುಟ್ಟಿದೆ.

ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದಿಂದ ಸ್ಪರ್ಧಿಸಲು ಆಕಾಂಕ್ಷಿಗಳ ಪೈಪೋಟಿ ಹೆಚ್ಚಿರುವ ಕಾರಣ ಮೊದಲ ಹಂತದ ಅಭ್ಯರ್ಥಿಗಳ ಪಟ್ಟಿ ಬಿಡುಗಡೆಗೆ ಅಡ್ಡಿಯಾಗಿದೆ. ಪಟ್ಟಿ ಬಿಡುಗಡೆಗೆ ಮುನ್ನವೇ ಕೆಲವು ಆಕಾಂಕ್ಷಿಗಳು ತಮಗೆ ಟಿಕೆಟ್ ದೊರೆಯುವುದಿಲ್ಲ ಎಂದು ಜೆಡಿಎಸ್, ಬಿಜೆಪಿ ಇಲ್ಲವೆ ಗಣಿಧಣಿ ಜನಾರ್ದನ ರೆಡ್ಡಿ ಪಕ್ಷದ ಬಾಗಿಲು ಬಡಿಯಲು ಮುಂದಾಗಿದ್ದರು. ಇದರ ಸುಳಿವು ಅರಿತ ದೆಹಲಿ ವರಿಷ್ಠರು ಜನವರಿ 3ನೇ ವಾರದಲ್ಲಿ 100 ಕ್ಷೇತ್ರದ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡುವುದನ್ನು ಮುಂದೂಡಿದ್ದಾರೆ.

ಈ ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿ ಸಿದ್ಧಗೊಂಡಿದೆ. ಇವುಗಳಿಗೆ ಒಂದೇ ಹೆಸರನ್ನು ವರಿಷ್ಠರಿಗೆ ಶಿಫಾರಸ್ಸು ಮಾಡಿ, ಅಲ್ಲಿಂದಲೇ ಪ್ರಕಟಿಸಲು ರಾಜ್ಯ ನಾಯಕರು ತೀರ್ಮಾನಿಸಿದ್ದರು. ಪಟ್ಟಿ ಬಿಡುಗಡೆಗೆ ಸಂಬಂಧಿಸಿದಂತೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನ ಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿಕೆ ನೀಡಿದ್ದರು. ಉಭಯ ನಾಯಕರು ಬಸ್ ಯಾತ್ರೆ ಕೈಗೊಳ್ಳುವ ಮುನ್ನವೇ ಮೊದಲ ಹಂತದ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿ, ಆಯಾ ಕ್ಷೇತ್ರದಲ್ಲಿ ಅಧಿಕೃತ ಅಭ್ಯರ್ಥಿಗಳ ಪರ ಚುನಾವಣಾ ಪ್ರಚಾರ ಮಾಡುವ ತೀರ್ಮಾನ ಕೈಗೊಂಡಿದ್ದರು.



ಆದರೆ ಕೆಲವು ಕ್ಷೇತ್ರಗಳಲ್ಲಿ ಶಿವಕುಮಾರ್ ಮತ್ತು ಸಿದ್ದರಾಮಯ್ಯನವರ ಬೆಂಬಲಿಗರ ಬಣ ಎಂದು ಗುರುತಿಸಿಕೊಂಡು ತಾವೂ ಕಣಕ್ಕಿಳಿಯಬೇಕೆಂದು ಪೈಪೋಟಿ ನಡೆಸುತ್ತಿದ್ದಾರೆ. ಇದು ಕೇಂದ್ರ ವರಿಷ್ಠರಿಗೆ ನುಂಗಲಾರದ ಬಿಸಿ ತುಪ್ಪವಾಗಿದೆ. ಇಬ್ಬರು ನಾಯಕರು ಪ್ರತಿಷ್ಠೆಯಿಂದ ದೃತಿಗೆಟ್ಟಿರುವ ದೆಹಲಿ ನಾಯಕರ ಇದೀಗ ಅಭ್ಯರ್ಥಿಯಾಗಲು ಪೈಪೋಟಿ ನಡೆಸಿರುವುದು ಅವರಿಗೆ ತಲೆನೋವು ಆಗಿದೆ. ಈ ಹಿನ್ನೆಲೆಯಲ್ಲಿ ಇನ್ನೊಂದು ತಿಂಗಳ ಕಾಲ ಪಟ್ಟಿ ಹೊರಗೆಡುವುದು ಬೇಡ. ಆ ವೇಳೆಗೆ ಜೆಡಿಎಸ್ ಮತ್ತು ಬಿಜೆಪಿ ಎರಡನೇ ಮತ್ತು ಮೊದಲನೇ ಪಟ್ಟಿ ಬಿಡುಗಡೆ ಮಾಡುವುದರಿಂದ ನಮ್ಮಲ್ಲಿ ಬಂಡಾಯದ ಬಿಸಿ ಕಡಿಮೆಯಾಗಬಹುದು. ಎರಡೂ ಪಕ್ಷಗಳು ಅಭ್ಯರ್ಥಿಗಳನ್ನು ಪ್ರಕಟಿಸುವುದರಿಂದ ನಮ್ಮಲ್ಲಿ ಬಂಡಾಯ ಎದ್ದರೂ ಅಂತಹವರಿಗೆ ಆ ಪಕ್ಷಗಳಲ್ಲಿ ಅವಕಾಶ ಸಿಗುವುದಿಲ್ಲ. ಟಿಕೆಟ್ ದೊರೆಯದವರು ಪಕ್ಷದಲ್ಲೇ ಉಳಿಯುತ್ತಾರೆ ಎಂಬ ಲೆಕ್ಕಾಚಾರದಲ್ಲಿ ವರಿಷ್ಠರಿದ್ದಾರೆ. ಇದೇ ಕಾರಣಕ್ಕಾಗಿ ಪಟ್ಟಿ ವಿಳಂಬವಾಗಿದೆ.

ಎಸ್‌ಎಸ್‌ಎಲ್‌ಸಿ ಪರಿಷ್ಕೃತ ವೇಳಾಪಟ್ಟಿ ಪ್ರಕಟ



ಮೈಸೂರು, ಜ.18– ಪರಿಷ್ಕೃತಗೊಂಡ 2023ರ ಎಸ್‌ಎಸ್‌ಎಲ್‌ಸಿ ಮುಖ್ಯ ಪರೀಕ್ಷೆಯ ವೇಳಾಪಟ್ಟಿ ಪ್ರಕಟಗೊಂಡಿದ್ದು, ಮಾ.31ರಿಂದ ಏ.15ರವರೆಗೆ ಪರೀಕ್ಷೆಗಳು ನಡೆಯಲಿವೆ.

ಕಳೆದ ಡಿ.5 ರಂದು ಎಸ್‌ಎಸ್‌ಎಲ್‌ಸಿ ಮುಖ್ಯ ಪರೀಕ್ಷೆಯ ವೇಳಾಪಟ್ಟಿಯನ್ನು ಪ್ರಕಟಿಸಲಾಗಿತ್ತು. ಅದರಲ್ಲಿ ಏ.4ರಂದು ಗಣಿತ ವಿಷಯದ ಪರೀಕ್ಷೆ ನಿಗದಿಯಾಗಿತ್ತು. ಆದರೆ, ಅಂದು ಮಹಾವೀರ ಜಯಂತಿ ರಜೆ ಇರುವ ಕಾರಣ ಎಸ್‌ಎಸ್‌ಎಲ್‌ಸಿ ಮುಖ್ಯ ಪರೀಕ್ಷೆಯ ವೇಳಾಪಟ್ಟಿಯನ್ನು ಬದಲಾವಣೆ ಮಾಡಿ, ಪರಿಷ್ಕೃತ ವೇಳಾಪಟ್ಟಿಯನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಬಿಡುಗಡೆ ಮಾಡಿದೆ.

2023ರ ಎಸ್‌ಎಸ್‌ಎಲ್‌ಸಿ ಮುಖ್ಯ ಪರೀಕ್ಷೆ ಮಾ.31 ರಿಂದ ಏ.15ರವರೆಗೆ ನಡೆಸಲು ತೀರ್ಮಾನಿಸಲಾಗಿದ್ದು, ಮಾ.31 ರಂದು ಪ್ರಥಮ ಭಾಷೆ, ಏ.3– ಗಣಿತ, ಏ.6– ದ್ವಿತೀಯ ಭಾಷೆ, ಏ.10– ವಿಜ್ಞಾನ, ಏ.12– ತೃತೀಯ ಭಾಷೆ, ಏ.15–ಸಮಾಜ ವಿಜ್ಞಾನ ವಿಷಯಗಳ ಪರೀಕ್ಷೆ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಫೆ.10, ಮೈಸೂರಿಂದ ಧರ್ಮಸ್ಥಳಕ್ಕೆ ಪಾದಯಾತ್ರೆ



ಮೈಸೂರು,ಜ.18(ಪಿಎಂ)– ಕುಡುಮ ಶ್ರೀಕ್ಷೇತ್ರ ಧರ್ಮಸ್ಥಳ ಮಂಜುನಾಥಸ್ವಾಮಿ ಪಾದಯಾತ್ರೆ ಸಮಿತಿ ವತಿಯಿಂದ ಫೆಬ್ರವರಿ 10ರಂದು ಮೈಸೂರಿನಿಂದ ಧರ್ಮಸ್ಥಳದ ಮಂಜುನಾಥಸ್ವಾಮಿ ಸನ್ನಿಧಿವರೆಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಅಧ್ಯಕ್ಷ ಎಂ.ಕೆ.ಮಹದೇವ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಿತಿಯು ಪ್ರತಿ ವರ್ಷದಂತೆ ಈ ಬಾರಿಯೂ ಪಾದಯಾತ್ರೆ ಹಮ್ಮಿಕೊಂಡಿದೆ. ಫೆ.9ರಂದು ಸಂಜೆ 7ಕ್ಕೆ ಮೈಸೂರು ಅರಮನೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಪೂಜಾ ಕಾರ್ಯಕ್ರಮ ಆಯೋಜಿಸಲಾಗಿದೆ. ಇದೇ ವೇಳೆ ಯಾತ್ರಾರ್ಥಿಗಳಿಗೆ ಮಾಲಾಧಾರಣೆ ಮಾಡಲಾಗುವುದು ಎಂದರು.

ಬಳಿಕ ಯಾತ್ರಿಗಳಿಗೆ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ, ಸಾಮಾಜಿಕ ನ್ಯಾಯ ವೇದಿಕೆ ಅಧ್ಯಕ್ಷ ಓ.ಶ್ಯಾಮಭಟ್, ಪಾದಯಾತ್ರೆ ಸಮಿತಿಯ ಗೌರವಾಧ್ಯಕ್ಷ ಕಾಂಕ್ರಿಟ್ ರಾಜಣ್ಣ, ಜಿಲ್ಲಾ ಧಾರ್ಮಿಕ ದತ್ತಿ ಪರಿಷತ್ ಸದಸ್ಯ ಜಿ.ಶ್ರೀನಿ ವಾಸ್ ಶುಭ ಹಾರೈಸಲಿದ್ದಾರೆ. ಪಾದಯಾತ್ರೆಯಲ್ಲಿ ದಾನಿಗಳಿಂದ ದವಸ–ಧಾನ್ಯ ಪಡೆದು, ಧರ್ಮಸ್ಥಳದ ಸನ್ನಿಧಿಗೆ ಅರ್ಪಿಸಲಾಗುವುದು ಎಂದು ತಿಳಿಸಿದರು.

ಫೆ.18ರಂದು ಪಾದಯಾತ್ರೆಯು ಧರ್ಮಸ್ಥಳಕ್ಕೆ ತಲುಪಲಿದೆ. 250ಕ್ಕೂ ಹೆಚ್ಚು ಮಂದಿ ಈ ಪಾದಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಕಳೆದ ವರ್ಷದ ಪಾದಯಾತ್ರೆಯಲ್ಲಿ 1.94 ಲಕ್ಷ ರೂ. ಮೌಲ್ಯದ ದವಸ–ಧಾನ್ಯವನ್ನು ಅರ್ಪಿಸಲಾಯಿತು. ಇದಕ್ಕೆ ಪ್ರತಿಯಾಗಿ ದೇವಸ್ಥಾನದಿಂದ ಚಿನ್ನದ ಪದಕವನ್ನು ನಮ್ಮ ಸಮಿತಿಗೆ ನೀಡಲಾಗಿದೆ ಎಂದರು. ಸಮಿತಿ ಸದಸ್ಯರಾದ ಕೌಶಲ್ಯ, ಶಶಿಕಲಾ, ರಾಜಮ್ಮ, ಗೋಪಮ್ಮ, ಅಶೋಕ್‌ಕುಮಾರ್, ರವಿಕುಮಾರ್ ಮತ್ತಿತರರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಜ.22, ರಾಜ್ಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆ

ಮೈಸೂರು,ಜ.18(ಪಿಎಂ)– ಕಲಾಧಾರೆ ಕಲ್ಚರಲ್ ಟ್ರಸ್ಟ್ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಜ.22ರಂದು ರಾಜ್ಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ ಎಂದು ಟ್ರಸ್ಟ್‌ನ ಸಂಸ್ಥಾಪಕ ಅಧ್ಯಕ್ಷ ಚಾಮರಾಜ್ ತಿಳಿಸಿದರು.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ ರಾಮಕೃಷ್ಣನಗರದ ರಮಾಗೋವಿಂದ ಕಲಾಮಂದಿರದಲ್ಲಿ ಸ್ಪರ್ಧೆಗಳು ನಡೆಯಲಿವೆ. ಭರತನಾಟ್ಯ, ಜಾನಪದ ನೃತ್ಯ, ಪಾಶ್ಚಿಮಾತ್ಯ ನೃತ್ಯ, ಚಲನಚಿತ್ರ ಗೀತೆಗಳ ಹಾಡುಗಾರಿಕೆ, ಏಕಪಾತ್ರ ಅಭಿನಯದ ಸ್ಪರ್ಧೆಗಳು ಸಬ್ ಜೂನಿಯರ್, ಜೂನಿಯರ್ ಮತ್ತು ಸೀನಿಯರ್ ವಿಭಾಗಗಳಲ್ಲಿ ನಡೆಯಲಿವೆ ಎಂದರು.

ಅಲ್ಲದೆ, ಎಲ್‌ಕೆಜಿಯಿಂದ ಯುಕೆಜಿ, 1ರಿಂದ 4ನೇ ತರಗತಿ, 5ರಿಂದ 7ನೇ ತರಗತಿ ಮಕ್ಕಳಿಗೆ ಚಿತ್ರಕಲೆ ಸ್ಪರ್ಧೆ ಮತ್ತು ವೇಷಭೂಷಣ ಸ್ಪರ್ಧೆ ಆಯೋಜಿಸಲಾಗಿದೆ. ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಆಕರ್ಷಕ ಟ್ರೋಫಿ ಹಾಗೂ ಪ್ರಮಾಣ ಪತ್ರ ನೀಡಲಾಗುವುದು. ಆಯಾಯ ಸ್ಪರ್ಧೆಗಳಿಗೆ ನಿಗದಿತ ಪ್ರವೇಶ ಶುಲ್ಕ ನಿಗದಿ ಮಾಡಿದ್ದು, ವಿವರಗಳಿಗೆ ಮೊ.ಸಂ. 98807 77121 ಸಂಪರ್ಕಿಸಬಹುದು ಎಂದರು. ಅಂದು ಬೆಳಗ್ಗೆ 10ಕ್ಕೆ ಉದ್ಘಾಟನಾ ಸಮಾರಂಭ ನಡೆಯಲಿದ್ದು, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಪಾಲಿಕೆ ಸದಸ್ಯ ಆರ್.ಕೆ.ಶರತ್‌ಕುಮಾರ್, ಪತ್ರಕರ್ತೆ ಸಾಹಿತ್ಯ ಯಜಮಾನ್, ಚಿಂತಕ ಕೃಷ್ಣ ಜನಮನ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು. ಟ್ರಸ್ಟ್ ಗೌರವಾಧ್ಯಕ್ಷ ಉಮಾಪತಿ, ಸಲಹೆಗಾರ ಎಸ್.ಆನಂದ್, ನಿರ್ದೇಶಕ ಬಸಂತ್‌ಕುಮಾರ್ ಗೋಷ್ಠಿಯಲ್ಲಿದ್ದರು.



ಮೈಸೂರು ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಪತ್ರಿಕಾ ವಿತರಕರಿಗೆ ಪ್ರತ್ಯೇಕ ಬಡಾವಣೆ ನಿರ್ಮಿಸಿ ಅದರಲ್ಲಿ ಪ್ರತಿಯೊಬ್ಬರಿಗೆ 30x20 ಅಳತೆಯ ನಿವೇಶನವನ್ನ ನೀಡುವುದರೊಂದಿಗೆ ಸಂಘಕ್ಕೂ ಸಿಎ ನಿವೇಶನ ಕಲ್ಪಿಸುವುದು, ಮಳೆಗಾಲದಲ್ಲಿ ಪತ್ರಿಕಾ ವಿತಕರಿಗೆ ಅನುಕೂಲವಾಗುವಂತೆ ಪುರಭವನ ಇಲ್ಲವೇ ಕಾಡಾ ಕಚೇರಿ ಬಳಿ ಸೂರು ಕಲ್ಪಿಸುವಂತೆ ಮುಡಾ ಅಧ್ಯಕ್ಷರಾದ ಯಶಸ್ವಿ ಸೋಮಶೇಖರ್ ಅವರಿಗೆ ಸಂಘದ ಅಧ್ಯಕ್ಷ ಜೆ.ಎಸ್. ಹೋಮದೇವ ನೇತೃತ್ವದಲ್ಲಿ ಬುಧವಾರ ಮನವಿ ಸಲ್ಲಿಸಲಾಯಿತು.

ಕಬ್ಬು ಸಾಗಾಣಿಕೆ ಲಾರಿ ಕಳವು

ಬನ್ನೂರು, ಜ.18– ಕಬ್ಬು ಸಾಗಾಣಿಕೆ ಲಾರಿಯನ್ನು ಕಳವು ಮಾಡಿರುವ ಘಟನೆ ಬನ್ನೂರಿನ ಎಂಎಂ ರಸ್ತೆಯ ಗೋಲ್ಡನ್ ಪ್ಯಾಲೇಸ್ ಮುಂಭಾಗ ನಡೆದಿದೆ.

ಬೆಂಗಳೂರಿನ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿರುವ ಜಯರಾಂ ಎಂಬುವರು ಕೆಎ–05 ಡಿ 0141 ಸಂಖ್ಯೆಯ ಅಶೋಕ ಲೇಲ್ಯಾಂಡ್ ಲಾರಿ ಹೊಂದಿದ್ದು, ಅದಕ್ಕೆ ಕೆ.ಆರ್.ಪೇಟೆ ತಾಲೂಕು ಆಲಂಬಾಡಿ ಕಾವಲ್‌ನ ಮಹೇಂದ್ರ ಎಂಬಾತನನ್ನು ಚಾಲಕನಾಗಿ ನೇಮಕ ಮಾಡಿಕೊಂಡಿದ್ದಾರೆ. ನಂಜನಗೂಡಿನ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಗೆ ಕಬ್ಬು ಸಾಗಾಣಿಕೆ ಮಾಡಲು ಈ ಲಾರಿಯನ್ನು ಬಾಡಿಗೆಗೆ ಬಿಟ್ಟಿದ್ದಾರೆ. ಲಾರಿ ಚಾಲಕ ಮಹೇಂದ್ರ ಜ.14ರಂದು ಮಧ್ಯಾಹ್ನ ಬನ್ನೂರಿನ ಗೋಲ್ಡನ್ ಪ್ಯಾಲೇಸ್ ಮುಂಭಾಗ ಲಾರಿ ನಿಲ್ಲಿಸಿ ಹಬ್ಬಕ್ಕಾಗಿ ಊರಿಗೆ ಹೋಗಿದ್ದು, ಈ ಲಾರಿ ಕಳುವಾಗಿರುವ ಬಗ್ಗೆ ಜ.15ರಂದು ಬೆಳಗ್ಗೆ ಗೊತ್ತಾಗಿದೆ. ಈ ಸಂಬಂಧ ಲಾರಿ ಮಾಲೀಕ ಜಯರಾಂ ಪತ್ನಿ ಅನುಪಮ ಅವರು ಜ.16ರಂದು ಬನ್ನೂರು ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಬೈಕ್‌ನಿಂದ ಬಿದ್ದು ಸವಾರ ಸಾವು

ಮೈಸೂರು, ಜ.18–ನಿಯಂತ್ರಣ ತಪ್ಪಿ ಬೈಕ್‌ನಿಂದ ಬಿದ್ದು ಸವಾರ ಸಾವನ್ನಪ್ಪಿದ ಘಟನೆ ಮೈಸೂರಿನ ಗಿರಿಯಾಬೋವಿ ಪಾಳ್ಯ ಗೇಟ್ ಜಂಕ್ಷನ್‌ನಲ್ಲಿ ಸಂಭವಿಸಿದೆ.

ಮೈಸೂರಿನ ಕೆ.ಎನ್.ಪುರ ನಿವಾಸಿ ಶೇಖರ್(45) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ಹೀರೋಹೊಂಡಾ ಸ್ಪ್ಲೆಂಡರ್ (ಕೆಎ 55, ಡಬ್ಲ್ಯೂ 7841)ನಲ್ಲಿ ಜ.16ರಂದು ಮಧ್ಯಾಹ್ನ 2.10ರ ಸುಮಾರಿನಲ್ಲಿ ಹೋಗುತ್ತಿದ್ದಾಗ ನಿಯಂತ್ರಣ ತಪ್ಪಿ ಬಿದ್ದು, ತೀವ್ರವಾಗಿ ಗಾಯಗೊಂಡಿದ್ದಾರೆ. ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲ್ಪಟ್ಟಿದ್ದ ಅವರು, ಅಂದು ಸಂಜೆ 7.30ರಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಸಿದ್ಧಾರ್ಥನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಿಧನ

ಮೇರಿಯಂಡ ಪಾರ್ವತಿ



ಮೈಸೂರು, ಜ. 18 – ಮೈಸೂರಿನ ಶ್ರೀರಾಂಪುರ ಎಸ್‌ಬಿಎಂ ಕಾಲೋನಿ ನಿವಾಸಿ ದಿವಂಗತ ಅಪ್ಪಯ್ಯ (ಪಾಪ) ಅವರ ಪತ್ನಿ ಮೇರಿಯಂಡ ಪಾರ್ವತಿ (ಮುಂಡಿಯೋಲಂಡ) ಬುಧವಾರ ಬೆಳಗ್ಗೆ ನಿಧನರಾದರು. ಅವರಿಗೆ 96 ವರ್ಷ ವಯಸ್ಸಾಗಿತ್ತು. ಮೃತರು ಓರ್ವ ಪುತ್ರಿ, ಐವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರವೀಶ



ಮೈಸೂರು ಗಾಂಧಿನಗರದ ಶ್ರೀದುರ್ಗಾದೇವಿ ದೇವಸ್ಥಾನದ ರಸ್ತೆ ನಿವಾಸಿ ಲೇಟ್ ಸಿದ್ದಯ್ಯ ಅವರ ಪುತ್ರ ರವೀಶ (ರವೀಚ–38 ವರ್ಷ) ಅವರು ಮಂಗಳವಾರ ನಿಧನರಾದರು. ಮೃತರು ಅವಿವಾಹಿತರಾಗಿದ್ದು, ತಾಯಿ ಸಣ್ಣಜಮ್ಮ, ಅಣ್ಣ ಚಂದ್ರಶೇಖರ್, ಅಕ್ಕ ಸಿದ್ದರಾಜಮ್ಮ, ರಾಜೇಶ್ವರಿ, ತಂಗಿ ಸುಂದ್ರಮ್ಮ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಇಂದು (ಬುಧವಾರ) ಸಂಜೆ ಗಾಂಧಿನಗರದ ಆದಿ ಜಾಂಬವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ: ಶ್ರೀದುರ್ಗಾದೇವಿ ಯುವಕರ ಬಳಗದ ಅಧ್ಯಕ್ಷರಾದ ಎಲ್.ದಿಲೀಪ್ ಮತ್ತು ಸ್ನೇಹಿತರು, ರವೀಶ ಅವರ ನಿಧನಕ್ಕೆ ತೀವ್ರ ಸಂತಾಪ ಸೂಚಿಸಿದ್ದಾರೆ.

ಮೈಸೂರಲ್ಲಿ ಸಾಮಾಜಿಕ ನ್ಯಾಯ, ಸಬಲೀಕರಣ ಕುರಿತ ಕಾರ್ಯಾಗಾರ

- ಕೇಂದ್ರ ಸಾಮಾಜಿಕ ನ್ಯಾಯ, ಸಬಲೀಕರಣ ಸಚಿವ ನಾರಾಯಣಸ್ವಾಮಿ ಅವರಿಂದ ಚಾಲನೆ
- ಎಸ್‌ಸಿ, ಎಸ್‌ಟಿ ಸಮುದಾಯದ ಅಭಿವೃದ್ಧಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಕುರಿತಂತೆ ಸುದೀರ್ಘ ಚರ್ಚೆ
- ದಕ್ಷಿಣ ರಾಜ್ಯಗಳ ಹಿರಿಯ ಐಎಎಸ್ ಅಧಿಕಾರಿಗಳು, ಇಲಾಖಾ ಕಾರ್ಯದರ್ಶಿಗಳಿಂದ ವಿಷಯ ಮಂಡನೆ

ಮೈಸೂರು,ಜ.18(ಆರ್‌ಕೆ)– ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಯೋಜನೆಗಳ ಅನುಷ್ಠಾನ ಕುರಿತಂತೆ ಮೈಸೂರಿನ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್‌ನಲ್ಲಿ ಎರಡು ದಿನಗಳ ಕಾರ್ಯಾಗಾರ ಇಂದಿನಿಂದ ಆರಂಭವಾಯಿತು.

ಕೇಂದ್ರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ ಹಾಗೂ ರಾಜ್ಯ ಸಮಾಜ ಕಲ್ಯಾಣ ಇಲಾಖೆ ಸಹಯೋಗದೊಂದಿಗೆ ಮೈಸೂರು ಜಿಲ್ಲಾಡಳಿತ ಆಯೋಜಿಸಿದ್ದ ಕಾರ್ಯಾಗಾರವನ್ನು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವ ಎ.ನಾರಾಯಣಸ್ವಾಮಿ ಉದ್ಘಾಟಿಸಿದರು.

ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಒಡಿಶಾ, ಪುದುಚೇರಿ, ಲಕ್ಷದ್ವೀಪ, ಅಂಡಮಾನ್–ನಿಕೋಬಾರ್ ರಾಜ್ಯ ಹಾಗೂ ಕೇಂದ್ರಾಡಳಿ ಪ್ರದೇಶಗಳ 60ಕ್ಕೂ ಹೆಚ್ಚು ಹಿರಿಯ ಐಎಎಸ್ ಅಧಿಕಾರಿಗಳು, ಇಲಾಖೆ ಕಾರ್ಯದರ್ಶಿ, ನಿರ್ದೇಶಕರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದು, ಗೋಷ್ಠಿಗಳಲ್ಲಿ ವಿಷಯ ಮಂಡಿಸುವರು.

ಈ ಸಂದರ್ಭ ಅಧಿಕಾರಿಗಳನ್ನುದ್ದೇಶಿಸಿ ಮಾತನಾಡಿದ ಸಚಿವ ನಾರಾಯಣಸ್ವಾಮಿ, ತಳಮಟ್ಟದ ಸಮುದಾಯದ ಅಭಿವೃದ್ಧಿಗೆ ಸಮರ್ಪಕವಾಗಿ ಅನುಷ್ಠಾನಗೊಳಿಸುವುದು ಇಲಾಖೆಯ ಜವಾಬ್ದಾರಿಯಾಗಿದ್ದು, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಕಲ್ಪನೆಯ "ಸಬ್ ಕಾ ಸಾಥ್–ಸಬ್ ಕಾ ವಿಕಾಸ್" ಮಂತ್ರಗಳು ತುಳಿತಕ್ಕೊಳಗಾದ ಸಮುದಾಯಗಳ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಸಹಕಾರಿಯಾಗಲಿವೆ ಎಂದರು.

ಪ್ರಧಾನಿಗಳ ಮಾರ್ಗದರ್ಶನದಲ್ಲಿ ಸ್ಟಾರ್ಟ್ ಅಪ್ ಇಂಡಿಯಾ, ಸ್ಟ್ಯಾಂಡ್‌ಅಪ್ ಸ್ಕೀಂ, ಸ್ಕಿಲ್ ಇಂಡಿಯಾ, ಸ್ವನಿಧಿಯಂತಹ ಯೋಜನೆಗಳನ್ನು ಆರಂಭಿಸಿ ಮಹಿಳೆಯರು, ಯುವಕರು ಹಾಗೂ ಶೋಷಿತ ವರ್ಗದವರು ಸ್ವಉದ್ಯೋಗಿಗಳಾಗಿ ಸ್ವಾವಲಂಬನೆ ಜೀವನ ನಡೆಸಲು ಕೇಂದ್ರ ಸರ್ಕಾರ ಆರ್ಥಿಕ ನೆರವು, ಸಾಲ ಸೌಲಭ್ಯ ನೀಡುತ್ತಿರುವುದರಿಂದ ಈ ಸೌಲಭ್ಯಗಳನ್ನು ಅರ್ಹರಿಗೆ ತಲುಪಿಸುವ ಬಗ್ಗೆ ಕಾರ್ಯಾಗಾರದಲ್ಲಿ ಗಂಭೀರ ಚರ್ಚೆಯಾಗಬೇಕೆಂದೂ ಸಚಿವರು ಅಭಿಪ್ರಾಯಪಟ್ಟರು.

ರಾಜ್ಯ ಸರ್ಕಾರಗಳು ಕೇಂದ್ರದ ಯೋಜನೆಗಳಡಿ ನೀಡುವ ಅನುದಾನವನ್ನು ಬಳಸಿ ಅಗತ್ಯ ಉಳ್ಳವರ ಏಳ್ಗೆಗಾಗಿ ಬಳಸಬೇಕು. ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ಮೂಲಕ ಲಿಡ್ಕರ್ ಔಟ್‌ಲೆಟ್ ಆರಂಭಿಸಿ ಕರ್ನಾಟಕದಲ್ಲಿ ಲೆದರ್ ಉತ್ಪನ್ನ ತಯಾರಿಸುವವರಿಗೆ ಮೂಲ ಸೌಲಭ್ಯ ಕಲ್ಪಿಸಲಾಗಿದೆ. ನಮ್ಮ ಇಲಾಖೆಯು ಐಎಂಎಜೆಎವೈ, ಡಾ.ಅಂಬೇಡ್ಕರ್ ಉತ್ಸವ ಧಾಮ್, ಪಿಎಂ ಅಮೃತ ಜಲಧಾರೆ, ಪಿಎಂ ಕುಸುಮ್, ಪಿಎಂವೈಇಎಸ್‌ನಂತಹ ಯೋಜನೆಗಳನ್ನು ಅನುಷ್ಠಾನ ಮಾಡಲಾಗುತ್ತಿದೆ ಎಂದು ನಾರಾಯಣಸ್ವಾಮಿ ನುಡಿದರು.

31 ಸೆಂಟ್ರಲ್ ಯೂನಿವರ್ಸಿಟಿಗಳಲ್ಲಿ ಎಸ್ಸಿ ಆಕಾಂಕ್ಷಿಗಳಿಗೆ ಉಚಿತ ಯುಪಿಎಸ್‌ಸಿ ಕೋಚಿಂಗ್ ನೀಡಲು ಡಾ. ಅಂಬೇಡ್ಕರ್ ಸೆಂಟರ್ ಫಾರ್ ಎಕ್ಸಲೆನ್ಸಿ ಆರಂಭಿಸಲಾಗಿದೆ. ಎಸ್‌ಸಿ ನವ ಉದ್ಯಮಿಗಳಿಗೆ ಶೇ.4ರ ಬಡ್ಡಿ ದರದ ಸಾಲ, 50,000 ರೂ.ಗಳವರೆಗೆ ಸಬ್ಸಿಡಿ ಸೌಲಭ್ಯಗಳನ್ನು ಇಲಾಖೆ ನೀಡುತ್ತಿದ್ದು, ಈ ಬಗೆಯ ಕೇಂದ್ರ ಪುರಸ್ಕೃತ ಯೋಜನೆಗಳ ಬಗ್ಗೆ ಅಧಿಕಾರಿಗಳು ಹೆಚ್ಚು ಪ್ರಚಾರ ಮಾಡಬೇಕು ಎಂದು ಸಲಹೆ ನೀಡಿದರು.

ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಸಚಿವ ಕೋಟ ಶ್ರೀನಿವಾಸ ಪೂಜಾರಿ, ಆಂಧ್ರಪ್ರದೇಶದ ಸಮಾಜ ಕಲ್ಯಾಣ ಸಚಿವ ಡಾ.ಮೆರುಗು ನಾಗಾರ್ಜುನ, ಪುದುಚೇರಿಯ ಸಿ.ದ್ಜೇಕೌಮರ, ಕೇಂದ್ರ ಸಮಾಜ ಕಲ್ಯಾಣ ಇಲಾಖೆ ಹೆಚ್ಚುವರಿ ಕಾರ್ಯದರ್ಶಿ ಸುರೇಂದ್ರ ಸಿಂಗ್, ತಮಿಳುನಾಡು ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಟಿ.ಸಿ.ಜವಾಹರ, ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.

ನಂತರ ನಡೆದ ಗೋಷ್ಠಿಗಳಲ್ಲಿ ನಾಗರಿಕ ಹಕ್ಕು ರಕ್ಷಣೆ, ಪೋಷಕರು–ಹಿರಿಯ ನಾಗರಿಕರ ಕ್ಷೇಮ ಪಾಲನೆ ಕಾಯ್ದೆ, ಅಟಲ್ ವಯೋ ಅಭ್ಯುದಯ್ ಯೋಜನೆ, ಪ್ರಧಾನ ಮಂತ್ರಿ ಅನುಸೂಚಿತ ಜಾತಿ ಅಭ್ಯುದಯ ಯೋಜನೆ, ವಿವಿಧ ವಿದ್ಯಾರ್ಥಿ ವೇತನ, ನಮಸ್ತೆ, ಎಸ್‌ಸಿ ಸಮುದಾಯದ ಶೈಕ್ಷಣಿಕ ಯೋಜನೆಗಳ ಕುರಿತಂತೆ ಇಲಾಖೆ ಅಧಿಕಾರಿಗಳು ಪವರ್ ಪಾಯಿಂಟ್ ಪ್ರೆಸೆಂಟೇಷನ್ ನೀಡಿದರು.



ಮೈಸೂರಿನ ಲಲಿತ ಮಹಲ್ ಪ್ಯಾಲೇಸ್ ಹೋಟೆಲ್‌ನಲ್ಲಿ ಬುಧವಾರ ಆರಂಭವಾದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಕುರಿತ ಕಾರ್ಯಾಗಾರದಲ್ಲಿ ಕೇಂದ್ರ ಸಮಾಜ ಕಲ್ಯಾಣ ಸಚಿವ ಎ. ನಾರಾಯಣಸ್ವಾಮಿ ಮಾತನಾಡಿದರು. (ಎಡದಿಂದ) ಕೇಂದ್ರದ ಸಾಮಾಜಿಕ ನ್ಯಾಯ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಟಿ.ಸಿ. ಜವಾಹರ, ಸುರೇಂದ್ರ ಸಿಂಗ್, ಆಂಧ್ರಪ್ರದೇಶದ ಸಮಾಜ ಕಲ್ಯಾಣ ಸಚಿವ ಡಾ. ಮೆರುಗು ನಾಗಾರ್ಜುನ, ರಾಜ್ಯ ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ, ಪುದುಚೇರಿ ಸಚಿವ ಸಿ. ದ್ಜೇಕೌಮರ ಹಾಗೂ ಮೈಸೂರು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಅವರನ್ನು ಚಿತ್ರದಲ್ಲಿ ಕಾಣಬಹುದು.

ಸುಳ್ಳು ದಾಖಲೆ ಸೃಷ್ಟಿಸಿ ಮಿಷನ್ ಆಸ್ಪತ್ರೆ ಕ್ಯಾಂಟೀನ್, ಫಾರ್ಮಸಿ ಗುತ್ತಿಗೆ: ಇಬ್ಬರ ವಿರುದ್ಧ ಪ್ರಕರಣ ದಾಖಲು

ಮೈಸೂರು, ಜ.18–ಮೈಸೂರಿನ ಮಿಷನ್ ಆಸ್ಪತ್ರೆಯ ಕ್ಯಾಂಟೀನ್ ಮತ್ತು ಫಾರ್ಮಸಿಯನ್ನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ 1.10 ಕೋಟಿ ರೂ.ಗಳಿಗೆ ಹೊರ ಗುತ್ತಿಗೆ ನೀಡಲಾಗಿದೆ ಎಂದು ನ್ಯಾಯಾಲಯದ ಆದೇಶದ ಮೇರೆಗೆ ಮಂಡಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸಿಎಸ್‌ಐ–ಕೆಎಸ್‌ಡಿ ನಿವೃತ್ತ ಬಿಷಪ್ ಮೋಹನ್ ಮನೋರಾಜ್ (68) ಮತ್ತು ಮಿಷನ್ ಆಸ್ಪತ್ರೆಯ ನಿರ್ದೇಶಕ ವಿನ್ಸೆಂಟ್ ಪಾಲಣ್ಣ(45) ಆರೋಪಕ್ಕೆ ಗುರಿಯಾದವರಾಗಿದ್ದು, ಮೈಸೂರಿನ ಕುವೆಂಪುನಗರ ನಿವಾಸಿ ಸುಂದರ್ ಪ್ರೇಮ್ ಕುಮಾರ್(50) ಎಂಬುವರು ಈ ಸಂಬಂಧ ನ್ಯಾಯಾಲಯದ ಮೊರೆ ಹೋಗಿದ್ದಾರೆ.

ವಿವರ: ಸಿಎಸ್‌ಐ–ಟಿಎ ಸಂಸ್ಥೆಯು ಚೆನ್ನೈನಲ್ಲಿ ಪಬ್ಲಿಕ್ ರಿಲಿಜಿಯನ್ ಚಾರಿಟೆಬಲ್ ಟ್ರಸ್ಟ್ ಎಂದು ನೋಂದಾವಣಿ ಆಗಿದ್ದು, ಚೆನ್ನೈನ ರಿಜಿಸ್ಟ್ರಾರ್ ಆಫ್ ಕಂಪನೀಸ್ ಅವರು 2020–23ಕ್ಕೆ ಯಾವುದೇ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್‌ಗೆ ಅಧಿಕಾರ ನೀಡಿಲ್ಲ ಎಂದು 2020ರ ಸೆ.16ರಂದು ಆದೇಶ ನೀಡಿದ್ದಾರೆ. ಸಿಎಸ್‌ಐಗೆ ಸಂಬಂಧಿಸಿದ ಆಸ್ಪತ್ರೆ, ವಿದ್ಯಾಸಂಸ್ಥೆಗಳು ಹಾಗೂ ಅನಾಥಾಶ್ರಮಗಳು ಸಿಎಸ್‌ಐ–ಟಿಎಗೆ ಸಂಬಂಧಿಸಿದ್ದು, ಇದರ ಕಾರ್ಯ ನಿರ್ವಹಣೆಯನ್ನು ಇದೇ ಸಂಸ್ಥೆ ಮಾಡಬೇಕಾಗುತ್ತದೆ. ಆದರೆ 2021ರ ನ.15ರಂದು ಬಿಷಪ್ ಹುದ್ದೆಯಿಂದ ನಿವೃತ್ತರಾಗಿರುವ ಮೋಹನ್ ಮನೋರಾಜ್ ಎಂಬುವರು ತಾನೇ ಮಿಷನ್ ಆಸ್ಪತ್ರೆ ಅಧ್ಯಕ್ಷನೆಂದು 2021ರ ಡಿ.30ರಂದು ಮೈಸೂರಿನ ರಿಜಿಸ್ಟ್ರಾರ್ ಆಫ್ ಸೊಸೈಟಿಗೆ ಸುಳ್ಳು ಅಫಿಡವಿಟ್ ನೀಡಿ ಮಿಷನ್ ಆಸ್ಪತ್ರೆಯ ನೋಂದಣಿ ನವೀಕರಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಮೋಹನ್ ಮನೋರಾಜ್ ಅವರಿಗೆ ಆಸ್ಪತ್ರೆ ನಡೆಸಲು ಯಾವುದೇ ಅಧಿಕಾರವಿಲ್ಲದಿದ್ದರೂ, ವಿನ್ಸಂಟ್ ಪಾಪಣ್ಣ ಅವರನ್ನು ನಿರ್ದೇಶಕರಾಗಿ ಮಾಡಿದ್ದಾರೆ. ಇವರಿಬ್ಬರೂ ಸೇರಿ ತಾವೇ ಮಿಷನ್ ಆಸ್ಪತ್ರೆಯ ಪವರ್ ಆಫ್ ಅಟಾರ್ನಿ ಎಂದು ಬಿಂಬಿಸಿಕೊಂಡು ಆಸ್ಪತ್ರೆಯ ಆವರಣದಲ್ಲಿರುವ ಕ್ಯಾಂಟೀನ್ ಅನ್ನು 10 ಲಕ್ಷ ರೂ.ಗಳಿಗೆ ಹಾಗೂ ಫಾರ್ಮಸಿಯನ್ನು 1 ಕೋಟಿ ರೂ.ಗಳಿಗೆ ಹೊರ ಗುತ್ತಿಗೆ ನೀಡಿದ್ದಾರೆ ಎಂದು ಸುಂದರ್ ಪ್ರೇಮ್‌ಕುಮಾರ್ ಸಲ್ಲಿಸಿದ ದೂರಿನನ್ವಯ ನ್ಯಾಯಾಲಯದ ಆದೇಶದ ಮೇರೆಗೆ ಮಂಡಿ ಠಾಣೆ ಪೊಲೀಸರು ಭಾರತೀಯ ದಂಡ ಸಂಹಿತೆ 408, 409, 415, 418, 420, 34ರಡಿ ಪ್ರಕರಣ ದಾಖ ಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.




ಮೈಸೂರು ವಿಜಯನಗರ 4ನೇ ಹಂತದಲ್ಲಿರುವ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ನೂತನ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಕೇಂದ್ರದ ಕೊಠಡಿಗಳನ್ನು ಶಾಸಕ ಜಿ.ಟಿ.ದೇವೇಗೌಡ ಉದ್ಘಾಟಿಸಿದರು. ಕಾಲೇಜಿನ ಪ್ರಾಂಶುಪಾಲ ಡಾ.ಜಿ.ಹೆಚ್. ಮಹದೇವಸ್ವಾಮಿ, ಗ್ರಂಥಪಾಲಕಿ ಡಾ.ಹೆಚ್.ಆರ್.ರೇಖಾ, ಡಾ.ಎಂ.ಎಸ್.ಅನಿತ, ಕೆ.ಸಿ.ಭದ್ರಗಿರಿಯಯ್ಯ, ಕಾಲೇಜು ಅಭಿವೃದ್ಧಿ ಸಮಿತಿ ಅಧ್ಯಕ್ಷರು, ಅಧ್ಯಾಪಕರು, ಅತಿಥಿ ಉಪನ್ಯಾಸಕರು, ಕಚೇರಿ ಸಿಬ್ಬಂದಿ ಹಾಗೂ ವಿದ್ಯಾರ್ಥಿನಿಯರು ಇದ್ದರು.

ಪೂರ್ಣಿಮಾಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ.ಹೆಚ್.ಸಿ.ಹೊನ್ನಪ್ಪ ಅವರ ಮಾರ್ಗದರ್ಶನದಲ್ಲಿ ಪೂರ್ಣಿಮಾ ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧಿಸಿ ಮಂಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.1.2023 ಗುರುವಾರ, ಮಳೆ ನಕ್ಷತ್ರ: ಉತ್ತರಾಷಾಢ, 11.01.2022ರಿಂದ 23.01.2023 ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಎಸ್‌ಡಿಎಂ–ಐಎಂಡಿ :** ನವಯುಗದ ಮಾರುಕಟ್ಟೆ ಕುರಿತು ಅಂತರರಾಷ್ಟ್ರೀಯ ಸಮ್ಮೇಳನ, ಮುಖ್ಯ ಭಾಷಣ : ಸ್ಟ್ರಾಟೆಜಿಕ್ ಪ್ರಾಜೆಕ್ಟ್ ಟಾಟಾ ಟೆಕ್ನಾಲಜೀಸ್ ಲಿಮಿಟೆಡ್‌ನ ಮುಖ್ಯ ಇಂಜಿನಿಯರ್ ರಬೀಂದ್ರ, ಉಪಸ್ಥಿತರು : ಡಾ.ಅರವಿಂದ್ ಮಹಾಜನ್, ಸ್ಥಳ: ಎಸ್‌ಡಿಎಂ–ಐಎಂಡಿ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಎಂ.ಎ.ಎಸ್.ವಿ.ಎಸ್. ಗುರುಕುಲ ಪಿಯು ಕಾಲೇಜು:** ಕಾಲೇಜು ವಾರ್ಷಿಕೋತ್ಸವ, ಅಧ್ಯಕ್ಷತೆ: ಮಲ್ಲಾಡಿಹಳ್ಳಿ ಅನಾಥ ಸೇವಾಶ್ರಮ ವಿಶ್ವಸ್ಥ ಸಮಿತಿ ಉಪಾಧ್ಯಕ್ಷ ಪ್ರೊ.ರಾಘವೇಂದ್ರ ಬಿ.ಪಾಟೀಲ, ಉದ್ಘಾಟನೆ: ಕಾರ್ಯದರ್ಶಿ ಎಸ್.ಕೆ.ಬಸವರಾಜನ್, ವಾರ್ಷಿಕ ಸಂಚಿಕೆ ಬಿಡುಗಡೆ: ಪ್ರೊ. ಕೆ.ಇ. ರಾಧಾಕೃಷ್ಣ, ಸ್ಥಳ: ಕಾಲೇಜು ಆವರಣ, ಕುವೆಂಪುನಗರ, ಬೆಳಗ್ಗೆ 10.30ಕ್ಕೆ.

■ **ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯ, ಜಿಲ್ಲಾಡಳಿತ, ನೆಹರು ಯುವ ಕೇಂದ್ರ ಸಂಘಟನೆ, ಮೈಸೂರು ವಿಶ್ವವಿದ್ಯಾನಿಲಯ :** 14ನೇ ಬುಡಕಟ್ಟು ಯುವ ವಿನಿಮಯ ಕಾರ್ಯಕ್ರಮ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ : ಶಾಸಕ ಎಲ್. ನಾಗೇಂದ್ರ, ಕಿರುಹೊತ್ತಿಗೆ ಬಿಡುಗಡೆ : ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಎಂ. ಶಿವಣ್ಣ, ಮುಖ್ಯ ಅತಿಥಿಗಳು : ಮೇಯರ್ ಶಿವಕುಮಾರ್, ಸಂಸದರಾದ ವಿ. ಶ್ರೀನಿವಾಸ ಪ್ರಸಾದ್, ಪ್ರತಾಪ್ ಸಿಂಹ, ಸುಮಲತಾ ಅಂಬರೀಷ್, ಅತಿಥಿಗಳು : ಶಾಸಕರಾದ ತನ್ವೀರ್ ಸೇಠ್, ಸಾ.ರಾ. ಮಹೇಶ್, ಮರಿತಿಬ್ಬೇಗೌಡ, ಜಿ.ಟಿ. ದೇವೇಗೌಡ, ಕೆ. ಮಹದೇವ್, ಎಸ್.ಎ. ರಾಮದಾಸ್, ಹರ್ಷವರ್ಧನ್, ಡಾ. ಯತೀಂದ್ರ, ಎಂ. ಅಶ್ವಿನ್‌ಕುಮಾರ್, ಅನಿಲ್ ಚಿಕ್ಕಮಾದು, ಹೆಚ್.ಪಿ. ಮಂಜುನಾಥ್, ಹೆಚ್. ವಿಶ್ವನಾಥ್, ಡಾ. ಡಿ. ತಿಮ್ಮಯ್ಯ ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ಸ್ಥಳ: ಲಲಿತ ಕಲಾ ಕಾಲೇಜು ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಶ್ರೀ ನಟರಾಜ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ :** ವಾರ್ಷಿಕೋತ್ಸವ ಸಮಾರಂಭ, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಮುಖ್ಯ ಅತಿಥಿಗಳು: ಬಿಇಒ, ದಕ್ಷಿಣ ವಲಯ ಆರ್.ರಾಮಾರಾಧ್ಯ, ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಬಹುಮಾನ ವಿತರಣೆ: ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್, ಸರ್ಕಲ್ ಇನ್ಸ್‌ಪೆಕ್ಟರ್ ಮಹೇಶ್, ಸ್ಥಳ: ಶ್ರೀ ನಟರಾಜ ಸಭಾಂಗಣ, ಮಧ್ಯಾಹ್ನ 3ಕ್ಕೆ.

■ **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಶ್ರೀ ಕನಕದಾಸ ನೌಕರರ ಸಂಘ :** ಕನಕದಾಸರ 535ನೇ ಜಯಂತ್ಯೋತ್ಸವ, ಉದ್ಘಾಟನೆ : ಶಾಸಕ ಡಾ. ಯತೀಂದ್ರ, ಅಧ್ಯಕ್ಷತೆ: ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್, ಕನಕದಾಸರ ಭಾವಚಿತ್ರ ಅನಾವರಣ : ಶಾಸಕ ಅನಿಲ್ ಚಿಕ್ಕಮಾದು, ಪುಷ್ಪಾರ್ಚನೆ : ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಕ್ಯಾಲೆಂಡರ್ ಬಿಡುಗಡೆ : ಮಾಜಿ ಜಿಪಂ ಅಧ್ಯಕ್ಷ ಕೆ. ಮರೀಗೌಡ, ಸ್ಥಳ: ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪ, ಕುವೆಂಪುನಗರ, ಸಂಜೆ 4ಕ್ಕೆ.

■ **ಶ್ರೀ ನಾದಬ್ರಹ್ಮ ಸಂಗೀತ ಸಭಾ :** ವಿದುಷಿ ಲಾಲ್‌ಗುಡಿ ರಾಜಲಕ್ಷ್ಮಿ ಅವರಿಗೆ ಧನುರ್ ವೈಣಿಕಬ್ರಹ್ಮ ಪದವಿ ಪ್ರದಾನ, ವಿದುಷಿ ಸಿಂಧು ಸುಚೇತನ್ ಮತ್ತು ವಿದುಷಿ ಹೆಚ್.ಎಂ. ಸ್ಮಿತಾ ಅವರಿಂದ ಕರ್ನಾಟಕ ಶಾಸ್ತ್ರೀಯ ದ್ವಂದ್ವ ಪಿಟೀಲು ವಾದನ, ವಿದ್ವಾನ್ ತುಮಕೂರು ಬಿ. ರವಿಶಂಕರ್–ಮೃದಂಗ, ವಿದ್ವಾನ್ ಜಿ. ಗುರುಪ್ರಸನ್ನ–ಖಂಜಿರ, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಮಾನವೀಯತೆಯ ಪ್ರಯೋಜನಕ್ಕಾಗಿ ವೈರಸ್–ಎಂಜಿನಿಯರಿಂಗ್ ವೈರಸ್‌ಗಳನ್ನು ಪಳಗಿಸುವುದು ಕುರಿತು ಡಾ. ಶ್ರೀನಿವಾಸ್ ಎನ್. ಕುಮಾರ್ ಅವರಿಂದ ತಾಂತ್ರಿಕ ಉಪನ್ಯಾಸ, ಅಧ್ಯಕ್ಷತೆ : ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಸ್ಥಳ: ಎಸ್.ಪಿ. ಭಟ್ ಹಾಲ್, ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಅಧ್ಯಾತ್ಮ ರಾಮಾಯಣ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಚಿನ್ಮಯ ಮಿಷನ್ :** ಜ್ಞಾನ ಯಜ್ಞದ ಅಂಗವಾಗಿ ಸ್ವಾಮೀಜಿಯವರಿಂದ "ನಾರದ ಭಕ್ತಿಸೂತ್ರ" ಕುರಿತು ಸಂಜೆ 6:30ರಿಂದ 8ರವರೆಗೆ ಕನ್ನಡದಲ್ಲಿ ಪ್ರವಚನ, ಸಂಜೆ 6ರಿಂದ 6:30ರವರೆಗೆ ಸಾಮೂಹಿಕ ವಿಷ್ಣು ಸಹಸ್ರನಾಮ ಪಾರಾಯಣ, ಸ್ಥಳ: ಚಿನ್ಮಯ ಮಿಷನ್ ಕೇಂದ್ರ ಶ್ರೀ ಗುರುದೇವ ದತ್ತ ಸನ್ನಿಧಿ, ಗೋಕುಲಂ.

■ **ಅಭಿಯಂತರರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು :** 30ನೇ ವಾರ್ಷಿಕೋತ್ಸವ ಸಂಭ್ರಮದ ಅಂಗವಾಗಿ ರಾಷ್ಟ್ರೀಯ ರಂಗ ಉತ್ಸವ, ಮುಂಬೈನ ಅಭಿನಯ ಕಲ್ಯಾಣ ಕಲಾತಂಡದಿಂದ ಸಾಮ್ರಾಜ್ಯಂ (ಹಿಂದಿ) ನಾಟಕ ಪ್ರದರ್ಶನ, ರಚನೆ : ಜಗದೀಶ್ ಪವಾರ್, ನಿರ್ದೇಶನ : ಅಭಿಜಿತ್ ಜುಂಜರ್‌ರಾವ್, ಸ್ಥಳ: ಕಿರುರಂಗ ಮಂದಿರ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ, ಗಾಯನ– ಗೀತಾವೈ ಪುಟ್ಟಿ, ಕೆ.ಪಿ. ರೇವತಿ, ವ್ಯಾಖ್ಯಾನ– ಡಾ.ಎನ್.ಎಸ್. ತಾರಾನಾಥ್, 8.30 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 10.00 ಡಾ. ಎಸ್. ವಿಜಯರಾಘವನ್–ವಿಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30ದೇವರನಾಮ, 1.20 ಭಾವಗೀತೆಗಳು–ರೂಪರಾವ್ ಮತ್ತು ದೀಪಾರಾವ್, 4.00 ಜನಪದ ಸಂಗೀತ–ಮಾಯಮ್ಮ ಮತ್ತು ತಂಡ, 6.50 ಕೃಷಿರಂಗ–ಕಿಸಾನ್‌ವಾಣಿ, 8.00 ಯುವವಾಣಿ–ಹಲೋ ಯುವವಾಣಿ–ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ವಿಶೇಷ ಕಾರ್ಯಕ್ರಮ. ನಡೆಸಿಕೊಡುತ್ತಾರೆ ನಿವೇದಿತಾ ಹೆಚ್., 9.30 ಕನ್ನಡ ಭಾರತಿ, 10.00 ನಾಟಕ, 10.30 ಸವಿನೆನಪು

ಸುತ್ತೂರು ಜಾತ್ರಾ ಮಹೋತ್ಸವ

ಕರ್ತೃ ಗದ್ದುಗೆಯಲ್ಲಿ ಪೂಜಾ ಉತ್ಸವ

ಬೆಳಗ್ಗೆ 4ಕ್ಕೆ ಮಹಾರುದ್ರಾಭಿಷೇಕ, ಲಕ್ಷ ಬಿಲ್ವಾರ್ಚನೆ, ಮಹಾಮಂಗಳಾರತಿ, ಬೆಳ್ಳಿ ರಥ ಪ್ರಾಕಾರೋತ್ಸವ, ಬೆಳಗ್ಗೆ 6.30ಕ್ಕೆ ಸುತ್ತೂರು ಸ್ನೇಹ ಸೌಹಾರ್ದ ಶಾಂತಿ ಪಥ ಸಂಚಲನ, ಬೆಳಗ್ಗೆ 8.30ಕ್ಕೆ ಷಟ್‌ಸ್ಥಲ ಧ್ವಜಾರೋಹಣ : ಕನಕಪುರ ಶ್ರೀ ದೇಗುಲ ಮಠದ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮಿಗಳು; ಧರ್ಮ ಸಂದೇಶ : ಶ್ರೀ ಸಾಲೂರು ಬೃಹನ್ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮಿಗಳು, ಬೆಳಗ್ಗೆ 9ಕ್ಕೆ ಶ್ರೀ ಮಠದಿಂದ ಕರ್ತೃ ಗದ್ದುಗೆಗೆ ಹಾಲರವಿ ಉತ್ಸವ (ಸಹಸ್ರ ಕುಂಭೋತ್ಸವ), ಶ್ರೀ ಸೋಮೇಶ್ವರ ಉತ್ಸವ.

ಸಾಮೂಹಿಕ ವಿವಾಹ

ಸಮ್ಮುಖ: ಶ್ರೀ ವಾಸವಿ ಮಠದ ಶ್ರೀ ಸಚ್ಚಿದಾನಂದ ಸರಸ್ವತೀ ಸ್ವಾಮೀಜಿ, ಶ್ರೀ ಗುರುಶಾಂತೇಶ್ವರ ಸಂಸ್ಥಾನ ಮಠದ ಶ್ರೀ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಉದ್ಘಾಟನೆ : ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ : ಮಾಜಿ ಸಚಿವ ಡಾ. ಶ್ಯಾಮನೂರು ಶಿವಶಂಕರಪ್ಪ, ಪರಿಕರ ವಿತರಣೆ : ಶಾಸಕ ಡಾ. ಜಿ. ಪರಮೇಶ್ವರ್, ಪ್ರತಿಜ್ಞಾವಿಧಿ ಬೋಧನೆ : ಕಂದಾಯ ಸಚಿವ ಆರ್. ಅಶೋಕ್, ಮಾಂಗಲ್ಯ ವಿತರಣೆ : ಲೋಕೋಪಯೋಗಿ ಸಚಿವ ಸಿ.ಸಿ. ಪಾಟೀಲ್, ಪ್ರಮಾಣ ಪತ್ರ ವಿತರಣೆ : ಸಹಕಾರ ಸಚಿವ ಎಸ್.ಟಿ. ಸೋಮಶೇಖರ್, ಮುಖ್ಯ ಅತಿಥಿಗಳು : ಶಾಸಕ ಎಸ್.ಎ. ರಾಮದಾಸ್, ಮಾಜಿ ಸಚಿವ ಅಲ್ಲಂ ವೀರಭದ್ರಪ್ಪ, ಜೆ.ಕೆ.ಟೈರ್ಸ್ ಉಪಾಧ್ಯಕ್ಷ ಪುಪ್ಪು ಈಶ್ವರರಾವ್, ಉದ್ಯಮಿಗಳಾದ ಶ್ರೀಮತಿ ಭಾರತೀ ರೆಡ್ಡಿ, ತಿರುಮಲೈ ತಂಬು

ರಾಜ್ಯ ಮಟ್ಟದ ಭಜನಾ ಮೇಳ ಹಾಗೂ ಕಟ್ಟಡಗಳ ಉದ್ಘಾಟನೆ

ಸಮ್ಮುಖ : ಡಾ. ಶ್ರೀ ಅಲ್ಲಮಪ್ರಭು ಸ್ವಾಮೀಜಿ, ಶ್ರೀ ಮಹಾಂತ ಸ್ವಾಮೀಜಿ, ಅಧ್ಯಕ್ಷತೆ : ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಭಜನಾ ಮೇಳ : ಇಂಧನ ಸಚಿವ ವಿ. ಸುನಿಲ್ ಕುಮಾರ್, ಮುಖ್ಯ ಅತಿಥಿಗಳು : ಸಚಿವರಾದ ಜೆ.ಸಿ. ಮಾಧುಸ್ವಾಮಿ, ಡಾ. ಸಿ.ಎನ್. ಅಶ್ವಥ್‌ನಾರಾಯಣ್, ಶಾಸಕರಾದ ಸಿ. ಪುಟ್ಟರಂಗಶೆಟ್ಟಿ, ಮರಿತಿಬ್ಬೇಗೌಡ, ಹೆಚ್.ಕೆ. ಕುಮಾರಸ್ವಾಮಿ, ಅರವಿಂದ ಬೆಲ್ಲದ, ಆರ್. ನರೇಂದ್ರ, ಮಾಜಿ ಸಚಿವ ಎಂ. ಶಿವಣ್ಣ, ಡಾ. ಪ್ರಕಾಶರಾವ್ ವಿ. ವೆಲಗಪುಡಿ.

ಸಾಂಸ್ಕೃತಿಕ ಕಾರ್ಯಕ್ರಮಗಳು

ಗದ್ದುಗೆ ಆವರಣ: ಬೆಳಗ್ಗೆ 8ಕ್ಕೆ ನಾದಸ್ವರ, ಬೆಳಗ್ಗೆ 9ಕ್ಕೆ ಶ್ರೀಕಾಂತ ಚಿಮಲ್ ಮತ್ತು ತಂಡದಿಂದ ಸುಗಮ ಸಂಗೀತ, ಬೆಳಗ್ಗೆ 10.30ಕ್ಕೆ ಬೆಂಗಳೂರಿನ ಕೆ.ಎಸ್. ಮಂಜುನಾಥ್ ಅವರಿಂದ ಜಾನಪದ ಮತ್ತು ಸುಗಮ ಸಂಗೀತ, ಮಧ್ಯಾಹ್ನ 12ಕ್ಕೆ ಜಾದೂಗಾರ್ ಗುರುಸ್ವಾಮಿ ಅವರಿಂದ ಜಾದೂ ಪ್ರದರ್ಶನ, ಮಧ್ಯಾಹ್ನ 2ಕ್ಕೆ ಎನ್.ಟಿ. ಮೂರ್ತಾಚಾರ್ಯ ಅವರಿಂದ ಸೂತ್ರದ ಗೊಂಬೆ ಆಟ, ರಾತ್ರಿ 7ಕ್ಕೆ ಶ್ರೀಮತಿ ಸೀತಾ ಡಿ. ಛಪ್ಪರ ಅವರಿಂದ ವಚನ ನೃತ್ಯರೂಪಕ, ರಾ. 8ಕ್ಕೆ ವಿದುಷಿ ರಂಜಿತಾ ಸೋಮಶೇಖರ್ ಅವರಿಂದ ಭರತನಾಟ್ಯ, ರಾ. 9ಕ್ಕೆ ಡಾ. ಮಳವಳ್ಳಿ ಮಹದೇವಸ್ವಾಮಿ ಮತ್ತು ತಂಡದಿಂದ ಜನಪದ ಗೀತೆ, ರಾತ್ರಿ 10ಕ್ಕೆ ನಾಟಕಗಳು : ಚುಂಚನಹಳ್ಳಿ ಶ್ರೀ ಜನಸೇವಾ ಕಲಾ ಬಳಗದಿಂದ ಶ್ರೀ ಜಗಜ್ಯೋತಿ ಬಸವೇಶ್ವರ.

ಹಿರಿಯರ ಮನೆ ಆವರಣ : ಶ್ರೀ ಉಮಾಮಹೇಶ್ವರಿ ಹಿಂದುಳಿದ ರಂಗಭೂಮಿ ಕಲಾವಿದರಿಂದ ಸತ್ಯಮೂರ್ತಿ ಅಥವಾ ಮಾನವೇಂದ್ರನ ಗರ್ವಭಂಗ.

ಶ್ರೀ ಸಿದ್ದನಂಜ ದೇಶಿಕೇಂದ್ರ ಮಂಗಳ ಮಂಟಪ : ಶ್ರೀ ಮಲ್ಲಿಕಾರ್ಜುನ ಕಲಾಸಂಘದಿಂದ ದಕ್ಷಯಜ್ಞ

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪಕ್ಕದ ಆವರಣ : ಶ್ರೀ ವಿಘ್ನೇಶ್ವರ ಸಾಂಸ್ಕೃತಿಕ ಚಾರಿಟಬಲ್ ಟ್ರಸ್ಟ್ ಅವರಿಂದ ದಾನಶೂರ ಕರ್ಣ.

ಮೈಸೂರಲ್ಲಿ ಮೃಗಾಲಯಗಳ ನಿರ್ದೇಶಕರ ರಾಷ್ಟ್ರೀಯ ಸಮ್ಮೇಳನ

ವನ್ಯಜೀವಿ, ಅರಣ್ಯ ಸಂರಕ್ಷಣೆಯತ್ತ ಯುವ ಜನರ ಸೆಳೆಯಲು ಯೋಜನೆ

● ಅರಣ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ಮಾಹಿತಿ ● ಮೈಸೂರು ಮೃಗಾಲಯ ಉತ್ತಮ ನಿರ್ವಹಣೆಗೆ ಪ್ರಶಂಸೆ

ಮೈಸೂರು, ಜ.18(ಎಂಟಿವೈ)- ವನ್ಯಜೀವಿ ಹಾಗೂ ಅರಣ್ಯ ಸಂರಕ್ಷಣೆ ಕುರಿತಂತೆ ಜಾಗೃತಿ ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿರುವ ಮೃಗಾಲಯಗಳ ಸ್ಥಿತಿಗತಿ ಸುಧಾರಿಸಿದ್ದು, ಹೈದರಾಬಾದ್-ಕರ್ನಾಟಕ ಭಾಗದಲ್ಲಿ ಸಿಎಸ್‌ಆರ್ ಫಂಡ್ ಕ್ರೋಢೀಕರಿಸಿ ಹೊಸ ಮೃಗಾಲಯ ಸ್ಥಾಪನೆಗೆ ಉದ್ದೇಶಿಸಲಾಗಿದೆ ಎಂದು ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್ ತಿಳಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಬುಧವಾರ ಕರ್ನಾಟಕ ಮೃಗಾಲಯ ಪ್ರಾಧಿಕಾರ ಹಾಗೂ ಮೈಸೂರು ಮೃಗಾಲಯದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಎರಡು ದಿನಗಳ 'ಮೃಗಾಲಯಗಳ ನಿರ್ದೇಶಕರ ರಾಷ್ಟ್ರೀಯ ಸಮ್ಮೇಳನ'ದಲ್ಲಿ ಮಾತನಾಡಿದ ಅವರು, 19ನೇ ಶತಮಾನದಲ್ಲಿ ಆರಂಭವಾದ ಮೃಗಾಲಯಗಳಲ್ಲಿ ಪ್ರಾಣಿಗಳನ್ನು ಬೋನ್‌ನಲ್ಲಿ ಕೂಡಿ ಹಾಕಲಾಗಿತ್ತು. 20ನೇ ಶತಮಾನದಲ್ಲಿ ಇಂತಹ ಮೃಗಾಲಯಗಳ ಪರಿಸ್ಥಿತಿ ಸುಧಾರಿಸಿವೆ. ಪ್ರಾಣಿ-ಪಕ್ಷಿಗಳನ್ನು ವೈಜ್ಞಾನಿಕ ರೀತಿಯಲ್ಲಿ ಪಾಲನೆ, ಆರೈಕೆ ಮಾಡಲಾಗುತ್ತಿದೆ. ಮೃಗಾಲಯಗಳು ಕೇವಲ ಮನರಂಜನೆಯ ತಾಣವಾಗದೇ ಜಾಗೃತಿ ಮೂಡಿಸುವ ಕೇಂದ್ರವಾಗಿಯೂ ಮಾರ್ಪಟ್ಟಿವೆ. ವನ್ಯಜೀವಿಗಳ ಸಂರಕ್ಷಣೆ, ಅರಣ್ಯ ಸಂರಕ್ಷಣೆ ಸೇರಿದಂತೆ ಪರಿಸರ ಉಳಿಸುವ ಕುರಿತಂತೆ ಜಾಗೃತಿ ಮೂಡಿಸುತ್ತಿವೆ ಎಂದರು.

ಕರ್ನಾಟಕದಲ್ಲಿ ಮೈಸೂರು ಮೃಗಾಲಯ ಸೇರಿದಂತೆ 9 ಮೃಗಾಲಯಗಳಿವೆ. ಹೈದರಾಬಾದ್-ಕರ್ನಾಟಕದಲ್ಲಿ ಮತ್ತೊಂದು ಮೃಗಾಲಯ ಸ್ಥಾಪನೆಗೆ ಚಿಂತನೆ ನಡೆಸಲಾಗಿದೆ. ಆ ಭಾಗದಲ್ಲಿ ಕರ್ನಾಟಕ ಮೃಗಾಲಯ ಪ್ರಾಧಿಕಾರವೂ ಸಿಎಸ್‌ಆರ್ ಫಂಡ್ ಕ್ರೋಢೀಕರಿಸಿ ಹೊಸ ಮೃಗಾಲಯ ಸ್ಥಾಪಿಸಲು ಯೋಜನೆ ರೂಪಿಸಲಾಗಿದೆ. ಕೆಲ ವರ್ಷದ ಹಿಂದೆ ಬೆಳಗಾವಿಯಲ್ಲಿ ಹೊಸದಾಗಿ ಆರಂಭಿಸಲಾಗಿರುವ ಮೃಗಾಲಯಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ರಾಷ್ಟ್ರೀಯ ಹೆದ್ದಾರಿ ಸಮೀಪವೇ ಇರುವುದರಿಂದ ಮೃಗಾಲಯಕ್ಕೆ ಭೇಟಿ ನೀಡುವವರ ಸಂಖ್ಯೆಯೂ ಹೆಚ್ಚಾಗಿದೆ. ಹಾಗಾಗಿ ಹೈದರಾಬಾದ್-ಕರ್ನಾಟಕದಲ್ಲಿ ಹೊಸ ಮೃಗಾಲಯಗಳ ಸ್ಥಾಪಿಸಲು ಉದ್ದೇಶಿಸಲಾಗಿದೆ. ಕೇಂದ್ರ ಸರ್ಕಾರ ಮತ್ತು ಕೇಂದ್ರ ಮೃಗಾಲಯ ಪ್ರಾಧಿಕಾರ ಅಗತ್ಯ ಸಂಪನ್ಮೂಲ ಒದಗಿಸಿದರೆ



ರಾಜ್ಯದಲ್ಲಿ ಹೊಸ ಮೃಗಾಲಯಗಳನ್ನು ಆರಂಭಿಸಲು ಅನುಕೂಲವಾಗಲಿದೆ ಎಂದು ಹೇಳಿದರು.

ಕೇಂದ್ರ ಮೃಗಾಲಯ ಪ್ರಾಧಿಕಾರದ ನಿಯಮಾವಳಿ 1992ರಂತೆ ದೇಶದಲ್ಲಿರುವ ಮೃಗಾಲಯಗಳು ರೀಕ್ರೀಯೇಷನ್, ಸರ್ವಿಂಗ್ ಎಜುಕೇಷನಲ್ ಪ್ರೋಗ್ರಾಂ ಮೂಲಕ ಮಹತ್ತರ ಸೇವೆ ಕಲ್ಪಿಸುತ್ತಿವೆ. ವನ್ಯಜೀವಿ ಸಂರಕ್ಷಣೆ ವಿಚಾರದಿಂದ ದೂರವುಳಿದಿರುವ, ಟಿವಿ, ಮೊಬೈಲ್ ಫೋನ್‌ನಲ್ಲೇ ಮುಳುಗಿರುವ ವಿದ್ಯಾರ್ಥಿಗಳು ಹಾಗೂ ಯುವಜನರನ್ನು ಮೃಗಾಲಯಗಳತ್ತ ಸೆಳೆಯುವ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸಲಾಗುತ್ತಿದೆ. ವನ್ಯಜೀವಿ ಸಂರಕ್ಷಣೆ ಬಗ್ಗೆ ಜಾಗೃತಿ ಮೂಡಿಸುವ ಪ್ರಯತ್ನ ಮಾಡಲಾಗುತ್ತಿದೆ. ಫ್ಲೋರಾ ಅಂಡ್ ಫನ್ನಗಳ ಬಗ್ಗೆ ಮಾಹಿತಿ ಒದಗಿಸಲಾಗುತ್ತಿದೆ. ಕರ್ನಾಟಕದಲ್ಲಿ ಮೃಗಾಲಯಗಳ ನಿರ್ವಹಣೆಯಲ್ಲಿ ಉತ್ತಮವಾದ ಮೆಕ್ಯಾನಿಸಂ ಅಳವಡಿಸಿಕೊಳ್ಳಲಾಗಿದೆ. ಅಧ್ಯಯನಕ್ಕೆ ಹೆಚ್ಚು ಆದ್ಯತೆ ನೀಡಲಾಗುತ್ತಿದೆ. ಹೆಚ್ಚುವರಿ ಪ್ರಾಣಿಗಳನ್ನು ಮತ್ತೊಂದು ಮೃಗಾಲಯಕ್ಕೆ ರವಾನಿಸುವ ಮೂಲಕ ಸಾರ್ಥಕತೆ ಮೆರೆಯುತ್ತಿದೆ ಎಂದು ಶ್ಲಾಘಿಸಿದರು.

ಮಾನವ ಮತ್ತು ವನ್ಯಜೀವಿ ಸಂಘರ್ಷದಲ್ಲಿ ರಕ್ಷಿಸಲ್ಪಟ್ಟ ಪ್ರಾಣಿಗಳ ಆರೈಕೆಗಾಗಿ ಕರ್ನಾಟಕದಲ್ಲಿ ಇನ್ನಷ್ಟು ರೆಸ್ಕ್ಯೂ ಸೆಂಟರ್ ಆರಂಭಿಸಲು ಉದ್ದೇಶಿಸಲಾಗಿದೆ. ಅದಕ್ಕಾಗಿ ಆರ್ಥಿಕ ನೆರವಿನ ಅಗತ್ಯವಿದ್ದು, ಅನುದಾನಕ್ಕಾಗಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದರು. ಕರ್ನಾಟಕ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಪಿ.ರವಿ ಮಾತನಾಡಿ, ಅಭಿವೃದ್ಧಿ ಹೊಂದಿದಂತಹ ದೇಶದಲ್ಲಿ ಶೇ.10ರಷ್ಟು ಜನ ಮೃಗಾಲಯಗಳಿಗೆ ಭೇಟಿ ನೀಡುತ್ತಾರೆ. ನಮ್ಮ ದೇಶದಲ್ಲಿ ಸರಾಸರಿ 90 ಮಿಲಿಯನ್, ಹಾಗೆಂಯೇ ಕರ್ನಾಟಕದಲ್ಲಿ ಈ ವರ್ಷ 6.2 ಮಿಲಿಯನ್ ಪ್ರವಾಸಿಗರು ಮೃಗಾಲಯಗಳಿಗೆ ಭೇಟಿ ನೀಡಿದ್ದಾರೆ. ದೇಶದಲ್ಲಿ 766 ಜಿಲ್ಲೆಗಳಿದ್ದು, 162 ಮೃಗಾಲಯಗಳಿವೆ. ಮೃಗಾಲಯಗಳು ವನ್ಯಸಂಪತ್ತಿನ ರಕ್ಷಣೆಯ ಮಹತ್ವದ ಬಗ್ಗೆ ಶಿಕ್ಷಣ ನೀಡುತ್ತಾ ಬಂದಿವೆ. ಮೈಸೂರು ಮೃಗಾಲಯ ಉತ್ತಮ ಸಾಧನೆ ಮಾಡಿದೆ. ಅಗತ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರಾಣಿಗಳನ್ನು ಸುರಕ್ಷಿತ ಪ್ರದೇಶದಲ್ಲಿ ಪುನರ್ವಸತಿ ಕಲ್ಪಿಸಲಾಗಿದೆ. ಮೈಸೂರು ಮೃಗಾಲಯದಿಂದ ಅರಬ್ಬಿತಿಟ್ಟಿಗೆ ಈ ಹಿಂದೆ ಜಿಂಕೆಗಳನ್ನು ಬಿಡಲಾಗಿತ್ತು. ಈಗ ಆ ಭಾಗದಲ್ಲಿ ನಾಲ್ಕು ತಂಡಗಳಲ್ಲಿ ಕಾಡು ನಾಯಿಗಳ ಗುಂಪು ನೆಲೆಕಂಡಿವೆ. ಇದರಿಂದ ಸಸ್ಯಹಾರಿ ಪ್ರಾಣಿಗಳ ಸಂಖ್ಯೆ ವೃದ್ಧಿಯಾದರೆ, ತಾನಾಗಿಯೇ ಹುಲಿ, ಚಿರತೆ ಸೇರಿದಂತೆ ಮಾಂಸಹಾರಿ ಪ್ರಾಣಿಗಳ ಸಂಖ್ಯೆಯಲ್ಲಿ ಸುಧಾರಣೆ ಕಾಣಬಹುದಾಗಿದೆ. ಅಲ್ಲದೆ ಕಾಳಿ ಹುಲಿ ಸಂರಕ್ಷಿತ ಪ್ರದೇಶಕ್ಕೂ ಸಾರಂಗಗಳನ್ನು ಬಿಡಲಾಗಿದೆ. ವನ್ಯಜೀವಿಗಳ ಸಂರಕ್ಷಣೆಯಲ್ಲಿ ಮೃಗಾಲಯಗಳ ಪಾತ್ರ ಬಹುಮುಖ್ಯ. ಇದು ಪ್ರಾಕ್ಟಿಕಲ್ ಆಗಿಯೂ ಯಶಸ್ವಿಯಾಗಿದೆ ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಮೇಯರ್ ಶಿವಕುಮಾರ್, ಪ್ರಾಧಿಕಾರದ ಸದಸ್ಯರಾದ ಗೋಕುಲ್ ಗೋವರ್ಧನ್ ಹಾಗೂ ಜ್ಯೋತಿ ರೇಚಣ್ಣ ಚಾಮರಾಜೇಂದ್ರ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಅಜಿತ ಕುಲಕರ್ಣಿ ಇದ್ದರು.

ಅಳಿವಿನಂಚಿನಲ್ಲಿರುವ ವನ್ಯಜೀವಿಗಳ ರಕ್ಷಿಸುವಲ್ಲಿ ಮೃಗಾಲಯಗಳದ್ದು ಪ್ರಧಾನ ಪಾತ್ರ

ಕೇಂದ್ರ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಂಜಯ್‌ಕುಮಾರ್ ಶುಕ್ಲಾ ಪ್ರಶಂಸೆ



ಮೈಸೂರು,ಜ.18(ಎಂಟಿವೈ)- ಅಳಿವಿನಂಚಿಗೆ ದೂಡಲ್ಪಟ್ಟಿದ್ದ ಅನೇಕ ಪ್ರಾಣಿಗಳ ಸಂತತಿ ರಕ್ಷಿಸುವ ನಿಟ್ಟಿನಲ್ಲಿ ಮೃಗಾಲಯಗಳು ಪ್ರಮುಖ ಪಾತ್ರ ವಹಿಸುತ್ತಿವೆ ಎಂದು ಕೇಂದ್ರ ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಸಂಜಯ್ ಕುಮಾರ್ ಶುಕ್ಲಾ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಮೃಗಾಲಯಗಳ ನಿರ್ದೇಶಕರ ರಾಷ್ಟ್ರೀಯ ಸಮ್ಮೇಳನದಲ್ಲಿ ಮಾತನಾಡಿದ ಅವರು, ಪ್ರಸ್ತುತ ಸಂದರ್ಭದಲ್ಲಿ ಪರಿಸರ ಸಂರಕ್ಷಣೆಯ ಅನಿವಾರ್ಯತೆ ನಮಗೆ ಎದುರಾಗಿದೆ. ಪರಿಸರ ಹಾನಿ, ಅರಣ್ಯ ನಾಶದಿಂದಾಗಿ ವನ್ಯಜೀವಿಗಳ ಸ್ಥಿತಿ ಅಪಾಯಕ್ಕೆ ಸಿಲುಕುವಂತಾಗಿದೆ. 1970ರಿಂದ 2016ರವರೆಗೂ ಸಾಕಷ್ಟು ಪ್ರಮಾಣದ ಅರಣ್ಯ ಸಂಪತ್ತನ್ನು ಕಳೆದುಕೊಂಡಿದ್ದೇವೆ. ಶೇ.68ರಷ್ಟು ವನ್ಯಜೀವಿಗಳ ಸಂಖ್ಯೆ ಕುಗ್ಗಿದೆ. ಹಲವು ಪ್ರಾಣಿ ಸಂಕುಲಗಳು ಅವನತಿ ಹಂತಕ್ಕೆ ತಲುಪಿವೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ದೇಶದಲ್ಲಿರುವ ಮೃಗಾಲಯಗಳು ವನ್ಯಜೀವಿಗಳ ಸಂರಕ್ಷಣೆ ಹಾಗೂ ಅಳಿವಿನಂಚಿನ ವನ್ಯಜೀವಿಗಳ ಸಂತಾನೋತ್ಪತ್ತಿಯಲ್ಲೂ ಯಶಸ್ಸು ಸಾಧಿಸಿದೆ ಎಂದರು. ಅರಣ್ಯ ಮತ್ತು ಪರಿಸರ ನಾಶ ನಮಗೆ ಸವಾಲಾಗಿ ಪರಿಣಮಿಸಿದೆ. ಮೃಗಾಲಯಗಳು ಕೇವಲ ಪ್ರಾಣಿಗಳನ್ನು ಪ್ರದರ್ಶನಕ್ಕೆ ಇಡುವುದಕ್ಕೆ ಮಾತ್ರವಲ್ಲದೆ, ಜೈವಿಕ ವೈವಿಧ್ಯತೆಯ ಸಂರಕ್ಷಣೆ, ಪ್ರಾಣಿ ಸಂಕುಲಗಳ ಸಂಶೋಧನೆಗಳ ಸ್ಥಳವೂ ಆಗಿದೆ. ನಮ್ಮ ದೇಶದಲ್ಲಿ ಮೃಗಾಲಯಗಳು ಉತ್ತಮ ಸ್ಥಿತಿಯಲ್ಲಿವೆ. ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮೃಗಾಲಯಗಳಿವೆ. ಆದರೆ ಇವುಗಳ ನಿರ್ವಹಣೆಗಾಗಿ ಆದಾಯ ಕ್ರೋಢೀಕರಿಸುವುದು ಸವಾಲಿನ ಕೆಲಸವಾಗಿದೆ. ಕರ್ನಾಟಕದಲ್ಲಿರುವ ಮೃಗಾಲಯಗಳಿಗೆ ಭೇಟಿ ನೀಡುವ ಪ್ರವಾಸಿಗರಿಂದ ವರ್ಷಕ್ಕೆ ನೂರು ಕೋಟಿ ರೂ. ಆದಾಯ ಬರುತ್ತಿದೆ. ಆದರೆ ನಾರ್ತ್ ಈಸ್ಟ್ ರಾಜ್ಯಗಳಲ್ಲಿ ಪರಿಸ್ಥಿತಿ ವಿಭಿನ್ನವಾಗಿದೆ. ಅಲ್ಲಿನ ಮೃಗಾಲಯಗಳಿಗೆ ಉತ್ತಮ ಸೌಲಭ್ಯ ಒದಗಿಸಬೇಕಾಗಿದ್ದು, ಅವುಗಳ ಪುನಶ್ಚೇತನಕ್ಕೆ ಕೈಗೊಳ್ಳಬೇಕಾದ ಕ್ರಮಗಳ ಕುರಿತಂತೆ ಸಮ್ಮೇಳನದಲ್ಲಿ ಸಲಹೆ-ಸೂಚನೆ ನೀಡುವಂತೆ ಕೋರಿದರು.

ಕೊವಿಡ್-19 ಸಂದರ್ಭದಲ್ಲಿ ಮೃಗಾಲಯಗಳಿಗೆ ಪ್ರವಾಸಿಗರು ಭೇಟಿ ನೀಡಲು ಸಾಧ್ಯವಾಗಿರಲಿಲ್ಲ. ಅಲ್ಲದೆ, ಪರಿಸರ ಸಂರಕ್ಷಣೆ ಕುರಿತಂತೆ ಯಾವುದೇ ಸಮ್ಮೇಳನಗಳೂ ನಡೆದಿರಲಿಲ್ಲ. ವರ್ಚುಯಲ್ ಸಭೆಗಳ ವೇಳೆ ಹೆಚ್ಚಿನ ಚರ್ಚೆಗೆ ಅವಕಾಶಗಳೂ ಆಗಿರಲಿಲ್ಲ. ಈಗ ಚಾಮರಾಜೇಂದ್ರ ಮೃಗಾಲಯದವರು ಮಹತ್ತರ ವಿಷಯಗಳ ಚರ್ಚೆಗೆ ವೇದಿಕೆ ಕಲ್ಪಿಸಿದ್ದಾರೆ. ಇದರಿಂದ ಉತ್ತಮ ಫಲಿತಾಂಶ ಬರುವ ನಿರೀಕ್ಷೆಯಿದೆ ಎಂದರು.

ಮಾನವ-ವನ್ಯಜೀವಿಗಳ ಸಂಘರ್ಷದಲ್ಲಿ ಸೆರೆ ಹಿಡಿದ ಪ್ರಾಣಿಗಳ ಬಗ್ಗೆಯೂ ಗಮನಹರಿಸಬೇಕು. ಸೆರೆ ಹಿಡಿದ ಪ್ರಾಣಿಗಳನ್ನು ಉತ್ತಮ ರೀತಿಯಲ್ಲಿ ನೋಡಿಕೊಳ್ಳುತ್ತಿಲ್ಲ ಎಂಬ ಆರೋಪ ಕೇಳಿಬರುತ್ತಿವೆ. ಸೆರೆ ಸಿಕ್ಕ ಪ್ರಾಣಿಗಳನ್ನು ಸ್ಥಳಾಂತರಿಸುವ ವೇಳೆ ಕೆಲವು ಪ್ರಾಣಿಗಳು ಸಾವನ್ನಪ್ಪಿದ ಉದಾಹರಣೆಗಳೂ ಇವೆ. ಮೈಸೂರಿನಲ್ಲಿ ಪ್ರಾಣಿಗಳ ಸಂರಕ್ಷಣಾ ಕೇಂದ್ರವಿದ್ದು, ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ. ಸಮ್ಮೇಳನದಲ್ಲಿ ಪಾಲ್ಗೊಂಡಿರುವ ವಿವಿಧ ಮೃಗಾಲಯಗಳ ನಿರ್ದೇಶಕರು ರಕ್ಷಣಾ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಬೇಕು. ಅಲ್ಲಿರುವ ಪ್ರಾಣಿಗಳ ವಿಹಾರಕ್ಕೆ ಅವಕಾಶವಿರಬೇಕು.

ಇದೇ ವೇಳೆ ಮೃಗಾಲಯದ ಹಿರಿಯ ಪಶು ವೈದ್ಯ ಡಾ.ಜೆ.ಕೆ.ಸುಂದರ್ ರಾಜ್ ಅವರ 'ಇಟ್ ಆಲ್ ಹ್ಯಾಪನ್ಡ್ ಅಟ್ ದಿ ಝೂ' ಪುಸ್ತಕ ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಡಾ. ಜೆ.ಕೆ.ಸುಂದರ್ ರಾಜ್ ಮಾತನಾಡಿ, ಈ ಹಿಂದೆ ಮೈಸೂರು ಮೃಗಾಲಯದಲ್ಲಿ ಜೇಸನ್, ಮ್ಯಾಸನ್, ಲಿಖಿತ ಹೆಸರಿನ ಮೂರು ಚಿಂಪಾಂಜಿಗಳಿದ್ದವು. ಅವುಗಳಲ್ಲಿ ಜೇಸನ್ ಪ್ರವಾಸಿಗರಿಗೆ ಅಚ್ಚುಮೆಚ್ಚಾಗಿತ್ತು. ಒಂದು ದಿನ ಅನಾರೋಗ್ಯಕ್ಕೀಡಾಗಿ, ಡಲ್ ಆಗಿತ್ತು. ಪರೀಕ್ಷೆ ಮಾಡಿದಾಗ ಅದು ಡಿಪ್ರೆಷನ್‌ಗೆ ಒಳಗಾಗಿತ್ತು. ಸೂಕ್ತ ಚಿಕಿತ್ಸೆ ನೀಡಿದಾಗ ಅದು ಸಹಜ ಸ್ಥಿತಿಗೆ ಮರಳಿತು. ಸೆರೆ ಹಿಡಿದ ಪ್ರಾಣಿಗಳಿಗೆ ಚಿಕಿತ್ಸೆ ನೀಡುವುದು ಸವಾಲಿನ ಕೆಲಸ ಎಂದು ತಮ್ಮ ಅನುಭವವನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಚೆನ್ನೈನ ಸ್ನೇಕ್ ಪಾರ್ಕ್ ನಿರ್ದೇಶಕ ಪೌಲ್‌ರಾಜ್ ಅವರ ಹಾವುಗಳ ಕುರಿತಾದ ಪುಸ್ತಕ ಬಿಡುಗಡೆ ಮಾಡಲಾಯಿತು. ಪುಸ್ತಕ ಕುರಿತಂತೆ ಪೌಲ್‌ರಾಜ್ ಮಾತನಾಡಿ, ವನ್ಯಜೀವಿ-ಮಾನವ ಸಂಘರ್ಷ ದೇಶದಾದ್ಯಂತ ನಡೆಯುತ್ತಲೇ ಇದೆ. ವರ್ಷಕ್ಕೆ ಹುಲಿ ದಾಳಿಗೆ 40-50 ಜನ ಬಲಿಯಾಗುತ್ತಿದ್ದರೆ, ಕಾಡಾನೆ ದಾಳಿಯಿಂದ 500ಕ್ಕೂ ಹೆಚ್ಚು ಮಂದಿ ಮೃತಪಡುತ್ತಿದ್ದಾರೆ. ಹಾಗೆಯೇ ಹಾವಿನ ಕಡಿತದಿಂದ 50 ಸಾವಿರ ಜನ ಸಾವನ್ನಪ್ಪುತ್ತಿದ್ದಾರೆ. ಇದರಿಂದ ಹಾವುಗಳ ಬಗ್ಗೆ ಅರಿವು ಮೂಡಿಸಲು ಕ್ರಮ ಕೈಗೊಳ್ಳಲಾಗಿದೆ. ತಮ್ಮ ಪುಸ್ತಕದಲ್ಲಿ ಕಾರ್ಟೂನ್ ಮೂಲಕ ಹಾವಿನ ಬಗ್ಗೆ ಸತ್ಯಾಂಶವನ್ನು ಜನರಿಗೆ ತಿಳಿಸುವ ಪ್ರಯತ್ನ ಮಾಡಲಾಗಿದೆ. ಹಾವುಗಳ ಮಹತ್ವ, ಅದರ ಬಗ್ಗೆ ಇರುವ ತಪ್ಪು ತಿಳುವಳಿಕೆ ಕುರಿತಂತೆ ಪುಸ್ತಕ ಬರೆಯಲಾಗಿದೆ. ಕನ್ನಡ, ಹಿಂದಿ, ಇಂಗ್ಲೀಷ್, ತೆಲುಗು, ಮಲೆಯಾಳದಲ್ಲೂ ಪುಸ್ತಕ ಹೊರ ತರಲಾಗಿದೆ ಎಂದರು.

ಇದೇ ವೇಳೆ ಮೇಯರ್ ಶಿವಕುಮಾರ್, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಂ.ಶಿವಕುಮಾರ್, ಮೈಸೂರು ಮೃಗಾಲಯ ಕಾರ್ಯನಿರ್ವಾಹಕ ನಿರ್ದೇಶಕ ಅಜಿತ್ ಎಂ.ಕುಲಕರ್ಣಿ ಮಾತನಾಡಿದರು. ಸಮ್ಮೇಳನದಲ್ಲಿ 25 ರಾಜ್ಯಗಳ 57 ಮೃಗಾಲಯಗಳ ನಿರ್ದೇಶಕರು ಪಾಲ್ಗೊಂಡಿದ್ದಾರೆ. 14 ಮಂದಿ ಸಂಪನ್ಮೂಲ ವ್ಯಕ್ತಿಗಳು ವಿವಿಧ ವಿಷಯ ಕುರಿತು ಮಾಹಿತಿ ನೀಡಲಿದ್ದಾರೆ.

ಸಾವಯವ ಕೃಷಿಕ ಕೆ.ಎಸ್.ಅವಿನಾಶ್‌ಗೆ ಪ್ರಗತಿಪರ ರೈತ ಪ್ರಶಸ್ತಿ ಪ್ರದಾನ

ಮೈಸೂರು, ಜ.18(ಎಸ್‌ಪಿಎನ್)- ರೋಟರಿ ಸದಸ್ಯರು ಸೇರಿದಂತೆ ಇತರೆ ನಗರವಾಸಿಗಳು ಸಾವಯವ ಕೃಷಿಯಿಂದ ಬೆಳೆದ ದವಸ-ಧಾನ್ಯಗಳ ಬಳಕೆಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ ಅಭಿಪ್ರಾಯಪಟ್ಟರು.



ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಐಡಿಯಲ್ ಜಾವಾ ಸಭಾಂಗಣದಲ್ಲಿ ರೋಟರಿ ಮೈಸೂರು ಮಿಡ್‌ಟೌನ್ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಪಿರಿಯಾಪಟ್ಟಣದ ಕೋಗಿಲ ವಾಡಿ ಗ್ರಾಮದ ಸಾವಯವ ಕೃಷಿಕ, ಯುವ ಬರಹಗಾರ ಕೆ.ಎಸ್. ಅವಿನಾಶ್ ಅವರಿಗೆ 'ಪ್ರಗತಿ ಪರ ರೈತ ಪ್ರಶಸ್ತಿ'ಯನ್ನು ನೀಡಿ, ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ರಾಸಾಯನಿಕ ಬಳಸಿ ಬೆಳೆಯುವ ದವಸ-ಧಾನ್ಯಗಳನ್ನು ನಗರವಾಸಿಗಳು ಹೆಚ್ಚಾಗಿ ಬಳಸುತ್ತಾರೆ. ಇವುಗಳ ಉಪಯೋಗದಿಂದ ನಾನಾ ಕಾಯಿಲೆಗಳಿಗೆ ತುತ್ತಾಗುವ ಸಂಭವಿರುತ್ತದೆ. ಹಾಗಾಗಿ ನಗರ ಪ್ರದೇಶದ ನಿವಾಸಿಗಳು ಸಾವಯವ ಕೃಷಿಯಿಂದ ಬೆಳೆದ ದವಸ-ಧಾನ್ಯಗಳ ಬಳಕೆ ಮಾಡಿ, ರೋಗ ಮುಕ್ತವಾಗುವಂತೆ ಸಲಹೆ ನೀಡಿದರಲ್ಲದೆ, ಸಾವಯವ ಕ್ಷೇತ್ರವನ್ನು ಪ್ರೋತ್ಸಾಹಿಸುವುದರಿಂದ ಸಾವಯವ ಕೃಷಿ ಮಾಡುತ್ತಿರುವ ಪ್ರಗತಿ ಪರ ರೈತರಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ ಎಂದು ತಿಳಿಸಿದರು.

ರೋಟರಿ ಸಂಸ್ಥೆ ಕೇವಲ ನಗರ ಪ್ರದೇಶದ ಸಾಧಕರನ್ನು ಮಾತ್ರ ಗುರುತಿಸುತ್ತದೆ ಎಂಬ ಭಾವನೆ ನನ್ನಲ್ಲಿತ್ತು. ಆದರೆ, ರೋಟರಿ ಮೈಸೂರು ಮಿಡ್‌ಟೌನ್ ವತಿಯಿಂದ ಪ್ರಗತಿಪರ ಕೃಷಿಕ ಕೆ.ಎಸ್.ಅವಿನಾಶ್ ಅವರ ಸಾಧನೆಯನ್ನು ಗುರುತಿಸಿ ಸನ್ಮಾನಿಸಿರುವುದು ಉತ್ತಮ ಬೆಳವಣಿಗೆ. ರೋಟರಿ ಸಂಸ್ಥೆ ಒಮ್ಮೆ ಗುರುತಿಸುವ ಸಾಧಕರನ್ನು ಮುಂದೆ ಬೇರೆಬೇರೆ ಸಂಘ-ಸಂಸ್ಥೆಗಳು ಗುರುತಿಸುತ್ತವೆ. ಇದರಿಂದ ಸಾವಯವ ಕೃಷಿ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವ ರೈತ ಕುಟುಂಬಗಳ ಸಂಖ್ಯೆ ಹೆಚ್ಚಾಗುತ್ತದೆ ಎಂದು ತಿಳಿಸಿದರು.

ಕೆ.ಎಸ್.ಅವಿನಾಶ್ ಹುಣಸೂರಿನಲ್ಲಿ ಪ್ರಾಥಮಿಕ ಶಿಕ್ಷಣ, ಬಿ.ಎ.ಪದವಿ ಮುಗಿಸಿದ್ದಾರೆ. ಈಗಿನ ಕಾಲದಲ್ಲಿ ಪದವಿ ಮುಗಿಸಿದ ಯುವಕರು, ನಗರ ಪ್ರದೇಶಕ್ಕೆ ವಲಸೆ ಹೋಗಿ, ಖಾಸಗಿ ಅಥವಾ ಸರ್ಕಾರಿ ನೌಕರಿಯೇ ಬೇಕು ಎನ್ನುವ ಮನೋಭಾವದಲ್ಲಿರುತ್ತಾರೆ. ಆದರೆ, ಕೆ.ಎಸ್.ಅವಿನಾಶ್ ಸಾವಯವ ಕೃಷಿಯಲ್ಲಿ ತೊಡಗುವುದರ ಜೊತೆಗೆ ಬಿಡುವಿನ ವೇಳೆಯಲ್ಲಿ ಸಿನಿಮಾಕ್ಕೆ ಸ್ಕ್ರಿಪ್ಟ್ ಬರೆಯುವ ಹವ್ಯಾಸ ಬೆಳೆಸಿಕೊಂಡಿದ್ದಾರೆ. ಈಗಾಗಲೇ 'ಐಕಳ ಕಿಚ್ಚು' ಸಿನಿಮಾಕ್ಕೆ ಇವರು ಸ್ಕ್ರಿಪ್ಟ್ ಬರೆದಿದ್ದಾರೆ. ಮುಂದುವರೆದು 'ನಕ್ಷತ್ರದ ಬೆಳಕು' ಎಂಬ ಕವನ ಸಂಕಲನ ಹೊರತಂದಿದ್ದಾರೆ ಎಂದು ಮಾಹಿತಿ ನೀಡಿದರು.

ಕೆ.ಎಸ್.ಅವಿನಾಶ್ 2015ರಲ್ಲಿ ಸುಭಾಷ್ ಪಾಳೇಕರ್ ಅವರಲ್ಲಿ ಸಾವಯವ ಕೃಷಿ ತರಬೇತಿ ಪಡೆದು ಸುಮಾರು 5 ವರ್ಷಗಳಿಂದ ಸಾವಯವ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಸರ್ಕಾರಿ ಕೆಲಸವೇ ಬೇಕು ಎಂದು ಹಂಬಲಿಸುವ ಗ್ರಾಮೀಣ ಪ್ರದೇಶದ ಯುವಕರಿಗೆ ಅವಿನಾಶ್ ಮಾದರಿಯಾಗಿದ್ದಾರೆ ಎಂದರಲ್ಲದೆ, ಇತ್ತೀಚಿನ ದಿನಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತ ವಿರೋಧಿ ಕಾನೂನು ಗಳನ್ನು ತಂದಿವೆ. ಇದರ ವಿರುದ್ಧ ಹೋರಾಟ ಅನಿವಾರ್ಯ. ಇದಕ್ಕೆ ರೋಟರಿ ಸದಸ್ಯರು ತಮ್ಮ ತಮ್ಮ ವ್ಯಾಪ್ತಿಯಲ್ಲಿ ಬೆಂಬಲ ನೀಡುವಂತೆ ಮನವಿ ಮಾಡಿದರು. ಈ ವೇಳೆ ರೋಟರಿ ಮೈಸೂರು ಮಿಡ್ ಟೌನ್ ಅಧ್ಯಕ್ಷ ರೊ. ನವೀನ್ ಚಂದ್ರ, ಕಾರ್ಯದರ್ಶಿ ರೊ.ಎಸ್. ಕುಮಾರಸ್ವಾಮಿ, ರೊ.ಎ.ಎನ್.ಅಯ್ಯಣ್ಣ, ಒಡನಾಡಿ ಸಂಸ್ಥೆಯ ಸ್ಟಾನ್ಲಿ-ಪರಶು, ರೈತ ಮುಖಂಡ ಹೊಸಕೋಟೆ ಬಸವರಾಜು ಉಪಸ್ಥಿತರಿದ್ದರು.

ಮೈಸೂರು ಗ್ರಾಮಾಂತರ ಬಿಜೆಪಿ ಘಟಕದಿಂದ ಜ.21ರಿಂದ 9 ದಿನ

'ಬೂತ್ ಮಟ್ಟದ ಮನೆ ಮನೆ ಅಭಿಯಾನ'



ಮೈಸೂರು, ಜ.18(ಎಂಟಿವೈ)- ಮೈಸೂರು ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಜ.21 ರಿಂದ 9 ದಿನಗಳ 'ಬೂತ್‌ಮಟ್ಟದ ಮನೆ ಮನೆ ಅಭಿಯಾನ' ನಡೆಸಲಾಗುತ್ತಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್ ತಿಳಿಸಿದರು.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವರಿಷ್ಠರ ಸೂಚನೆ ಮೇರೆಗೆ ಈಗಾಗಲೇ ಬೂತ್ ವಿಜಯ ಅಭಿಯಾನ ಯಶಸ್ವಿಯಾಗಿ ನೆರವೇರಿದೆ. ಜಿಲ್ಲೆಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿರುವ 1785 ಬೂತ್‌ಗಳಲ್ಲಿ, 1400ಕ್ಕೂ ಹೆಚ್ಚು ತಂಡಗಳನ್ನು ರಚಿಸಿಕೊಂಡು ನೇರವಾಗಿ ಮತದಾರರ ಭೇಟಿ ಮಾಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳ ಬಗ್ಗೆ ತಿಳಿಸಲಾಗುತ್ತದೆ. ಐದು ಅಂಶಗಳನ್ನು ಮುಂದಿಟ್ಟುಕೊಂಡು ಈ ಅಭಿಯಾನ ನಡೆಸಲಾಗುತ್ತಿದ್ದು, ಮಂಡಲ, ಶಕ್ತಿಕೇಂದ್ರ, ಬೂತ್‌ನ ಎಲ್ಲಾ ಮನೆಗಳನ್ನೂ ಸಂಪರ್ಕಿಸಿ ಸರ್ಕಾರದ ಸಾಧನೆಗಳ ಕರಪತ್ರ, ಸ್ಟಿಕರ್‌ಗಳನ್ನು ತಲುಪಿಸಲಾಗುತ್ತದೆ. ಉಜ್ವಲ ಯೋಜನೆ, ಕೃಷಿ ಸನ್ಮಾನ್, ಪ್ರಧಾನಮಂತ್ರಿ ಆವಾಜ್ ಯೋಜನೆ, ಸುಕನ್ಯ ಸಮೃದ್ಧಿ ಯೋಜನೆಗಳ ಫಲಾನುಭವಿಗಳೊಂದಿಗೆ ಚರ್ಚೆ ನಡೆಸುವುದು. ಬೂತ್ ವ್ಯಾಪ್ತಿಯಲ್ಲಿ ಸದೃಢ ಭಾರತಕ್ಕಾಗಿ ಬಿಜೆಪಿ ಬಲ ಎಂಬ ಗೋಡೆ ಬರಹ ಬರೆಯಲು ಉದ್ದೇಶಿಸಲಾಗಿದೆ ಎಂದರು.

ಜಿಲ್ಲಾ ಸಂಚಾಲಕ ದೇವನೂರು ಪ್ರತಾಪ್ ಮಾತನಾಡಿ, ಮನೆ ಮನೆ ಅಭಿಯಾನಕ್ಕಾಗಿ ಕಳೆದ 10 ದಿನಗಳಿಂದ ಸಿದ್ಧತೆ ಮಾಡಿಕೊಳ್ಳಲಾಗಿದೆ. ಐವರು ಸಂಚಾಲಕರಿರುವ ತಂಡವು ಗ್ರಾಮಾಂತರ ಪ್ರದೇಶದ 7 ವಿಧಾನಸಭಾ ಕ್ಷೇತ್ರದಲ್ಲೂ ಪ್ರತಿ ಮನೆಗೆ ಬಿಜೆಪಿ ಬೆಂಬಲಿತ ಸ್ಟಿಕರ್ ಕೊಡಲಾಗುವುದು. ಪ್ರತಿ ಬೂತ್‌ನಲ್ಲಿ 10 ಕಡೆಗಳಲ್ಲಿ ಗೋಡೆ ಬರಹ ಬರೆಯಲು ಉದ್ದೇಶಿಸಲಾಗಿದೆ. ಜಿಲ್ಲೆಯಲ್ಲಿ ಇನ್ನು 3 ಲಕ್ಷಕ್ಕೂ ಅಧಿಕ ಮಂದಿಗೆ ಸದಸ್ಯತ್ವ ಮಾಡಿಸಬೇಕಾಗಿದೆ. 15ಲಕ್ಷ ಮತದಾರರಿದ್ದು, 7, 8 ಲಕ್ಷ ಮತದಾರರನ್ನು ತಲುಪಬೇಕಿದೆ. 4 ಲಕ್ಷ ಫಲಾನುಭವಿಗಳನ್ನು ಭೇಟಿ ಮಾಡಲು ಉದ್ದೇಶಿಸಲಾಗಿದೆ. ಅಭಿಯಾನದ ರಾಜ್ಯ ಸಂಚಾಲಕರೂ ಹಾಗೂ ಮೈಸೂರು ವಿಭಾಗದ ಚುನಾವಣಾ ಉಸ್ತುವಾರಿಯೂ ಆಗಿರುವ ಸಚಿವ ಡಾ.ಅಶ್ವತ್ಥ್‌ನಾರಾಯಣ ಜ.21ರಂದು ನಂಜನಗೂಡಿನಲ್ಲಿ ಚಾಲನೆ ನೀಡಲಿದ್ದಾರೆ ಎಂದರು.

ವಿಧಾನಸಭಾ ಚುನಾವಣೆಯಲ್ಲಿ ನಾನು ವರುಣಾ ಕ್ಷೇತ್ರದ ಆಕಾಂಕ್ಷಿಯಾಗಿದ್ದೇನೆ. ಆದರೆ, ವಿಜಯೇಂದ್ರ ಅವರು ಸ್ಪರ್ಧಿಸಿದರೆ ಸ್ವಾಗತಿಸುತ್ತೇನೆ. ಇಲ್ಲವಾದರೆ ಪಕ್ಷ ಅವಕಾಶ ಕೊಡುವ ನಿರೀಕ್ಷೆಯಲ್ಲಿದ್ದು, ಎಲ್ಲಾ ರೀತಿಯ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದೇನೆ ಎಂದು ಸ್ಪಷ್ಟಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ಮಾಧ್ಯಮ ಸಂಚಾಲಕ ಸೂರ್ಯಕುಮಾರ್, ಜಿಲ್ಲಾ ಸಂಚಾಲಕ ಕಾರ್ಯದರ್ಶಿಗಳಾದ ನಂಜನಗೂಡು ಕೆಂಡಗಣ್ಣಪ್ಪ, ಜಿಲ್ಲಾ ಕಾರ್ಯದರ್ಶಿ ದಾಸಯ್ಯ ವೆಂಕಟರಮಣ ಶೆಟ್ಟಿ ಇದ್ದರು.

ನಕ್ಕರೆ ಅದೇ ಸ್ವರ್ಗ

ಆತ : ಇದೇನಯ್ಯಾ, ಇಷ್ಟೊಂದು ದೊಡ್ಡ ಮೂಟೆ?
ಈತ : ತರಕಾರಿ ಕಣಯ್ಯಾ
ಆತ : ನಿಮ್ಮ ಮನೇಲಿ ಏನಾದ್ರೂ ಫಂಕ್ಷನ್ ಇದೆಯಾ?
ಈತ : ಫಂಕ್ಷನ್ನೂ ಇಲ್ಲ, ಏನೂ ಇಲ್ಲ, ನನ್ನ ಹೆಂಡತಿ ಫೇಸ್‌ಪ್ಯಾಕ್‌ಗೆ!

ಮೈಸೂರು ಮಿತ್ರ

ಗುರುವಾರ, 19 ಜನವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಸಮಸ್ಯೆಗಳೇ ಮಹತ್ವದ ಸಾಧನೆಗಳನ್ನು, ಮಹತ್ತರ ವಿಷಯಗಳನ್ನು ತಂದುಕೊಡುತ್ತದೆ. – ಜಾನ್ ಕೆನಡಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ರಾಮ ಅನ್ನೋ ಕಾಲದಲ್ಲಿ ರಾವಣ ಬುದ್ಧಿ

ನಿಮ್ಮ ಪತ್ರಗಳು

ಅತಿಥಿ ಉಪನ್ಯಾಸಕರ ಬೇಡಿಕೆ ಈಡೇರಿಸಿ

ಮಾನ್ಯರೆ,

ಕಳೆದ ಎರಡು ವರ್ಷಗಳಿಂದ ಕೊರೊನಾದಿಂದಾಗಿ ಶೈಕ್ಷಣಿಕ ಪ್ರಗತಿಯು ದಿಕ್ಕಾಪಾಲಾಗಿದೆ. ಜೊತೆಗೆ ಮಕ್ಕಳ ವಿದ್ಯಾಭ್ಯಾಸ ಹಾಗೂ ಅತಿಥಿ ಉಪನ್ಯಾಸಕರ ಜೀವನವೂ ಏರು ಪೇರಾಗಿದೆ. ಇದರಿಂದಾಗಿ ಸಂಕಷ್ಟಕ್ಕೆ ಸಿಲುಕಿದ ಮೈಸೂರು ವಿಶ್ವವಿದ್ಯಾನಿಲಯದ ಅತಿಥಿ ಶಿಕ್ಷಕರು ಮತ್ತು ಉಪನ್ಯಾಸಕರು ತರಗತಿಯನ್ನು ಬಹಿಷ್ಕರಿಸಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಪ್ರತಿಭಟನೆ ನಡೆಸುತ್ತಿದ್ದಾರೆ. ಸದ್ಯ ಸ್ನಾತಕೋತ್ತರ ಪದವಿಯ ಪ್ರಥಮ ಹಾಗೂ ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ತರಗತಿಗಳು ಪ್ರಾರಂಭವಾಗಿದ್ದು, ಕೆಲವು ವಿಷಯಗಳಿಗೆ ತರಗತಿಗಳು ನಡೆಯುತ್ತಿಲ್ಲ. ಇದರಿಂದ ವಿದ್ಯಾರ್ಥಿಗಳ ಸೆಮಿಸ್ಟರ್ ಪರೀಕ್ಷೆಯ ಮೇಲೆ ನೇರ ಪರಿಣಾಮ ಬೀರುತ್ತಿದೆ. ವಿದ್ಯಾರ್ಥಿಗಳಿಗೆ ಸರಿಯಾದ ಸಮಯಕ್ಕೆ ತರಗತಿಗಳು ನಡೆಯದೇ ಹೋದರೆ ಅವರು ಪರೀಕ್ಷೆಗಳನ್ನು ಎದುರಿಸುವುದಾದರೂ ಹೇಗೆ? ಆದ್ದರಿಂದ ಕೂಡಲೇ ವಿಶ್ವವಿದ್ಯಾನಿಲಯವು ಅತಿಥಿ ಉಪನ್ಯಾಸಕರ ಎಲ್ಲಾ ಬೇಡಿಕೆಗಳನ್ನೂ ಈಡೇರಿಸಿ, ಅವರು ಕೂಡಲೇ ತರಗತಿಗಳನ್ನು ನಡೆಸುವಂತೆ ಮಾಡಬೇಕು. ಅತಿಥಿ ಉಪನ್ಯಾಸಕರ ಸಮಸ್ಯೆಯನ್ನು ವಿಶ್ವವಿದ್ಯಾನಿಲಯವು ಈಡೇರಿಸದೇ ಹೋದಲ್ಲಿ ಮುಂದೆ ವಿದ್ಯಾರ್ಥಿಗಳ ಶೈಕ್ಷಣಿಕ ಅಭ್ಯಾಸಕ್ಕೆ ತೊಂದರೆಯಾಗುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ಅತಿಥಿ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ವಿಶ್ವವಿದ್ಯಾನಿಲಯ ಸೂಕ್ತ ನಿರ್ಧಾರ ಕೈಗೊಳ್ಳಬೇಕಾಗಿದೆ.

–ವಿಜಯ್ ಕೆ.ಎಂ., ಮಹಾರಾಜ ಕಾಲೇಜು, ಮೈಸೂರು

ತ್ಯಾಜ್ಯವಸ್ತುಗಳ ನಿರ್ವಹಣೆಯ ಸಮಸ್ಯೆ

ಮಾನ್ಯರೆ,

ಮಾನವನು ತನ್ನ ದೈನಂದಿನ ಚಟುವಟಿಕೆಗಳಲ್ಲಿ ಬಳಸಿ ಬಿಸಾಡುವ ನಿರುಪಯುಕ್ತ ವಸ್ತುಗಳೇ ತ್ಯಾಜ್ಯ ವಸ್ತುಗಳು. ಕಸದ ಸಂಗ್ರಹಣೆ, ಸಂಸ್ಕರಣೆ, ಪುನರ್ಬಳಕೆ ಇಂದು ಮಾನವನ ಭೌತಿಕ ಪರಿಸರ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಕೈಗಾರಿಕರಣ, ನಗರೀಕರಣ ಮತ್ತು ಜಾಗತೀಕರಣದಿಂದ ಮನುಷ್ಯನಿಗೆ ದಿನದಿಂದ ದಿನಕ್ಕೆ ತ್ಯಾಜ್ಯ ವಸ್ತುಗಳನ್ನು ನಿರ್ವಹಣೆ ಮಾಡುವುದು ಒಂದು ದೊಡ್ಡ ಸಮಸ್ಯೆಯಾಗಿದೆ. ಜನರು ತ್ಯಾಜ್ಯ ವಸ್ತುಗಳನ್ನು ಕೆರೆಗಳಲ್ಲಿ, ಸಮುದ್ರಗಳಲ್ಲಿ ಮತ್ತು ಜನರು ವಾಸಿಸುವ ಸ್ಥಳಗಳಲ್ಲಿ ಬಿಸಾಡುತ್ತಿದ್ದಾರೆ. ಇದರಿಂದ ಜಲಮಾಲಿನ್ಯ ಉಂಟಾಗುತ್ತಿದೆ. ನೀರಿನಲ್ಲಿರುವ ಜಲಚರ ಜೀವಿಗಳು ನಾಶವಾಗುತ್ತಿವೆ. ಒಟ್ಟಾರೆಯಾಗಿ ಇದರಿಂದ ಪರಿಸರವೇ ನಾಶವಾಗುತ್ತದೆ. ಆದ್ದರಿಂದ ತ್ಯಾಜ್ಯ ವಸ್ತುಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಬೇಕು. ಜನರು ವಾಸಿಸುವ ಸ್ಥಳಗಳಲ್ಲಿ ತ್ಯಾಜ್ಯ ವಸ್ತುಗಳನ್ನು ವಿಲೇವಾರಿ ಮಾಡಲು ಸೂಕ್ತವಾದ ವೈಜ್ಞಾನಿಕ ವ್ಯವಸ್ಥೆ ಮಾಡಿಕೊಳ್ಳಬೇಕು. ಪ್ಲಾಸ್ಟಿಕ್‌ನಂತಹ ವಸ್ತುಗಳನ್ನು ಮರುಬಳಕೆ ಮಾಡಬೇಕು. ಮರುಬಳಕೆ ಮಾಡಲು ಬಾರದಿದ್ದಾಗ ಅವುಗಳನ್ನು ಊರಿನ ಹೊರಗಡೆ ತೆಗೆದುಕೊಂಡು ಹೋಗಿ ಸುಡಬೇಕು. ಹಾಗಾಗಿ ಎಲ್ಲರೂ ತ್ಯಾಜ್ಯ ವಸ್ತುಗಳ ನಿರ್ವಹಣೆಯನ್ನು ವೈಜ್ಞಾನಿಕವಾಗಿ ಸರಿಯಾದ ರೀತಿಯಲ್ಲಿ ಮಾಡಬೇಕು ಎಂದು ಮನವಿ.

–ಹುಲಿಕುಂಟಿ. ಹೆಚ್, ಮಹಾರಾಜ ಕಾಲೇಜು, ಮೈಸೂರು.

ಅಂಗೈಯಲ್ಲಿ ಆಕಾಶ ತೋರಿಸಬೇಡಿ

ಮಾನ್ಯರೆ,

ರಾಜ್ಯ ವಿಧಾನಸಭೆಗೆ ಚುನಾವಣೆ ಸಮೀಪಿಸುತ್ತಿದ್ದಂತೆಯೇ ಪ್ರಮುಖ ರಾಜಕೀಯ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಮತದಾರರಿಗೆ ಹಲವಾರು ಭರವಸೆಗಳನ್ನು ನೀಡಲು ಪ್ರಾರಂಭಿಸಿವೆ.

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಪ್ರತಿ ಮನೆಗೆ 200 ಯೂನಿಟ್ ವಿದ್ಯುತ್ ಉಚಿತವಾಗಿ ನೀಡಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಇತ್ತೀಚೆಗೆ ಬೆಂಗಳೂರಿನಲ್ಲಿ ಹೇಳಿದ್ದಾರೆ. ಅದರ ಬೆನ್ನಲ್ಲೇ ಜೆಡಿಎಸ್ ಅಧಿಕಾರಕ್ಕೆ ಬಂದರೆ ರೈತರ ಸಾಲ ಮನ್ನಾ ಮಾಡುವುದಾಗಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ತಮ್ಮ ಪಂಚರತ್ನ ಯಾತ್ರೆಯಲ್ಲಿ ಘೋಷಿಸಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಸಹ ಬಿಜೆಪಿ ಸೇರಿದಂತೆ ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳು ಮತದಾರರಿಗೆ ಭರಪೂರ ಭರವಸೆಗಳನ್ನು ನೀಡಿದ್ದರೂ ಸಹ, ಬಹುತೇಕ ಭರವಸೆಗಳು ಕೇವಲ ಕಾಗದದ ಮೇಲೆ ಉಳಿದುಕೊಂಡಿವೆ. ಅಧಿಕಾರಕ್ಕೆ ಬರಬೇಕೆಂಬ ತರಾತುರಿಯಲ್ಲಿ ರಾಜಕೀಯ ಪಕ್ಷಗಳು ಈಡೇರಿಸಲು ಸಾಧ್ಯವಾಗದಂತಹ ಹಲವಾರು ಭರವಸೆಗಳನ್ನು ನೀಡಿ ಅಧಿಕಾರಕ್ಕೆ ಬಂದ ಮೇಲೆ ಅವುಗಳನ್ನು ಈಡೇರಿಸಲು ಸಾಧ್ಯವಾಗದೇ ವಚನ ಭ್ರಷ್ಟವಾಗಿದೆ. ಅದೂ ಅಲ್ಲದೇ ಅಂತಹವುಗಳನ್ನು ಈಡೇರಿಸಲು ಸೂಕ್ತವಾದ ಸಂಪನ್ಮೂಲ ಲಭ್ಯವಿರಬೇಕು. ನಿರುದ್ಯೋಗ ಭತ್ಯೆ, ರೈತರ ಸಾಲ ಮನ್ನಾ ಮುಂತಾದ ಹಲವಾರು ಭರವಸೆಗಳನ್ನು ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಅವಲಂಬಿಸಿದೆ. ಆದ್ದರಿಂದ ಅಂಗೈಯಲ್ಲಿ ಆಕಾಶವನ್ನು ತೋರಿಸುವ ರೀತಿಯಲ್ಲಿ ಪೊಳ್ಳು ಅಥವಾ ಅವಾಸ್ತವಿಕ ಭರವಸೆಗಳನ್ನು ನೀಡುವುದನ್ನು ರಾಜಕೀಯ ಪಕ್ಷಗಳು ಈಗಲಾದರೂ ಕೈಬಿಡುವುದು ಒಳ್ಳೆಯದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಗ್ರಂಥಾಲಯದಲ್ಲಿ ಸೌಲಭ್ಯಗಳ ಕೊರತೆ

ಮಾನ್ಯರೆ,

ಕೊಳ್ಳೇಗಾಲ ತಾಲೂಕಿನಲ್ಲಿ ನಗರ ಕೇಂದ್ರ ಗ್ರಂಥಾಲಯ ಪೀಸ್ ಪಾರ್ಕ್ ಆವರಣದಲ್ಲಿ ಸ್ಥಾಪನೆಯಾಗಿ ಸರಿಸುಮಾರು ದಶಕವೇ ಕಳೆದಿದೆ. ಓದುಗರ ಸಂಖ್ಯೆ ದಿನೇ ದಿನೆ ಹೆಚ್ಚುತ್ತಿದ್ದು, ಪ್ರತಿದಿನ ವಿದ್ಯಾರ್ಥಿಗಳು, ಸಾರ್ವಜನಿಕರು ನೂರಾರು ಸಂಖ್ಯೆಯಲ್ಲಿ ಬರುತ್ತಾರೆ. ಆದರೆ ಗ್ರಂಥಾಲಯದಲ್ಲಿ ಕುಡಿಯವ ನೀರಿನ ಸೌಲಭ್ಯವನ್ನು ಬಿಟ್ಟರೆ ಇನ್ನೆಲ್ಲವೂ ಕೈಗೆಟುಕದ ಸೌಲಭ್ಯವಾಗಿದೆ. ಪ್ರಥಮವಾಗಿ ಸೌಲಭ್ಯಗಳ ಬಗ್ಗೆ ತಿಳಿಯಲು ಗ್ರಂಥಪಾಲಕರೇ ಅಲಭ್ಯವಾಗಿರುತ್ತಾರೆ. ಇದನ್ನು ಹೊರತುಪಡಿಸಿ ಹೆಚ್ಚಾಗಿ ಕುಳಿತು ಓದಲು ಆಸನಗಳ ಸಂಖ್ಯೆ ಅತೀ ಕಡಿಮೆ. ಓದಲು ಬರೀ ವಾರ್ತಾ ಪತ್ರಿಕೆಗಳು ಮಾತ್ರ ಓದುಗರಿಗೆ ಲಭ್ಯವಾಗುತ್ತಿದೆ. ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಯಲ್ಲಿರುವ ಆಕಾಂಕ್ಷಿಗಳಿಗೆ ಹೊಸತೇ ಇಲ್ಲ. ಎರಡು ಮೂರು ವರ್ಷಗಳ ಹಳೆಯ ಪುಸ್ತಕಗಳೇ ಇಲ್ಲಿವೆ. ಇದರ ಬಗ್ಗೆ ಗ್ರಂಥಪಾಲಕರಿಗೆ ಮನವಿ ಮಾಡಿದರೂ ಯಾವ ಪ್ರಯೋಜನವಾಗಿಲ್ಲ. ಇನ್ನು ಗ್ರಂಥಾಲಯದ ಬಹು ದೊಡ್ಡ ಸಮಸ್ಯೆ ಎಂದರೆ ಸಮಯದ ಕೊರತೆ. ತಾಲೂಕು ಕೇಂದ್ರದ ಗ್ರಂಥಾಲಯದ ಸಮಯ ಬೆಳಗ್ಗೆ 8ರಿಂದ 11 ಹಾಗೂ ಸಾಯಂಕಾಲ 4ರಿಂದ ರಾತ್ರಿ 8 ಗಂಟೆಗೆ ಮಾತ್ರ ಸೀಮಿತವಾಗಿದೆ. ಇನ್ನೂ ಮುಂದುವರಿದಂತೆ ಪ್ರತೀ ಸೋಮವಾರ ರಜೆ ಇದೆ. ತಿಂಗಳ ಮೊದಲನೆಯ ಮಂಗಳವಾರ ರಜೆ ಹಾಗೂ 4ನೇ ಶನಿವಾರವೂ ರಜೆ ನಿಗದಿ ಮಾಡಿದ್ದು, ಓದುಗರಿಗೆ ಸಮಯವೇ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಇದರ ಬಗ್ಗೆ ಅನೇಕ ಬಾರಿ ಓದುಗರೆಲ್ಲಾ ಸೇರಿ ಅಧಿಕಾರಿಗಳಿಗೆ ದೂರು ನೀಡಿ ಪ್ರತಿದಿನ ಬೆಳಗ್ಗೆ 8ರಿಂದ ರಾತ್ರಿ 8ರವರೆಗೆ ಗ್ರಂಥಾಲಯ ತೆರೆಯಬೇಕೆಂದು ಗ್ರಂಥಪಾಲಕರು ಮತ್ತು ಅಧಿಕಾರಿಗಳಿಗೆ ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಬರೀ ಭರವಸೆಯೇ ಅವರ ಉತ್ತರವಾಗಿದೆ. ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಬೇಕೆಂದು ಮನವಿ.

–ದಿಲೀಪ್ ವೆಂಕಟೇಶ್, ಮುಡಿಗುಂಡ, ಕೊಳ್ಳೇಗಾಲ ತಾ.



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಹುಲಿ ಸಂರಕ್ಷಿತ ಪ್ರದೇಶಗಳ ಜನರ ಬದುಕಿನ ಬವಣೆ

ಕಳೆದ 2 ವರ್ಷಗಳಲ್ಲಿ ಅರಣ್ಯ ಪ್ರದೇಶಗಳಲ್ಲಿ ಕಳೆದ ವರ್ಷವೊಂದರಲ್ಲಿಯೇ 37,000 ಮಾನವ-ವನ್ಯಜೀವಿ ಸಂಘರ್ಷ ಪ್ರಕರಣಗಳು ನಡೆದಿವೆ. ಸತ್ತವರ ಕುಟುಂಬಗಳಿಗೆ ಅಥವಾ ಗಾಯಗೊಂಡವರಿಗೆ ಆರ್ಥಿಕ ಪರಿಹಾರ ನೀಡಿ ಬಿಟ್ಟರೆ ಸಮಸ್ಯೆಯಿಂದ ತಪ್ಪಿಸಿಕೊಂಡ ಹಾಗೆ ಎನ್ನುವ ಭ್ರಮೆಯಲ್ಲಿ ಬದುಕುತ್ತಿರುವ ವ್ಯವಸ್ಥೆ ಎಚ್ಚೆತ್ತುಕೊಳ್ಳದಿದ್ದರೆ ದಿನೇ ದಿನೆ ಹೆಚ್ಚಾಗುತ್ತಿರುವ ಸಾವು-ನೋವುಗಳನ್ನು ನಿರ್ವಹಿಸಲು ಸಂಪನ್ಮೂಲಗಳನ್ನು ಹೇಗೆ ತಾನೇ ಹೊಂದಿಸುತ್ತಾರೆ? ಹಣ ನೀಡಿ ಬಿಟ್ಟರೆ ಹೋದ ಜೀವ ಬರುವುದೇ, ಪರಿಹಾರ ಎಲ್ಲರಿಗೂ ತಲುಪಿದೆಯೇ-ಈ ಪ್ರಶ್ನೆಗಳಿಗೆ ಉತ್ತರಗಳು ಇವೆಯೇ ನಮ್ಮ ಬಳಿಯಲ್ಲಿ?



ಹೆಚ್ಚಿನವರಿಗೆ ಹುಲಿ ಸಂರಕ್ಷಿತ ಪ್ರದೇಶಗಳ ಪರಿಚಯವಿರುವುದು ಪ್ರವಾಸಿ ತಾಣಗಳಾಗಿ. ವಾರಾಂತ್ಯದಲ್ಲಿ ಯಾಂತ್ರಿಕ ಬದುಕಿನಿಂದ ಒಂದೆರಡು ದಿನಗಳಾದರೂ ದೂರ ಹೋಗಬೇಕೆಂದಾಗ ಅಥವಾ ಅರಣ್ಯದ ಸ್ವಚ್ಛ ಪರಿಸರದಲ್ಲಿ ಕಾಲ ಕಳೆಯಬೇಕೆಂದಾಗ ಅನೇಕರು ಸಂರಕ್ಷಿತ ಅರಣ್ಯ ಪ್ರದೇಶಗಳಿಗೆ ಹೋಗಿ ಅಲ್ಲಿ ಒಂದೆರಡು ರಾತ್ರಿಗಳನ್ನು ಕಳೆದು, ಅರಣ್ಯ ಇಲಾಖೆಯ ವಾಹನದಲ್ಲೇ ಅರಣ್ಯದ ಆಂತರಿಕ ಭಾಗಗಳಿಗೆ ಹೋಗಿ ವನ್ಯ ಪ್ರಾಣಿಗಳು ಕಂಡಾಗ ದೂರದಿಂದಲೇ ಖುಷಿ ಪಟ್ಟು ಮರಳಿ ತಮ್ಮ ವಾಸಸ್ಥಾನಗಳಿಗೆ ಹಿಂದಿರುಗಿ ಅರಣ್ಯದ ಅನುಭವವನ್ನು ಮೆಲುಕು ಹಾಕುತ್ತಾರೆ. ವಿಶೇಷವಾಗಿ ನಗರವಾಸಿಗಳಿಗೆ ಅರಣ್ಯ ಜೀವನ ಎಷ್ಟು ಶಾಂತ ಹಾಗೂ ಗಲಾಟೆ–ಗೊಂದಲಗಳಿಂದ ದೂರ ಇದೆ ಎನಿಸುವುದು ಸಹಜವೇ. ದಿನ ನಿತ್ಯವೂ ಈ ಪರಿಸರದಲ್ಲಿಯೇ ವಾಸಿಸುವವರು ಎಷ್ಟು ಅದೃಷ್ಟವಂತರಲ್ಲವೇ ಎಂಬ ಮಾತುಗಳೂ ಕೇಳಿ ಬರುತ್ತವೆ. ಆದರೆ ಎರಡು ದಿನಗಳ ಪ್ರವಾಸಕ್ಕೆ ಬಂದು ಸುರಕ್ಷಿತ ಅತಿಥಿ ಗೃಹಗಳಲ್ಲಿದ್ದು ಅರಣ್ಯದ ಆನಂದವನ್ನು ಅನುಭವಿಸುವ ಅತಿಥಿಗಳಿಗೂ ಅರಣ್ಯದ ಒಳಗೆ ಅಥವಾ ಅದರ ಸುತ್ತಮುತ್ತಲಿನ ಹಳ್ಳಿಗಳಲ್ಲಿ ವಾಸಿಸುವ ಜನ ಸಮುದಾಯಗಳು ಎದುರಿಸುವ ಆತಂಕ–ಅನಿಶ್ಚಿತತೆಗಳಿಗೂ ಬಹಳ ವ್ಯತ್ಯಾಸಗಳಿವೆ..

ಅಕಸ್ಮಾತ್ ಸಫಾರಿ ಹೋದಾಗ ಹುಲಿ ಏನಾದರೂ ಕಂಡರೆ ಆ ಅನುಭವ ನೀಡುವ ರೋಮಾಂಚನವೇ ಬೇರೆ. ಆದರೆ ದಿನನಿತ್ಯ ಅವುಗಳ ನೆರಳಿನಲ್ಲೇ ಬದುಕುತ್ತಾ ಹುಲಿಯೇ ಅಲ್ಲದೆ ಇತರ ವನ್ಯ ಜೀವಿಗಳ ಆಕ್ರಮಣದ ಭಯದಲ್ಲಿಯೇ ಜೀವ ಸವೆಸುತ್ತಾ ಹೊರಗೆ ಹೋಗಲೂ ಆಗದೆ ಒಳಗೆ ಇರಲೂ ಆಗದೆ ಇರುವ ನೂರಾರು ಕುಟುಂಬಗಳ ಜೀವನಾನುಭವಗಳ ಪರಿಯೇ ಬೇರೆ. ಯಾವ ಬಗೆಯ ಸೂಕ್ಷ್ಮತೆಯೂ ಇಲ್ಲದೆ ವನ್ಯಜೀವಿಗಳ ತಾಣದಲ್ಲಿ ಅವರಿರಬೇಕೇ ಎಂಬ ಪ್ರಶ್ನೆಯನ್ನು ಕೇಳುವವರು ಅನೇಕರು. ಅವರು ಕಾಡಿನ ಒಳಗೆ ಅಥವಾ ಕಾಡಿನ ಅಂಚಿನಲ್ಲಿ ಇರಬೇಕೇ ಬೇಡವೇ ಎಂದು ಕೇಳುವುದಕ್ಕಿಂತ, ಅವರು ಹೋಗಬೇಕೆಲ್ಲಿಗೆ ಎನ್ನುವ ಪ್ರಶ್ನೆಯನ್ನು ಎತ್ತಿ ಅದಕ್ಕೆ ಉತ್ತರಗಳನ್ನು ಹುಡುಕುತ್ತಾ ಹೊರಟಾಗ ಆ ಪ್ರಶ್ನೆಗೆ ಸುಲಭದಲ್ಲಿ ಉತ್ತರಗಳು ದೊರೆಯುವುದಿಲ್ಲ, ವನ್ಯ ಜೀವಿ–ಮಾನವ ಸಂಘರ್ಷ ದಿನೇ ದಿನೆ ಹೆಚ್ಚುತ್ತಿರುವ ಇತ್ತೀಚಿನ ದಿನಗಳಲ್ಲಿ, ಹೊಸ –ಹೊಸ ಸಮಸ್ಯೆಗಳು ಸೃಷ್ಟಿಯಾಗುತ್ತಿವೆ.

ಜನಗಳ ಹಕ್ಕುಗಳ ರಕ್ಷಣೆ ಎಷ್ಟು ಮುಖ್ಯವೋ ವನ್ಯಜೀವಿಗಳ ರಕ್ಷಣೆಯೂ ಅಷ್ಟೇ ಮುಖ್ಯವಾದ್ದರಿಂದಲೂ ವಿಶಿಷ್ಟ ಪ್ರಾಣಿ ಸಂಕುಲಗಳನ್ನು ಅತೀ ಸೂಕ್ಷ್ಮತೆಯಿಂದ ರಕ್ಷಿಸ ಬೇಕಾದ್ದರಿಂದಲೂ ದೇಶದ ಕೆಲ ಪ್ರದೇಶಗಳನ್ನು ಸಂರಕ್ಷಿತ ಅರಣ್ಯಗಳೆಂದು ಗುರುತಿಸಿ ಅವುಗಳ ಸುತ್ತ ಕೆಲ ನಿರ್ಬಂಧಗಳನ್ನು ಹಾಕುವುದು ಅನಿವಾರ್ಯವಾಯಿತು. ಹುಲಿ ವಿಶಿಷ್ಟ ಪ್ರಾಣಿ ಸಂಕುಲಗಳ ಸಾಲಿಗೆ ಸೇರುತ್ತದೆ. ಹುಲಿ ಸಂಖ್ಯೆ ಹೆಚ್ಚಾದಾಗ ಪ್ರಾಕೃತಿಕ ವಿಕೋಪಗಳು ಕಡಿಮೆಯಾಗುತ್ತವೆ, ಆಹಾರ ಸರಪಳಿಯ ರಕ್ಷಣೆಯಾಗುತ್ತದೆ ಮತ್ತು ಅರಣ್ಯ ನಾಶಕ್ಕೆ ಸಹಜ ತಡೆಯುಂಟಾಗುತ್ತದೆ. ಇದನ್ನು ಮನಗಂಡೇ ರಾಷ್ಟ್ರೀಯ ಹುಲಿ ರಕ್ಷಣಾ ಪ್ರಾಧಿಕಾರದ ಪ್ರಾಜೆಕ್ಟ್ ಟೈಗರ್ ಯೋಜನೆಯಡಿಯಲ್ಲಿ ಹುಲಿ ಸಂರಕ್ಷಿತ ಪ್ರದೇಶಗಳನ್ನು ಸ್ಥಾಪಿಸಲಾಯಿತು. ಇಂದು ಭಾರತದಲ್ಲಿ 52 ಹುಲಿ ಸಂರಕ್ಷಿತ ಪ್ರದೇಶಗಳಿದ್ದು ಇಡೀ ಪ್ರಪಂಚದಲ್ಲೇ ಅತ್ಯಂತ ಹೆಚ್ಚಿನ ಸಂಖ್ಯೆಯ ಹುಲಿಗಳನ್ನು ಹೊಂದಿರುವ ಹೆಗ್ಗಳಿಕೆ ನಮ್ಮ ದೇಶದ್ದು. ಭಾರತದಲ್ಲಿ ಎರಡನೇ ಅತಿ ಹೆಚ್ಚಿನ ಸಂಖ್ಯೆಯ ಹುಲಿಗಳು ಇರುವುದು ಕರ್ನಾಟಕದಲ್ಲಿ.


ಕರ್ನಾಟಕದಲ್ಲಿ ಇಂಥ ಐದು ಹುಲಿ ಸಂರಕ್ಷಿತ ಅರಣ್ಯಗಳನ್ನು ಗುರುತಿಸಲಾಗಿದೆ. ಅವುಗಳೆಂದರೆ ಬಂಡೀಪುರ ಹುಲಿ ಸಂರಕ್ಷಿತ ಅರಣ್ಯ (1974), ಭದ್ರಾ ಹುಲಿ ಸಂರಕ್ಷಿತ ಅರಣ್ಯ (1998), ನಾಗರಹೊಳೆ ಹುಲಿ ಸಂರಕ್ಷಿತ ಅರಣ್ಯ (1999), ಕಾಳಿ ಹುಲಿ ಸಂರಕ್ಷಿತ ಅರಣ್ಯ (2007) ಮತ್ತು ಬಿಳಿಗಿರಿ ರಂಗನಾಥ ಹುಲಿ ಸಂರಕ್ಷಿತ ಅರಣ್ಯ(2011). ರಾಜ್ಯದಲ್ಲಿ ಹುಲಿ ಸಂರಕ್ಷಣೆಗಾಗಿ ನಡೆಯುತ್ತಿರುವ ಪ್ರಯತ್ನಗಳಿಂದ ಈ ವನ್ಯಜೀವಿಯ ಸಂಖ್ಯೆಯಲ್ಲಿ ಗಮನಾರ್ಹವಾದ ಹೆಚ್ಚಳವಾಗುತ್ತಿದೆ. ಹಾಗೆ ಹೆಚ್ಚಳವಾದಾಗ ಸಹಜವಾಗಿಯೇ ಪ್ರಾದೇಶಿಕ ಪ್ರಾಬಲ್ಯವನ್ನು ಪಡೆಯಲು ಹುಲಿಗಳಲ್ಲೇ ಘರ್ಷಣೆ ನಡೆದು ಪ್ರಬಲ ಪುರುಷ ಹುಲಿಗಳು ದುರ್ಬಲ ಹುಲಿಗಳನ್ನು ಸ್ಥಾನಪಲ್ಲಟ ಮಾಡಿದಾಗ ಅವು ಹುಲಿ ಸಂರಕ್ಷಿತ ಅರಣ್ಯದಿಂದ 10–20 ಕಿಲೋಮೀಟರ್ ದೂರದಲ್ಲಿರುವ ಜನ ವಸತಿ ಸ್ಥಾನಗಳಿಗೆ ನುಗ್ಗಿ ಜೀವಹಾನಿ ಮಾಡಿರುವ ಪ್ರಕರಣಗಳೂ ಇವೆ. ಉದಾಹರಣೆಗೆ ಬಂಡೀಪುರ ಅರಣ್ಯದ ಆಜುಬಾಜಿನಲ್ಲಿರುವ 150 ಗ್ರಾಮಗಳ ಜನರು ಮತ್ತು ಜಾನುವಾರುಗಳು ಹೆಚ್ಚು ಹೆಚ್ಚಾಗಿ ಅಪಾಯದ ವಲಯದಲ್ಲಿ ಇದ್ದಾರೆ/ಇವೆ. ರಾಜ್ಯದಲ್ಲಿ ಅತೀ ಹೆಚ್ಚು ಸಂಖ್ಯೆಯ ಹುಲಿ ಜನಸಂಖ್ಯೆಯನ್ನು ಹೊಂದಿರುವ ನಾಗರಹೊಳೆ ಅರಣ್ಯದ ವಲಯದಲ್ಲಿ ಇತ್ತೀಚೆಗೆ ಒಂದೇ ವಾರದಲ್ಲಿ ಇಬ್ಬರು ಹುಲಿಯ ಆಕ್ರಮಣಕ್ಕೆ ಬಲಿಯಾದಾಗ, ಹುಲಿಗಳು ತಮ್ಮ ಪ್ರಾದೇಶಿಕ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿವೆ. ಆದ್ದರಿಂದ ಅವುಗಳ ಚಲನೆಯ ದಿಕ್ಕು ಹಾಗೂ ವಾಸಕ್ಕೆ ಹೊಸ ಮಾರ್ಗಗಳನ್ನು ಹುಡುಕಬೇಕೇ ಎಂಬ ಚರ್ಚೆಯೂ ನಡೆಯುತ್ತಿದೆ.

ದಿನೇ ದಿನೆ ಹೆಚ್ಚುತ್ತಿರುವ ಹುಲಿಗಳ ಸಂಖ್ಯೆಯನ್ನು ರಕ್ಷಣೆ ಮಾಡುವುದಕ್ಕೆ ಪ್ರಥಮ ಆದ್ಯತೆಯನ್ನು ನೀಡಬೇಕೆಂಬುದರ ಬಗ್ಗೆ ಯಾವ ಅನುಮಾನವೂ ಇಲ್ಲ. ಈ ಉದ್ದೇಶಕ್ಕೆಂದೇ ಆಯ್ದ ಅರಣ್ಯ ಪ್ರದೇಶಗಳನ್ನು ಹುಲಿ ಸಂರಕ್ಷಿತ ಪ್ರದೇಶಗಳೆಂದು ಗುರುತಿಸಿ ಘೋಷಿಸಲಾಗಿದೆ. ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಮಾನವ ಚಲನೆ ಮತ್ತು ವಾಸವನ್ನು ನಿಯಂತ್ರಿಸಬೇಕು. ಏಕೆಂದರೆ ಇದರಿಂದ ಮಾನವರು ಮತ್ತು ವನ್ಯಜೀವಿಗಳು–ಇಬ್ಬರ ಆಸಕ್ತಿಯನ್ನು ಸಂರಕ್ಷಿಸಿದಂತಾಗುತ್ತದೆ ಎಂಬುದು ಸಕಾರಾತ್ಮಕ ದೃಷ್ಟಿಕೋನವೇ ಸರಿ. ಹುಲಿ ಸಂರಕ್ಷಿತ ಅರಣ್ಯಗಳು ಹುಲಿಯೇ ಅಲ್ಲದೆ ಆನೆ, ಚಿರತೆ ಮುಂತಾದ ಇತರ ವನ್ಯ ಜೀವಿಗಳಿಗೂ ಆಶ್ರಯ ತಾಣಗಳಾಗಿವೆ. ಈ ಪ್ರದೇಶಗಳಲ್ಲಿ ಇಂದಿಗೂ ದನಗಳನ್ನು ಸುತ್ತ ಮುತ್ತಲ ಗ್ರಾಮಗಳ ಜನರು ಮೇಯಿಸುತ್ತಲೇ ಇದ್ದಾರೆ. ಬರ ಬರುತ್ತಾ ಮಾನವ ಸಮುದಾಯಗಳಲ್ಲಿ ಭೂ ಪ್ರದೇಶದ ಹಂಚಿಕೆಯ ಬಗ್ಗೆ ಘರ್ಷಣೆಗಳು ಒಂದೆಡೆ ಹೆಚ್ಚಾಗುತ್ತಿದ್ದಾರೆ, ಮತ್ತೊಂದೆಡೆ ವನ್ಯಜೀವಿಗಳು ಮತ್ತು ಮಾನವರ ನಡುವೆಯೂ ಜನ ವಾಸಸ್ಥಾನಗಳ ಮತ್ತು ಕೃಷಿ ಭೂಮಿಗಳ ಬಳಕೆಗಾಗಿ ಸಂಘರ್ಷ ಏರ್ಪಾಡಾಗಿದೆ. ಕಾಡಿನಲ್ಲಿ ನಶಿಸುತ್ತಿರುವ ಆಹಾರ ಮೂಲಗಳು, ಹೆಚ್ಚುತ್ತಿರುವ ವನ್ಯಜೀವಿಗಳ ಸಂಖ್ಯೆ ಮತ್ತು ಆಯ್ದ ಅರಣ್ಯ ಪ್ರದೇಶಗಳಲ್ಲಿ ಸ್ವಾಮ್ಯ ಸ್ಥಾಪನೆಗಾಗಿ ವನ್ಯಜೀವಿಗಳಲ್ಲಿ ನಡೆಯುವ ಹೋರಾಟ ಮುಂತಾದ ಕಾರಣಗಳಿಂದಾಗಿ ಅನೇಕ ವನ್ಯಜೀವಿಗಳು ನೇರವಾಗಿ ಆಸುಪಾಸಿನಲ್ಲಿರುವ ಗ್ರಾಮಗಳ ಮಾತು ಹಾಗಿರಲಿ, ದೊಡ್ಡ ದೊಡ್ಡ ನಗರಗಳಿಗೂ ಬರಲಾರಂಭಿಸಿವೆ. ಕೊಡಗು ಜಿಲ್ಲೆಯೊಂದರಲ್ಲೇ ಕಳೆದ ವರ್ಷವೇ ಹುಲಿಗಳ ಆಕ್ರಮಣದಲ್ಲಿ ಶೇ.37ರಷ್ಟು ಹೆಚ್ಚಳವಾಗಿದೆ ಎಂದು ಅಧ್ಯಯನವೊಂದು ತಿಳಿಸಿತ್ತು. ಇತ್ತೀಚೆಗಂತೂ ಆನೆ ಮತ್ತು ಚಿರತೆಗಳ ಆಕ್ರಮಣ ದಿನ ನಿತ್ಯದ ಸಮಾಚಾರವಾಗುತ್ತಿದೆ. ಅರಣ್ಯ ಇಲಾಖೆ ಮಾಹಿತಿ ಪ್ರಕಾರ ರಾಜ್ಯದಲ್ಲಿ ಕಳೆದ 2 ವರ್ಷಗಳಲ್ಲಿ ಅರಣ್ಯ ಪ್ರದೇಶಗಳಲ್ಲಿ ಕಳೆದ ವರ್ಷವೊಂದರಲ್ಲಿಯೇ 37,000 ಮಾನವ–ವನ್ಯಜೀವಿ ಸಂಘರ್ಷ ಪ್ರಕರಣಗಳು ನಡೆದಿವೆ. ಸತ್ತವರ ಕುಟುಂಬಗಳಿಗೆ ಅಥವಾ ಗಾಯಗೊಂಡವರಿಗೆ ಆರ್ಥಿಕ ಪರಿಹಾರ ನೀಡಿ ಬಿಟ್ಟರೆ ಸಮಸ್ಯೆಯಿಂದ ತಪ್ಪಿಸಿಕೊಂಡ ಹಾಗೆ ಎನ್ನುವ ಭ್ರಮೆಯಲ್ಲಿ ಬದುಕುತ್ತಿರುವ ವ್ಯವಸ್ಥೆ ಎಚ್ಚೆತ್ತುಕೊಳ್ಳದಿದ್ದರೆ ದಿನೇದಿನೆ ಹೆಚ್ಚಾಗುತ್ತಿರುವ ಸಾವು–ನೋವುಗಳನ್ನು ನಿರ್ವಹಿಸಲು ಸಂಪನ್ಮೂಲಗಳನ್ನು ಹೇಗೆ ತಾನೇ ಹೊಂದಿಸುತ್ತಾರೆ? ಹಣ ನೀಡಿ ಬಿಟ್ಟರೆ ಹೋದ ಜೀವ ಬರುವುದೇ, ಪರಿಹಾರ ಎಲ್ಲರಿಗೂ ತಲುಪಿದೆಯೇ –ಈ ಪ್ರಶ್ನೆಗಳಿಗೆ ಉತ್ತರಗಳು ಇವೆಯೇ ನಮ್ಮ ಬಳಿಯಲ್ಲಿ?

ಒಂದೆಡೆ ಹೆಚ್ಚುತ್ತಿರುವ ವನ್ಯಜೀವಿಗಳ ರಕ್ಷಣೆ, ಮತ್ತೊಂದೆಡೆ ಅರಣ್ಯದ ಆಸುಪಾಸಿನಲ್ಲಿರುವ ಗ್ರಾಮ ವಾಸಿಗಳು, ಜಾನುವಾರುಗಳು ಮತ್ತು ಅವರ ಜೀವನಾಧಾರಗಳು– ಇವುಗಳ ರಕ್ಷಣೆ ಅರಣ್ಯ ಇಲಾಖೆಗೆ ದೊಡ್ಡ ಸವಾಲಾಗಿ ಪರಿಣಮಿಸಿದೆ. ಅರಣ್ಯವನ್ನೇ ಅವಲಂಬಿಸಿಕೊಂಡು ಬಂದಿರುವ ಜನ ಸಮುದಾಯಗಳನ್ನು ಅಲ್ಲಿಂದ ದೂರ ಸರಿಸುವುದು ಸುಲಭವೂ ಅಲ್ಲ, ಔಚಿತ್ಯವೂ ಅಲ್ಲ. ಇಂದಿಗೂ ಕೆಲ ಹುಲಿ ಸಂರಕ್ಷಿತ ಪ್ರದೇಶಗಳ ಒಳಗೇ ಸಾವಿರಾರು ಕುಟುಂಬಗಳು ವಾಸಿಸುತ್ತಿದ್ದಾರೆ. ಉದಾಹರಣೆಗೆ, ಕಾಳಿ ಹುಲಿ ಸಂರಕ್ಷಿತ ಅರಣ್ಯದಿಂದ ಹೊರಗೆ ಮರುಸ್ಥಾನೀಕರಣಗೊಂಡಿರುವ ಕುಟುಂಬಗಳ ಸಂಖ್ಯೆ 300 ಆದರೆ ಒಳಗೇ ಇರುವ ಕುಟುಂಬಗಳ ಸಂಖ್ಯೆ 6000ಕ್ಕೂ ಹೆಚ್ಚಿದೆ! ಪ್ರಾಣಿ–ಮಾನವರು ಹೇಗೆ ಒಟ್ಟಿಗೆ ಬದುಕಬೇಕು ಮತ್ತು ಬದುಕಬಹುದು ಎಂಬ ವಿಷಯದತ್ತ ಗಮನ ಹರಿಸುವುದು ಹಿಂದೆಂದಿಗಿಂತ ಇಂದು ಸುಸ್ಥಿರ –ಸಮತೋಲಿತ ಅಭಿವೃದ್ಧಿಯ ವ್ಯಾಖ್ಯಾನದಲ್ಲಿ ಗಂಭೀರ ಚರ್ಚೆಗೆ ಒಳಪಡಬೇಕಿದೆ.

ಜೀವನದ ತಿರುವಿನ ಘಟ್ಟದಲ್ಲಿ ಮೈಮರೆಯದಿರಿ

ಶಾಸಕ ಎಸ್.ಎ.ರಾಮದಾಸ್ ಕಿವಿಮಾತು



ಮೈಸೂರು, ಜ.18(ಎಂಕೆ)– ಎಸ್‌ಎಸ್‌ಎಲ್‌ಸಿ ಎಂಬುದು ವಿದ್ಯಾರ್ಥಿಗಳ ಜೀವನದ ತಿರುವಿನ ಘಟ್ಟ, ಈ ಹಂತದಲ್ಲಿ ಮೈಮರೆಯಬೇಡಿ ಎಂದು ಶಾಸಕ ಎಸ್.ಎ.ರಾಮದಾಸ್ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ಕುವೆಂಪುನಗರದ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳು ಮತ್ತು ಪೋಷಕರೊಂದಿಗಿನ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅನುತ್ತೀರ್ಣಗೊಂಡಲ್ಲಿ ನಿಮ್ಮ ಬದುಕಿನ ಭವಿಷ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಇದು ಮಕ್ಕಳಿಗೆ ಮಾತ್ರವಲ್ಲ, ಅವರ ಪೋಷಕರಿಗೂ ಅನ್ವಯಿಸುತ್ತದೆ ಎಂದು ಎಚ್ಚರಿಸಿದರು. ಇಂದು ಮಕ್ಕಳನ್ನು ದಾರಿ ತಪ್ಪಿಸುವ ಮಂದಿ ಹೆಚ್ಚಿದ್ದಾರೆ. ಅಂತಹವರ ಕಡೆಗೆ ಮಕ್ಕಳು ವಾಲದಂತೆ ಪೋಷಕರು ಎಚ್ಚರ ವಹಿಸಬೇಕು. ಮುಂದಿನ ಎರಡು ವರ್ಷಗಳ ಕಾಲ ಅವರ ಮೇಲೆ ನಿಗಾ ವಹಿಸಿದರೆ, ಮುಂದಿನ ಭವಿಷ್ಯದ ಹಾದಿಯ ಬಗ್ಗೆ ಅವರಿಗೆ ಅರಿವಾಗುತ್ತದೆ. ಅದಕ್ಕೆ ಪೂರಕವಾದ ವಾತಾವರಣ ಕಲ್ಪಿಸಿಕೊಡಬೇಕಾದ ಹೊಣೆ ಪೋಷಕರ ಮೇಲಿದೆ ಎಂದರು.

ಕ್ಷೇತ್ರ ವ್ಯಾಪ್ತಿಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಕುಳಿತಿರುವ ಎಲ್ಲಾ 4,291 ವಿದ್ಯಾರ್ಥಿಗಳ ಪೋಷಕರಿಗೆ ಪರೀಕ್ಷಾ ದೃಷ್ಟಿಯಿಂದ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಮನವಿ ಪತ್ರವನ್ನು ನೀಡಿದ್ದೇನೆ. ಗುರಿ ಈಡೇರಬೇಕಾದಲ್ಲಿ ಪೋಷಕರಲ್ಲಿ ಬದ್ಧತೆ ಇರಬೇಕಾದುದು ಒಂದೆಡೆಯಾದರೆ, ಶಿಕ್ಷಕರ ಗುರಿ ನಿರ್ದಿಷ್ಟವಾಗಿರಬೇಕು ಎಂದರು. ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ರಾಮಾರಾಧ್ಯ, ಪ್ರಾಂಶುಪಾಲ ಚಿದಾನಂದಮೂರ್ತಿ, ಬಿ.ಆರ್.ಸಿ ಶ್ರೀಕಂಠಸ್ವಾಮಿ, ಎಸ್‌ಡಿಎಂಸಿ ಉಪಾಧ್ಯಕ್ಷ ಹರೀಶ್, ಬಿಆರ್‌ಪಿ ಶ್ರೀಕಂಠಶಾಸ್ತ್ರಿ, ಅನುಪಾಲನಾಧಿಕಾರಿಗಳು ಹಾಗೂ ಶಿಕ್ಷಕರು ಉಪಸ್ಥಿತರಿದ್ದರು.

ರೈಲು ಟಿಕೆಟ್ ಬುಕಿಂಗ್‌ಗೆ ಕನ್ನಡ ಆ್ಯಪ್ ಮೂಲಕ ಅವಕಾಶ

ಮೈಸೂರು, ಜ.18– ಆ್ಯಪ್ ಮೂಲಕ ಕನ್ನಡದಲ್ಲಿ ಕಾಯ್ದಿರಿಸದ ರೈಲು ಟಿಕೆಟ್ ಬುಕ್ಕಿಂಗ್ ಮಾಡಲು ಅವಕಾಶ ನೀಡುವ ಮೂಲಕ ನೈರುತ್ಯ ರೈಲ್ವೆ ರೈಲು ಪ್ರಯಾಣಿಕರಿಗೆ ಸಿಹಿ ಸುದ್ದಿ ನೀಡಿದೆ. ಈ ಅಪ್ಲಿಕೇಶನ್ ಮೂಲಕ ಟಿಕೆಟ್ ಬುಕಿಂಗ್, ರದ್ದತಿಗಳು, ಪಿಟಿಎಫ್‌ಎಂ ಮತ್ತು ಸೀಸನ್ ಟಿಕೆಟ್‌ಗಳನ್ನು ಖರೀದಿಸಬಹುದು ಎಂದು ಮಾಹಿತಿ ನೀಡಲಾಗಿದೆ. ಇನ್ಮುಂದೆ ರೈಲು ಟಿಕೆಟ್ ಬುಕ್ ಮಾಡುವುದಕ್ಕೆ ಸರದಿ ಸಾಲಿನಲ್ಲಿ ನಿಲ್ಲಬೇಕಾಗಿಲ್ಲ. ನಿಮ್ಮ ಕೈನಲ್ಲಿರುವ ಮೊಬೈಲ್ ಮೂಲಕ ಟಿಕೆಟ್ ಪಡೆಯಬಹುದಾಗಿದೆ. ನನಗೆ ಕನ್ನಡ ಭಾಷೆ ಮಾತ್ರ ಬರುವುದು ಹಾಗಾಗಿ ನನಗೆ ಫೋನ್‌ನಲ್ಲಿ ಟಿಕೆಟ್ ಬುಕ್ ಮಾಡೋದಕ್ಕೆ ಗೊತ್ತಿಲ್ಲ ಎನ್ನುವ ಹಾಗಿಲ್ಲ. ಇಂದಿನಿಂದ ಕನ್ನಡದಲ್ಲೇ ರೈಲು ಬುಕ್ಕಿಂಗ್ ಸೇವೆ ಲಭ್ಯವಾಗಲಿದೆ. ಮೊಬೈಲ್ ಫೋನ್‌ನಲ್ಲಿರುವ ಪ್ಲೇ ಸ್ಟೋರ್ ಮೂಲಕ ಕ್ಷಣ ಮಾತ್ರದಲ್ಲಿ ಕನ್ನಡದಲ್ಲೇ ರೈಲು ಬುಕ್ಕಿಂಗ್ ಮಾಡಲು ಹೊಸ ಸೌಲಭ್ಯವನ್ನು ಜನ ಸಾಮಾನ್ಯರಿಗೆ ಕಲ್ಪಿಸಲಾಗಿದೆ ಎಂದು ನೈರುತ್ಯ ರೈಲ್ವೆ ಮೈಸೂರಿನ ವಿಭಾಗೀಯ ವ್ಯವಸ್ಥಾಪಕರು ಟ್ವೀಟ್ ಮೂಲಕ ತಿಳಿಸಿದ್ದಾರೆ. ನಿಮ್ಮ ಮೊಬೈಲ್‌ನಲ್ಲಿ ಆ್ಯಪ್ ಸ್ಟೋರ್‌ಗಳಲ್ಲಿ UTS ಮೊಬೈಲ್ ಅಪ್ಲಿಕೇಶನ್ ಅನ್ನು ಡೌನ್‌ಲೋಡ್ ಮಾಡಿ. R-Wallet ರೀಚಾರ್ಜ್‌ನಲ್ಲಿ ಶೇ.3 rxfqu ಬೋನಸ್ ಪಡೆಯಬಹುದಾಗಿದೆ. ರೈಲ್ವೆ ಸಂಬಂಧಿತ ಎಲ್ಲ ರೀತಿಯ ವಿಚಾರಣೆಗಾಗಿ 139ಕ್ಕೆ ಕರೆ ಮಾಡಲು ತಿಳಿಸಿದ್ದಾರೆ.

ಅಭಿಯಂತರರ ಐದು ದಿನಗಳ ರಾಷ್ಟ್ರೀಯ ನಾಟಕೋತ್ಸವಕ್ಕೆ ಚಾಲನೆ

ಕೊರೊನಾ ನಂತರ ರಂಗ ಚಟುವಟಿಕೆಗಳು ಆರಂಭ: ಸಾಹಿತಿ ಶಿವಪ್ರಕಾಶ್ ಸಂತಸ

ಮೈಸೂರು, ಜ.18(ಎಸ್‌ಪಿಎನ್)–ಮೈಸೂರಿನ ಅಭಿಯಂತರರು ಹಮ್ಮಿಕೊಂಡಿರುವ ಐದು ದಿನಗಳ ರಾಷ್ಟ್ರೀಯ ನಾಟಕೋತ್ಸವಕ್ಕೆ ಹಿರಿಯ ಸಾಹಿತಿ ಹೆಚ್.ಎಸ್.ಶಿವಪ್ರಕಾಶ್ ಬುಧವಾರ ಚಾಲನೆ ನೀಡಿದರು. ಮೈಸೂರು ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಅಭಿಯಂತರರು ಹಾಗೂ ಬೆಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಆಯೋಜಿಸಲಾಗಿದ.

ಮೈಸೂರಿನಲ್ಲಿ ರಂಗಭೂಮಿ ಚಟುವಟಿಕೆಗಳು ಜೀವಂತವಾಗಿರಲು ಹವ್ಯಾಸಿ ತಂಡಗಳ ಕೊಡುಗೆ ಅಪಾರ. ಕೊರೊನಾದಿಂದಾಗಿ ಕಳೆದೆರಡು ವರ್ಷ ರಂಗಭೂಮಿ ಚಟುವಟಿಕೆ ಸಂಪೂರ್ಣ ಸ್ಥಗಿತಗೊಂಡಿತ್ತು. ಮುಂದೆ ರಂಗಭೂಮಿ ಚಟುವಟಿಕೆಗಳು ಸಂಪೂರ್ಣ ನಿಂತು ಹೋಗಬಹುದು ಎಂಬ ಅನುಮಾನ ಅನೇಕ ರಂಗಕರ್ಮಿಗಳನ್ನು ಆವರಿಸಿತ್ತು. ಆದರೆ, ಎಲ್ಲರ ಅನುಮಾನಗಳನ್ನು ಹುಸಿಯಾಗಿಸಿ, ಪ್ರಸ್ತುತ ರಾಜ್ಯಾದ್ಯಂತ ರಂಗಭೂಮಿ ಚಟುವಟಿಕೆಗಳು ಪೂರ್ಣ ಪ್ರಮಾಣದಲ್ಲಿ ಆರಂಭವಾಗಿರುವುದು ಸಂತೋಷದ ಸಂಗತಿ ಎಂದರು.

ಈ ಹಿಂದೆ ನಾಟಕ ತಾಲೀಮು ವೇಳೆ ಸಂದರ್ಭಕ್ಕೆ ತಕ್ಕಂತೆ ಕೆಲವು ಸಂಭಾಷಣೆಗಳನ್ನು ಕಲಾವಿದರು ವೇದಿಕೆಯಲ್ಲಿ ಅಳವಡಿಸಿಕೊಳ್ಳುತ್ತಿದ್ದರು. ಇದೀಗ ಈ ಕ್ರಮ ಹೊಸ ರೂಪ ಪಡೆದಿದೆ. ರಂಗಭೂಮಿಯಲ್ಲಿ ಹೊಸ ಪ್ರಯೋಗಗಳಿಗೆ ಅವಕಾಶಗಳಿವೆ ಎಂದ ಅವರು, ರಂಗಭೂಮಿಗೆ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಆಕರ್ಷಿತರಾಗಿ ನಾಟಕಗಳಲ್ಲಿ ಅಭಿನಯಿಸುತ್ತಿರುವುದು ಉತ್ತಮ ಸಂಗತಿ ಎಂದರು.



ಅಭಿಯಂತರರ ಸಂಸ್ಥೆ ಕಳೆದ 30 ವರ್ಷಗಳಿಂದ ರಂಗಭೂಮಿಯಲ್ಲಿ ಗುರುತಿಸಿಕೊಂಡು ಯುವಕರು ರಂಗಭೂಮಿಯತ್ತ ಬರಲು ಪ್ರೋತ್ಸಾಹಿಸುತ್ತಿದೆ. ಇದು ಮೈಸೂರಿನ ಸಾಂಸ್ಕೃತಿಕ ಲೋಕಕ್ಕೆ ದೊಡ್ಡ ಕೊಡುಗೆ ಎಂದರೆ ತಪ್ಪಾಗಲಾರದು. ಇದರ ಜೊತೆಗೆ ಕದಂಬ ರಂಗವೇದಿಕೆ, ಸಂಚಲನ, ನಿರಂತರ, ರಂಗವಲ್ಲಿ ಸೇರಿದಂತೆ ಇತರೆ ಹವ್ಯಾಸಿ ತಂಡಗಳು ಸಾಲುಸಾಲು ನಾಟಕೋತ್ಸವ ಹಮ್ಮಿಕೊಂಡು ಮೈಸೂರಿನ ರಂಗಭೂಮಿ ಕೀರ್ತಿಯನ್ನು ದೇಶವ್ಯಾಪಿ ಹೆಚ್ಚಿಸಿದೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ ಮಾತನಾಡಿ, ರಂಗಭೂಮಿಯಲ್ಲಿ ಕಲಿಕೆ ನಿರಂತರ. ಆದರೆ, ಯುವಕ–ಯುವತಿಯರನ್ನು ರಂಗಭೂಮಿಯಲ್ಲಿ ತೊಡಗಿಸುವುದರಿಂದ ಉತ್ತಮ ಸಮಾಜ ನಿರ್ಮಾಣ ಸಾಧ್ಯವಿದೆ. ಈ ನಿಟ್ಟಿನಲ್ಲಿ ಅಭಿಯಂತರರು ಸಂಸ್ಥೆ ಶ್ರಮಿಸುತ್ತಿರುವುದು ಸಂತಸದ ವಿಷಯ ಎಂದರಲ್ಲದೆ, ಒಂದು ಸಂಸ್ಥೆ 30 ವರ್ಷಗಳಿಂದ ರಂಗಭೂಮಿಯಲ್ಲಿ ತೊಡಗಿಸಿಕೊಂಡು ರಾಷ್ಟ್ರೀಯ ನಾಟಕೋತ್ಸವ ಆಯೋಜಿಸುವುದು ಸುಲಭದ ಮಾತಲ್ಲ. ಈ ಕೆಲಸವನ್ನು ಅಭಿಯಂತರ ಸಂಸ್ಥೆ ಸೇರಿದಂತೆ ಇತರೆ ಹವ್ಯಾಸಿ ತಂಡಗಳ ಕಲಾಸೇವೆ ನಿಜಕ್ಕೂ ಅಭಿನಂದನಾರ್ಹ ಎಂದರು.

ಈ ಸಂದರ್ಭದಲ್ಲಿ ಬೆಂಗಳೂರು ಎನ್‌ಎಸ್‌ಟಿ ಕೇಂದ್ರದ ನಿರ್ದೇಶಕಿ ವೀಣಾ ಶರ್ಮಾ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಸುದರ್ಶನ, ಅಭಿಯಂತರರು ಸಂಸ್ಥೆಯ ಅಧ್ಯಕ್ಷ ಸುರೇಶ್ ಬಾಬು ಸೇರಿದಂತೆ ಇನ್ನಿತರರಿದ್ದರು. ತದನಂತರ ಮಂಗಳೂರು ಅಸ್ತಿತ್ವ ತಂಡದ ಕಲಾವಿದರು ಅಭಿನಯದ, ಅರುಣ್ ಲಾಲ್ ನಿರ್ದೇಶನದ ಎಂ.ಪಿ.ರಾಜೇಶ್ ರಚಿತ ಕೆಂಡೋನಿಯನ್ಸ್ ನಾಟಕ ಪ್ರದರ್ಶನಗೊಂಡಿತು.

ಪ್ರದರ್ಶನಗೊಳ್ಳಲಿರುವ ನಾಟಕದ ವಿವರ: ಗುರುವಾರ (ಜ.19)ದಂದು ಮುಂಬೈನ ಅಭಿನಯ ಕಲ್ಯಾಣ ಕಲಾವಿದರು ಅಭಿನಯಿಸುವ 'ಸಾಮ್ರಾಜ್ಯಂ', ಜ.20 ರಂದು ನವದೆಹಲಿಯ ಮೆರಾಕಿ ಥಿಯೇಟರ್ ಗ್ರೂಪ್ ಪ್ರದರ್ಶಿಸುವ 'ಇನ್ ಕ್ವೆಷ್ಟ್ ಆಫ್ ಪೀಸ್', ಜ.21ರಂದು ಬೆಂಗಳೂರಿನ ರಂಗಾಸ್ಥೆ ಟ್ರಸ್ಟ್ ಅರ್ಪಿಸುವ 'ದ್ರೋಪತಿ ಹೇಳ್ತವ್ಳೆ', ಜ.22ರಂದು ಬೆಂಗಳೂರು ಅಭಿಜ್ಞಾ ಕಲಾತಂಡ ಅಭಿನಯಿಸುವ 'ಚೋರಪುರಾಣ' ನಾಟಕಗಳು ಪ್ರದರ್ಶನಗೊಳ್ಳಲಿವೆ.

ವೈದ್ಯೆ ಆತ್ಮಹತ್ಯೆ

ಮೈಸೂರು, ಜ.18–ಮೈಸೂರಿನಲ್ಲಿ ವೈದ್ಯೆಯೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಪ್ರಕರಣ ನಗರದ ಶ್ರೀರಾಂಪುರದಲ್ಲಿ ನಡೆದಿದೆ.

ಡಾ.ಗಂಗಾ ಭಾಗೀರಥಿ (54) ಆತ್ಮಹತ್ಯೆ ಮಾಡಿಕೊಂಡ ವೈದ್ಯೆ. ಇವರು ಹೆಚ್.ಡಿ.ಕೋಟೆಯ ಖಾಸಗಿ ಕ್ಲಿನಿಕ್ ಹೊಂದಿದ್ದರು. ಕೆಲ ವರ್ಷಗಳಿಂದ ಮಾನಸಿಕ ಸಮಸ್ಯೆಯಿಂದ ಬಳಲುತ್ತಿದ್ದ ಡಾ. ಗಂಗಾ ಭಾಗೀರಥಿ ಅವರು ಮಂಗಳವಾರ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ತಮ್ಮ ತಾಯಿ ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಪುತ್ರಿಯರಾದ ಅನುರಾಜ, ಅಭಿರಾಮಿ ಪೊಲೀಸರಿಗೆ ಮಾಹಿತಿ ನೀಡಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಅಶೋಕಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ — ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಮೈಸೂರು ಮಿತ್ರ 43 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 9 ರಲ್ಲಿ

ಯುವತಿ ಕೊಂದು ಆತ್ಮಹತ್ಯೆಗೆ ಶರಣಾಗಿದ್ದ ಹಂತಕನ ಮೃತದೇಹ ಪತ್ತೆ

- ಮೂರು ದಿನಗಳ ಸತತ ಕಾರ್ಯಾಚರಣೆ ನಂತರ ಕೊಲೆ ಪ್ರಕರಣ ಬಯಲು
- ಚಿನ್ನಾಭರಣ ಅಂಗಡಿ ದರೋಡೆ ಪ್ರಕರಣದಲ್ಲಿ ಭಾಗಿಯಾಗಿದ್ದ ಆರೋಪಿ


ಕೊಲೆಯಾದ ಆರತಿ

ಮಡಿಕೇರಿ, ಜ.18– ವಿರಾಜಪೇಟೆ ತಾಲೂಕಿನ ನಾಂಗಾಲ ಗ್ರಾಮದಲ್ಲಿ ಭಾನುವಾರ (ಜ.15) ಸಂಜೆ ನಡೆದಿದ್ದ ಬುಟ್ಟಿಯಂಡ ಆರತಿ(24) ಕೊಲೆ ಪ್ರಕರಣದ ಆರೋಪಿ ಕೆ.ತಿಮ್ಮಯ್ಯ(33) ಕೂಡ ಆತ್ಮಹತ್ಯೆ ಮಾಡಿಕೊಂಡಿದ್ದು, ಆತನ ಮೃತದೇಹ ರುದ್ರುಗುಪ್ಪೆ ಗ್ರಾಮದ ಕೆರೆಯೊಂದರಲ್ಲಿ ಪತ್ತೆಯಾಗಿದೆ.

ಆರೋಪಿ ತಿಮ್ಮಯ್ಯನ ಮೃತದೇಹ ಬುಧವಾರ ಮುಂಜಾನೆ 2 ಗಂಟೆಯ ವೇಳೆಗೆ 40 ಅಡಿ ಆಳದಲ್ಲಿ ಪತ್ತೆಯಾಗಿದ್ದು, ಮುಳುಗು ತಜ್ಞರು ದೇಹವನ್ನು ಹೊರ ತೆಗೆದಿದ್ದಾರೆ. ಬಳಿಕ ಸ್ಥಳದಲ್ಲಿ ಮಹಜರು ನಡೆಸಿ ವಿರಾಜಪೇಟೆ ಸರಕಾರಿ ಆಸ್ಪತ್ರೆಗೆ ಮೃತದೇಹ ಸ್ಥಳಾಂತರಿಸಿ, ಮರಣೋತ್ತರ ಪರೀಕ್ಷೆ ನಂತರ ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ಪ್ರಕರಣ ಹಿನ್ನೆಲೆ: ವಿರಾಜಪೇಟೆ ನಾಂಗಾಲ ನಿವಾಸಿ ಬುಟ್ಟಿಯಂಡ ಆರತಿ ಮತ್ತು ತಿಮ್ಮಯ್ಯ ಪರಿಚಿತರಾಗಿದ್ದು, ಕೊಲೆ ನಡೆಯುವ 3 ದಿನಗಳ ಮುನ್ನ ಇವರಿಬ್ಬರ ನಡುವೆ ಮೊಬೈಲ್‌ನಲ್ಲಿ ತೀವ್ರ ಮಾತಿನ ಚಕಮಕಿ ನಡೆದಿತ್ತು ಎನ್ನಲಾಗಿದೆ. ಈ ದ್ವೇಷದಿಂದ ಭಾನುವಾರ ಸಂಜೆ ಆರತಿಗೆ ಕರೆ ಮಾಡಿದ್ದ ತಿಮ್ಮಯ್ಯ ಆಕೆಯ ಮನೆಯ ಸಮೀಪ ಕತ್ತಿಯಿಂದ ಕಡಿದು ಬರ್ಬರವಾಗಿ ಕೊಲೆ ಮಾಡಿದ್ದ. ಆದರೆ ಕೊಲೆ ಆರೋಪಿಯೂ ಆತ್ಮಹತ್ಯೆ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ ಹತ್ಯೆಯ ಹಿಂದಿನ ಉದ್ದೇಶ ರಹಸ್ಯವಾಗಿ ಉಳಿದಿದ್ದು, ಪೊಲೀಸರ ತನಿಖೆಯಿಂದ ಹೊರ ಬರಬೇಕಿದೆ.

ಆತ್ಮಹತ್ಯೆ ಶಂಕೆಯಿತ್ತು: ಕೊಲೆ ಆರೋಪಿ ತಿಮ್ಮಯ್ಯ ಬಗ್ಗೆ ಪ್ರಾಥಮಿಕ ಮಾಹಿತಿ ಕಲೆ ಹಾಕಿದ್ದ ಪೊಲೀಸರು ಸೋಮವಾರ ಬೆಳಗ್ಗೆ ಆರೋಪಿಯ ಬಂಧನಕ್ಕಾಗಿ ರುದ್ರುಗುಪ್ಪೆ ಗ್ರಾಮದಲ್ಲಿರುವ ಆತನ ಮನೆಗೆ ತೆರಳಿದ್ದರು. ಈ ಸಂದರ್ಭ ಮನೆಯ ಮುಂಭಾಗದ ಕೆರೆಯೊಂದರ ದಡದಲ್ಲಿ ಆರೋಪಿಯ ಜಾಕೆಟ್, ಮೊಬೈಲ್, ಹೆಲ್ಮೆಟ್, ಮದ್ಯ ಮತ್ತು ಕೀಟನಾಶಕದ ಬಾಟಲಿ ಪತ್ತೆಯಾಗಿತ್ತು. ಆರತಿಯನ್ನು ಕೊಲೆಗೈದ ಬಳಿಕ ಆರೋಪಿ ಕೂಡ ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಪೊಲೀಸರಿಗೆ ಶಂಕೆ ವ್ಯಕ್ತವಾಗಿತ್ತು.

ಮೂರು ತನಿಖಾ ತಂಡ: ಆರೋಪಿ ತಿಮ್ಮಯ್ಯನ ಹಿನ್ನೆಲೆ ಕಲೆ ಹಾಕಿದ ಸಂದರ್ಭ ಆತ 2011ರಲ್ಲಿ ಬೆಂಗಳೂರು ಚಿನ್ನಾಭರಣ ಮಳಿಗೆ ದರೋಡೆ ಪ್ರಕರಣದಲ್ಲಿ ಭಾಗಿಯಾಗಿದ್ದ ವಿಚಾರ ಬೆಳಕಿಗೆ ಬಂದಿತ್ತು. ಈ ಹಿನ್ನೆಲೆಯಲ್ಲಿ ಮಡಿಕೇರಿ ಡಿವೈಎಸ್‌ಪಿ ಗಜೇಂದ್ರ ಪ್ರಸಾದ್ ಮತ್ತು ವಿರಾಜಪೇಟೆ ವೃತ್ತ ನಿರೀಕ್ಷಕ ಶಿವಪ್ರಸಾದ್ ನೇತೃತ್ವದಲ್ಲಿ 3 ವಿಶೇಷ ತನಿಖಾ ತಂಡಗಳನ್ನು ರಚಿಸಲಾಗಿತ್ತು. ಒಂದು ತಂಡ ಆರೋಪಿಗಾಗಿ ಗ್ರಾಮದಲ್ಲಿ ಕೂಂಬಿಂಗ್ ನಡೆಸುತ್ತಿದ್ದರೆ, ಮತ್ತೊಂದು ತಂಡ ಕೆರೆಯಲ್ಲಿ ಮೃತದೇಹಕ್ಕಾಗಿ ಶೋಧ ಕಾರ್ಯಾಚರಣೆಯಲ್ಲಿ ತೊಡಗಿತ್ತು. ಪೊಲೀಸರ ತನಿಖೆಯ ದಿಕ್ಕು ತಪ್ಪಿಸುವ ಸಲುವಾಗಿ ಆರೋಪಿ ತಿಮ್ಮಯ್ಯ ಕೆರೆ ಬಳಿ ಆತ್ಮ ಹತ್ಯೆಯ ಕಥೆ ಕಟ್ಟಿ ಬೇರೆ ಊರಿಗೆ ಪರಾರಿಯಾಗಿರಬಹುದು ಎಂಬ ಅನುಮಾನದಿಂದ 3ನೇ ತಂಡ ಆತನ ಪತ್ತೆಗಾಗಿ ಕಾರ್ಯಾಚರಣೆ ನಡೆಸುತ್ತಿತ್ತು.

ಮೃತದೇಹಕ್ಕೆ ಶೋಧ: ಸೋಮವಾರ ಸಂಜೆವರೆಗೂ ಆರೋಪಿಯ ಮೃತದೇಹಕ್ಕಾಗಿ ಮುಳುಗು ತಜ್ಞರು ಮತ್ತು ಪೊಲೀಸರು ಭಾರೀ ಆಳದ ಕೆರೆಯಲ್ಲಿ ಶೋಧ ಕಾರ್ಯ ನಡೆಸಿದ್ದರು. ಅತೀವ ಆಳ ಮತ್ತು ಭಾರೀ ಪ್ರಮಾಣದ ಹೂಳು ತುಂಬಿದ್ದರಿಂದ ಕಾರ್ಯಾಚರಣೆಗೆ ಅಡ್ಡಿಯಾಗಿತ್ತು. ಹೀಗಾಗಿ ಮಂಗಳವಾರ ಬೆಳಗ್ಗೆ ಮಿನಿ ಹಿಟಾಚಿ ಯಂತ್ರ ಬಳಸಿ ಕೆರೆಯ ದಂಡೆ ಕೊರೆದು ಮತ್ತು ಪಂಪ್‌ಗಳನ್ನು ಬಳಸಿ ಕೆರೆಯ ನೀರು ಖಾಲಿ ಮಾಡಲಾಗುತ್ತಿತ್ತು. ಬುಧವಾರ ಬೆಳಗಿನ ಜಾವ ನೀರಿನ ಪ್ರಮಾಣ ಇಳಿಕೆ ಕಾಣುವ ಸಂದರ್ಭ ಮೃತದೇಹ ನೀರಿನಲ್ಲಿ ತೇಲಿ ಮೇಲೆ ಬಂದಿದೆ. ಬಳಿಕ ಪೊಲೀಸರು ಮೃತದೇಹವನ್ನು ಹೊರತೆಗೆದು ವಿರಾಜಪೇಟೆ ಸರಕಾರಿ ಆಸ್ಪತ್ರೆಯ ಶವಾಗಾರಕ್ಕೆ ಸ್ಥಳಾಂತರಿಸಿದರು.

ತನಿಖೆ ಪ್ರಗತಿಯಲ್ಲಿದೆ: ಬುಟ್ಟಿಯಂಡ ಆರತಿ ಕೊಲೆ ಪ್ರಕರಣದ ಆರೋಪಿ ತಿಮ್ಮಯ್ಯ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂಬ ಶಂಕೆ ಆತನ ಮೃತದೇಹ ದೊರೆಯುವ ಮೂಲಕ ದೃಢಪಟ್ಟಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕ್ಯಾಪ್ಟನ್ ಮಲ್ಜೀರ ಅಯ್ಯಪ್ಪ ಸ್ಪಷ್ಟಪಡಿಸಿದ್ದಾರೆ. ಈ ಕುರಿತು ಮಡಿಕೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಎಸ್.ಪಿ. ಅಯ್ಯಪ್ಪ, ಕೊಲೆ ಕೃತ್ಯ ನಡೆದ ಸಂದರ್ಭವೇ ಆರೋಪಿ ಯಾರು ಎಂಬ ಮಾಹಿತಿ ದೊರಕಿತ್ತಲ್ಲದೇ, ಆತನ ಬಂಧನಕ್ಕಾಗಿ ವಿಶೇಷ ತಂಡಗಳನ್ನು ರಚಿಸಲಾಗಿತ್ತು. ತನಿಖೆಯ ಸಂದರ್ಭ ರುದ್ರುಗುಪ್ಪೆಯ ಆತನ ಮನೆ ಬಳಿ ಇರುವ ಕೆರೆ ದಂಡೆಯಲ್ಲಿ ಆರೋಪಿ ಬಳಸುತ್ತಿದ್ದ ವಸ್ತುಗಳು ಪತ್ತೆಯಾಗಿದ್ದು, ಆತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂಬುದನ್ನು ಪುಷ್ಟೀಕರಿಸುತ್ತಿತ್ತು. ಹೀಗಿದ್ದರೂ ವಿವಿಧ ಆಯಾಮಗಳಲ್ಲಿ ತನಿಖೆ ನಡೆಸಲಾಗುತ್ತಿತ್ತು ಎಂದು ಮಾಹಿತಿ ನೀಡಿದರು.


ಕೊಲೆ ಆರೋಪಿ ತಿಮ್ಮಯ್ಯ

ಯಾವ ಉದ್ದೇಶಕ್ಕಾಗಿ ಕೊಲೆ ನಡೆದಿದೆ ಎಂಬ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ. ಎರಡೂ ಕುಟುಂಬಗಳಲ್ಲಿ ಮಕ್ಕಳು ಸಾವನ್ನಪ್ಪಿರುವ ಹಿನ್ನೆಲೆಯಲ್ಲಿ ಆ ಕುಟುಂಬಗಳು ದುಃಖದಲ್ಲಿವೆ. ಕೊಲೆಗೆ ಕಾರಣವಾದ ಅಂಶಗಳ ಬಗ್ಗೆಯೂ ತನಿಖೆ ನಡೆಸಲಾಗುತ್ತದೆ ಎಂದು ಹೇಳಿದರು. ಆರೋಪಿ ತಿಮ್ಮಯ್ಯ ಬೆಂಗಳೂರು ಚಿನ್ನಾಭರಣ ಮಳಿಗೆ ದರೋಡೆ ಪ್ರಕರಣದಲ್ಲೂ ಭಾಗಿಯಾಗಿದ್ದ. ಈ ಹಿನ್ನೆಲೆಯಲ್ಲಿ ಬೆಂಗಳೂರು ಸಿ.ಸಿ.ಬಿ. ಪೊಲೀಸರನ್ನು ಸಂಪರ್ಕಿಸಿ ಮಾಹಿತಿ ಕಲೆ ಹಾಕಲಾಗುತ್ತಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕ್ಯಾಪ್ಟನ್ ಮಲ್ಜೀರ ಅಯ್ಯಪ್ಪ ಮಾಹಿತಿ ನೀಡಿದರು.


ತಿಮ್ಮಯ್ಯ ಮೃತದೇಹ

ಚಲಿಸುತ್ತಿದ್ದ ಆಟೋದಲ್ಲಿ ಕಾಣಿಸಿಕೊಂಡ ಬೆಂಕಿ

ಸುಟ್ಟು ಕರಕಲಾದ ಆಟೋ, ಚಾಲಕ ಪಾರು

ಸುಂಟಿಕೊಪ್ಪ, ಜ.18– ಚಲಿಸುತ್ತಿದ್ದ ಆಟೋರಿಕ್ಷಾದಲ್ಲಿ ಆಕಸ್ಮಿಕವಾಗಿ ಬೆಂಕಿ ಕಾಣಿಸಿಕೊಂಡು ಆಟೋ ಸಂಪೂರ್ಣವಾಗಿ ಸುಟ್ಟು ಕರಕಲಾಗಿ ಚಾಲಕ ತನ್ನ ಸಮಯಪ್ರಜ್ಞೆಯಿಂದ ಪಾರಾಗಿರುವ ಘಟನೆ ಸುಂಟಿಕೊಪ್ಪದಲ್ಲಿ ಸಂಭವಿಸಿದೆ.



ಸುಂಟಿಕೊಪ್ಪ ಆಟೋ ಚಾಲಕ ಶಿವರಾಜ್ ತಮ್ಮ ಆಟೋರಿಕ್ಷಾದಲ್ಲಿ ಸುಂಟಿಕೊಪ್ಪದಿಂದ ಮಂಗಳವಾರ ರಾತ್ರಿ 9 ಗಂಟೆಗೆ ಅಂದಗೋವೆಯಲ್ಲಿರುವ ಮನೆಗೆ ತೆರಳುತ್ತಿರುವಾಗ ಮಾರ್ಗ ಮಧ್ಯೆ ತಿಲಕ ಎಸ್ಟೇಟ್ ಬಳಿ ಚಾಲಕನ ಸೀಟ್ ಬಿಸಿಯಾಗಲಾರಂಭಿಸಿದೆ. ಇದರಿಂದ ಅನುಮಾನಗೊಂಡ ಶಿವರಾಜ್ ಆಟೋ ನಿಲ್ಲಿಸಿ ಕೆಳಗಿಳಿದು ಪರಿಶೀಲಿಸಿದಾಗ ಇಂಜಿನ್‌ನ ಸೆನ್ಸಾರ್ ಸರ್ಕ್ಯೂಟ್‌ನಲ್ಲಿ ಬೆಂಕಿ ಕಾಣಿಸಿಕೊಂಡಿದೆ. ಬೆಂಕಿಯ ಜ್ವಾಲೆ ಹರಡುತ್ತಿದ್ದಂತೆಯೇ ಚಾಲಕ ಅಸಹಾಯಕನಾಗಿ ಆಟೋವನ್ನು ಬಿಟ್ಟು ದೂರಕ್ಕೆ ತೆರಳಿದ್ದಾರೆ. ಅಗ್ನಿಯ ಜ್ವಾಲೆಗೆ ಸಿಲುಕಿದ ಆಟೋರಿಕ್ಷಾ ನೋಡು ನೋಡುತ್ತಿದ್ದಂತೆಯೇ ಸಂಪೂರ್ಣವಾಗಿ ಸುಟ್ಟು ಕರಕಲಾಗಿದೆ. ಅದೃಷ್ಟವಶಾತ್ ಚಾಲಕ ತನ್ನ ಸಮಯ ಪ್ರಜ್ಞೆಯಿಂದ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ವಿಷಯ ತಿಳಿದ ಸುಂಟಿಕೊಪ್ಪ ಪೊಲೀಸರು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದು, ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಇಂದು ಶಿವಯೋಗಿ ಸಿದ್ಧರಾಮೇಶ್ವರ, ಮಹಾಯೋಗಿ ವೇಮನ ಜಯಂತಿ

ಮಡಿಕೇರಿ, ಜ.18– ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಶಿವಯೋಗಿ ಸಿದ್ದರಾಮೇಶ್ವರ ಹಾಗೂ ಮಹಾಯೋಗಿ ವೇಮನ ಜಯಂತಿ ಕಾರ್ಯಕ್ರಮವು ಜ.19 ರಂದು ಬೆಳಗ್ಗೆ 10.30 ಗಂಟೆಗೆ ನಗರದ ಭಾರತೀಯ ವಿದ್ಯಾ ಭವನದಲ್ಲಿ ನಡೆಯಲಿದೆ. ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಮತ್ತು ಸಕಾಲ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ. ನಾಗೇಶ್, ಸಂಸದ ಪ್ರತಾಪ್ ಸಿಂಹ, ಶಾಸಕರಾದ ಎಂ.ಪಿ. ಅಪ್ಪಚ್ಚು ರಂಜನ್, ಕೆ.ಜಿ. ಬೋಪಯ್ಯ, ಎಂ.ಪಿ. ಸುಜಾ ಕುಶಾಲಪ್ಪ ಎಸ್.ಎಲ್.ಭೋಜೇಗೌಡ, ಆಯನೂರು ಮಂಜುನಾಥ್, ಕರ್ನಾಟಕ ಜೀವ ವೈವಿಧ್ಯ ಮಂಡಳಿ ಅಧ್ಯಕ್ಷ ನಾಪಂಡ ಎಂ.ರವಿಕಾಳಪ್ಪ, ನಗರಸಭೆ ಅಧ್ಯಕ್ಷೆ ಅನಿತಾ ಪೂವಯ್ಯ ಇತರರು ಪಾಲ್ಗೊಳ್ಳಲಿದ್ದಾರೆ.

ಇಂದಿನಿಂದ ಎರಡು ದಿನ ವಿದ್ಯುತ್ ವ್ಯತ್ಯಯ

ಮಡಿಕೇರಿ, ಜ.18– ಪೊನ್ನಂಪೇಟೆ ವಿದ್ಯುತ್ ಉಪ–ಕೇಂದ್ರದಿಂದ ಹೊರಹೋಗುವ ಬಾಳೆಲೆ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾಮಗಾರಿ ಕೈಗೊಳ್ಳಬೇಕಿರುವುದರಿಂದ ಜ.19 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ ಕಿರುಗೂರು, ನಲ್ಲೂರು, ಪೊನ್ನಪ್ಪಸಂತೆ, ಸುಳುಗೋಡು, ಬಾಳೆಲೆ, ಮತ್ತೂರು, ಕಾನೂರು, ದೇವನೂರು ಹಾಗೂ ಸುತ್ತಮುತ್ತಲ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಹುದಿಕೇರಿ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾಮಗಾರಿ ಕೈಗೊಳ್ಳಬೇಕಿರುವುದರಿಂದ ಜ.20 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆವರೆಗೆ ಬಲ್ಯಮಂಡೂರು, ಚಿಕ್ಕಮಂಡೂರು, ತಾವರೆಕೆರೆ, ಮುಗುಟಗೇರಿ ಹಾಗೂ ಸುತ್ತಮುತ್ತಲ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಭತ್ತ ಖರೀದಿ ಕೇಂದ್ರಕ್ಕೆ ಆಗ್ರಹಿಸಿ ರೈತರಿಂದ ಭತ್ತ ಸುರಿದು ಪ್ರತಿಭಟನೆ



ಶ್ರೀರಂಗಪಟ್ಟಣ, ಜ.18– ಸರ್ಕಾರ ಇನ್ನೂ ಭತ್ತ ಖರೀದಿ ಕೇಂದ್ರ ತೆರೆಯದೆ ಮೀನಾ–ಮೇಷ ಎಣಿಸುತ್ತಿದೆ ಎಂದು ಆರೋಪಿಸಿ ರೈತರು ತಾಲೂಕು ಕಚೇರಿ ಮುಂದೆ ಭತ್ತ ಸುರಿದು ಪ್ರತಿಭಟನೆ ನಡೆಸಿದರು.

ತಾಲೂಕು ರೈತ ಸಂಘದ ಅಧ್ಯಕ್ಷ ಮರಳಗಾಲ ಕೃಷ್ಣೇಗೌಡ ನೇತೃತ್ವದಲ್ಲಿ ತಾಲೂಕು ಕಚೇರಿ ಮುಂದೆ ಜಮಾಯಿಸಿದ ರೈತರು, ಭತ್ತದ ಮೂಟೆಗಳನ್ನು ತಂದು ರಾಶಿ ಸುರಿದು ಸರ್ಕಾರದ ವಿರುದ್ಧ ಘೋಷಣೆ ಕೂಗಿ ಕೆಲ ಕಾಲ ಪ್ರತಿಭಟನೆ ನಡೆಸಿದರು.

ಸರ್ಕಾರ ಸುಗ್ಗಿಗೂ ಮುನ್ನ ಭತ್ತ ಖರೀದಿ ಕೇಂದ್ರ ತೆರೆಯುವಂತೆ ಹಲವು ಬಾರಿ ಪ್ರತಿಭಟನೆ ನಡೆಸಿದ್ದರೂ ಸಹ ಇಲ್ಲಿವರೆಗೆ ಭತ್ತ ಕೇಂದ್ರ ತೆರೆಯದೇ ರೈತರ ಜೊತೆ ಚೆಲ್ಲಾಟವಾಡುತ್ತಿದೆ. ರೈತರು ತಮ್ಮ ಜಮೀನುಗಳಲ್ಲಿ ಭತ್ತ ಹಾಕಿ ಕೊಂಡು ಕಾಯುವ ಪರಿಸ್ಥಿತಿ ನಿರ್ಮಾಣ ವಾಗಿದೆ. ಜೊತೆಗೆ ಸರ್ಕಾರ ರೈತರ ಸಮಸ್ಯೆಗಳನ್ನು ಬಗೆಹರಿಸಲು ಸಂಪೂರ್ಣವಾಗಿ ವಿಫಲವಾಗಿದ್ದು, ಭತ್ತ ದಳ್ಳಾಳಿಗಳ ಪಾಲಾಗುತ್ತಿದೆ ಎಂದು ಆಪಾದಿಸಿದರು.

ಸರ್ಕಾರ ಶೀಘ್ರ ಭತ್ತ ಖರೀದಿ ಮಾಡಿ ನಷ್ಟವನ್ನು ರೈತರಿಗೆ ತುಂಬಿಕೊಡುವ ಕೆಲಸ ಮಾಡದಿದ್ದಲ್ಲಿ, ಮುಂದಿನ ದಿನಗಳಲ್ಲಿ ಹೆದ್ದಾರಿಯಲ್ಲಿ ಭತ್ತ ಸುರಿದು ಪ್ರತಿಭಟಿಸಬೇಕಾಗುತ್ತದೆ ಎಂದು ರೈತರು ಎಚ್ಚರಿಸಿದರು. ನಂತರ ಉಪ ತಹಶೀಲ್ದಾರ್ ರೇಖಾ ಅವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಈ ವೇಳೆ ಪಿಎಸ್‌ಎಸ್‌ಕೆ ಮಾಜಿ ನಿರ್ದೇಶಕ ಪಾಂಡು, ರೈತ ಮುಖಂಡರಾದ ಕಡತನಾಳು ಬಾಲಕೃಷ್ಣ, ದೊಡ್ಡಪಾಳ್ಯ ಜಯರಾಮು, ಶಂಕರೇಗೌಡ, ತಡಗವಾಡಿ ನಿಂಗೇಗೌಡ, ಕೆ. ನಾಗರಾಜು, ಶಶಿಕುಮಾರ್, ಚಂದ್ರಪ್ಪ ಸೇರಿದಂತೆ ಇತರರು ಹಾಜರಿದ್ದರು.

ಮಂಡ್ಯ ನಗರಸಭೆ ಸಾಮಾನ್ಯ ಸಭೆ

ಮಿಮ್ಸ್ ಆಸ್ಪತ್ರೆ ಅವ್ಯವಸ್ಥೆ ವಿರುದ್ಧ ಪುರಪಿತೃಗಳ ಆಕ್ರೋಶ



ಮಂಡ್ಯ, ಜ.18– ನಗರದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಎಂದೇ ಕರೆಸಿಕೊಳ್ಳುವ ಮಿಮ್ಸ್ ಅವ್ಯವಸ್ಥೆಯ ಆಗರವಾಗಿದ್ದು, ಕಳೆದ ಹಲವು ವರ್ಷಗಳಿಂದ ಹೆರಿಗೆ ವಾರ್ಡ್‌ನಲ್ಲಿ ಬೆಡ್‌ಗಳ ಸಮಸ್ಯೆಯಿಂದ ಹಿಡಿದು ಕೊರೋನಾ ಸಂದರ್ಭದಲ್ಲಿ ಐಸಿಯು ಬೆಡ್‌ಗಳ ಕೊರತೆ, ಹೆರಿಗೆ ವಾರ್ಡ್‌ನಲ್ಲಿ ಇಲಿ, ಹೆಗ್ಗಣಗಳ ಕಾಟವಿದ್ದು, ಮಿಮ್ಸ್ ಸಿಬ್ಬಂದಿ ಇವೆಲ್ಲವನ್ನು ನಿವಾರಿಸಲು ವಿಫಲವಾಗಿದೆ ಎಂದು ನಗರಸಭೆ ಸಾಮಾನ್ಯ ಸಭೆಯಲ್ಲಿ ಪುರಪಿತೃಗಳು ಆಕ್ರೋಶ ವ್ಯಕ್ತಪಡಿಸಿದರು.


ನಗರದ ನಗರಸಭೆಯ ಧರಣಪ್ಪ ಸಭಾಂಗಣದಲ್ಲಿ ಅಧ್ಯಕ್ಷ ಎಚ್.ಎಸ್.ಮಂಜು ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಹತ್ತಕ್ಕೂ ಹೆಚ್ಚು ನಗರಸಭಾ ಸದಸ್ಯರು ಮಿಮ್ಸ್ ಅವ್ಯವಸ್ಥೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಅಂತಾರೆ ಆದರೆ ರೋಗಿಗಳಿಗೆ ಹೊರಗಿನಿಂದ ಔಷಧಿ ತರಲು ಚೀಟಿ ಬರೆಯುತ್ತಾರೆ ಎಂದು ದೂರಿದರು. ಸದಸ್ಯರ ನೂರೆಂಟು ಪ್ರಶ್ನೆಗಳಿಗೆ ಅಸಹಾಯಕತೆಯಿಂದ ಉತ್ತರಿಸಿದ ಆರ್‌ಎಂಓ ಡಾ.ವೆಂಕಟೇಶ್, ಆಸ್ಪತ್ರೆಯಲ್ಲಿ ಅವ್ಯವಸ್ಥೆ ಇರುವುದು ಸತ್ಯ. ವೈದ್ಯರು, ದಾದಿಯರ ಕೊರತೆ ಸಾಕಷ್ಟಿದೆ. 280 ಶೌಚಾಲಯಗಳಿಗೆ ಕೇವಲ 16 ಮಂದಿ ಸ್ವಚ್ಛತಾಗಾರರಿದ್ದಾರೆ. 120 ನಾನ್ ಕ್ಲಿನಿಕಲ್ ಸಿಬ್ಬಂದಿ ನೇಮಕಕ್ಕೆ ಪ್ರಸ್ತಾವನೆ ಕಳುಹಿಸಲಾಗಿದೆ ಎಂದರು.

ಮಳೆ ಬಂದರೆ ಹೆರಿಗೆ ವಾರ್ಡ್‌ನೊಳಗೆ ನೀರು ತುಂಬಿಕೊಳ್ಳುತ್ತಿದ್ದು, ಅಲ್ಲಿನ ಗರ್ಭಿಣಿಯರು, ಬಾಣಂತಿಯರ ಗತಿ ಏನು?. ಈ ವ್ಯವಸ್ಥೆ ಸರಿಪಡಿಸುವಂತೆ ಹಿಂದೆ ಇದ್ದ ಮಿಮ್ಸ್ ನಿರ್ದೇಶಕರಿಗೂ ಪತ್ರ ಬರೆದಿದ್ದು, ಕ್ರಮ ಮಾತ್ರ ಕೈಗೊಂಡಿಲ್ಲ ಎಂದು ಸದಸ್ಯೆ ಸೌಭಾಗ್ಯ ಆರೋಪಿಸಿದರು. ಹೆರಿಗೆ ವಾರ್ಡ್‌ನಲ್ಲಿರುವುದೇ 18 ಬೆಡ್‌ಗಳು. ದಿನಕ್ಕೆ 25 ಹೆರಿಗೆಯಾಗಲಿವೆ. ಅನಿವಾರ್ಯ ಸಂದರ್ಭದಲ್ಲಷ್ಟೇ ಇಬ್ಬಿಬ್ಬರನ್ನು ಒಂದು ಹಾಸಿಗೆ ಮೇಲೆ ಮಲಗಿಸಲಾಗುತ್ತದೆ. ಉಳಿದಂತೆ ಬೇರೆಡೆ ಹಾಸಿಗೆ ಕೊಟ್ಟು ಅನುಕೂಲ ಮಾಡಲಾಗುತ್ತಿದೆ ಎಂದು ಡಾ.ವೆಂಕಟೇಶ್ ಸಭೆಗೆ ತಿಳಿಸಿದರು. ಹೆರಿಗೆ ವಾರ್ಡ್‌ನ ಕಲ್ಲು ಕಟ್ಟಡ ಪಾರಂಪರಿಕ ಕಟ್ಟಡವಾಗಿದ್ದು, ಇದನ್ನು ದುರಸ್ಥಿಪಡಿಸಲು ನಿರ್ಮಿತಿ ಕೇಂದ್ರದ ಮೂಲಕ 1.17 ಕೋಟಿ ವೆಚ್ಚದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿದ್ದು, ಸರ್ಕಾರ ಮಂಜೂರಾತಿ ದೊರಕಿದ ಕೂಡಲೇ ದುರಸ್ಥಿಗೆ ಕ್ರಮ ವಹಿಸಲಾಗುವುದು ಎಂದು ವೆಂಕಟೇಶ್ ತಿಳಿಸಿದರು.

ಸದಸ್ಯ ನಹೀಂ ಮಾತನಾಡಿ, ಕೊರೊನಾ ಸಂದರ್ಭದಲ್ಲಿ ಬಂದ ನೂರಾರು ಹಾಸಿಗೆಗಳನ್ನು ಏನು ಮಾಡಿದ್ದೀರಿ. ಆ ಬೆಡ್‌ಗಳು ಗರ್ಭಿಣಿ, ಬಾಣಂತಿಯರಿಗೆ ಉಪಯೋಗಕ್ಕೆ ಬರುವುದಿಲ್ಲವೇ. ಇಬ್ಬರು ಬೆಡ್‌ನಲ್ಲಿ ಮಲಗಿಸಿ, ಏಕೆ ಅವಮಾನ ಮಾಡುತ್ತೀರಿ ಎಂದು ಪ್ರಶ್ನಿಸಿದಾಗ ಅವರಿಗೆ ಸಾಥ್ ನೀಡಿದ ಸದಸ್ಯ ಶಿವಲಿಂಗಪ್ಪ, ಕೊರೋನಾ ಸಂದರ್ಭದಲ್ಲಿ ಕೊಟ್ಟ ಬೆಡ್‌ಗಳು ಹೆಗ್ಗಣಗಳ ಪಾಲಾಗಿದ್ದು, ಖಾಸಗಿ ನರ್ಸಿಂಗ್ ಹೋಂಗಳಿಗೆ ಅನುಕೂಲ ಮಾಡಿಕೊಡಲು ಎಂಆರ್‌ಐ ಸ್ಕ್ಯಾನಿಂಗ್ ವರದಿ ನೀಡುವುದನ್ನು ವಿಳಂಬ ಮಾಡಿದ್ದೀರಾ ಎಂದು ಕಿಡಿಕಾರಿದರು. ಎಂಆರ್‌ಐ ಸ್ಕ್ಯಾನಿಂಗ್ ವರದಿಯನ್ನು ನೀಡಲು ಎಷ್ಟು ಸಮಯ ಬೇಕೆಂದು ಸದಸ್ಯರು ಪ್ರಶ್ನಿಸಿದಾಗ, ದಿನಕ್ಕೆ 25 ಎಂಆರ್‌ಐ, 50 ಸಿಟಿ ಸ್ಕ್ಯಾನ್ ಆಗುತ್ತದೆ. ಮೂವರು ರೇಡಿಯಾಲಜಿ ವೈದ್ಯರು ಮಾತ್ರ ಆಸ್ಪತ್ರೆಯಲ್ಲಿದ್ದು, ಇದರಿಂದ ವರದಿ ನೀಡುವುದಕ್ಕೆ ವಿಳಂಬವಾಗುತ್ತಿದೆ ಎಂದು ಡಾ.ವೆಂಕಟೇಶ್ ಹೇಳಿದಾಗ, ವರದಿ ಯಾವಾಗ ಸಿಗುತ್ತದೆ ಎಂಬ ಬಗ್ಗೆ ನಿಖರ ಮಾಹಿತಿಯನ್ನು ನೀಡದೇ ಅದನ್ನು ಕೇಳುವವರ ಮೇಲೆ ಸಿಬ್ಬಂದಿ ದರ್ಪ ತೋರುತ್ತಾರೆ ಎಂದು ದೂರಿದರು. ಆಗ ಡಾ.ವೆಂಕಟೇಶ್ ಮೂರು ದಿನದೊಳಗೆ ಎಂಆರ್‌ಐ ಸ್ಕ್ಯಾನಿಂಗ್ ವರದಿ ನೀಡುವ ಭರವಸೆ ನೀಡಿದರು.

ಅಧ್ಯಕ್ಷ ಮಂಜು ಹಾಗೂ ಸದಸ್ಯ ನಹೀಂ ಮಾತನಾಡಿ, ತುರ್ತು ಚಿಕಿತ್ಸೆಗೆ ಬರುವ ಬಡ ರೋಗಿಗಳು ಐಸಿಯು ಬೆಡ್ ಕೇಳಿದರೆ ಅವರನ್ನು ನಾಯಿಗಳಂತೆ ಅಟ್ಟುತ್ತೀರಿ. ಅದೇ ನಾವೇ ಐಸಿಯು ಬೆಡ್ ಕೇಳಿದರೆ ಕಳುಹಿಸಿ ಎನ್ನುತ್ತೀರಿ. ಹಾಗಾದರೆ ಆಸ್ಪತ್ರೆಯ ಐಸಿಯು ಬೆಡ್‌ಗಳು ರಾಜಕಾರಣಿಗಳಿಗೆ, ಪ್ರಭಾವಿಗಳಿಗೆ ಮಾತ್ರ ಇರುವುದಾ ಎಂದು ಪ್ರಶ್ನಿಸಿದ ಅವರು, ಮೊದಲು ನಿಮ್ಮ ಕಾರ್ಯವೈಖರಿ ಸರಿಪಡಿಸಿ, ಎಲ್ಲರನ್ನು ಒಂದೇ ರೀತಿ ನೋಡುವಂತೆ ಎಚ್ಚರಿಸಿದರು. ಸಭೆಯಲ್ಲಿ ನಗರಸಭೆ ಅಧ್ಯಕ್ಷ ಎಚ್.ಎಸ್.ಮಂಜು, ಉಪಾಧ್ಯಕ್ಷೆ ಇಶ್ರತ್ ಫಾತೀಮಾ, ಆಯುಕ್ತ ಮಂಜುನಾಥ್ ಇದ್ದರು.

ಬೈಕ್‌ನಿಂದ ಬಿದ್ದು ಕಂದಾಯ ಇಲಾಖೆ ನೌಕರ ಸಾವು



ನಾಗಮಂಗಲ, ಜ.18– ಕೆಲಸ ಮುಗಿಸಿ ಬೈಕ್‌ನಲ್ಲಿ ಮನೆಗೆ ತೆರಳುತ್ತಿದ್ದ ಕಂದಾಯ ಇಲಾಖೆಯ ನೌಕರನೊಬ್ಬ ಕೆಳಗೆ ಬಿದ್ದು ಸಾವೀಗೀಡಾದ ಘಟನೆ ತಾಲೂಕಿನ ಬಿಂಡಿಗನವಿಲೆ ಹೋಬಳಿಯ ಕಂಬದಹಳ್ಳಿ ಬಳಿ ಮಂಗಳವಾರ ರಾತ್ರಿ ನಡೆದಿದೆ.

ಕಂದಾಯ ಇಲಾಖೆಯಲ್ಲಿ ಗ್ರಾಮ ಲೆಕ್ಕಿಗನಾಗಿ ಕಾರ್ಯ ನಿರ್ವಹಿಸುತ್ತಿದ್ದ ಸತೀಶ್ ಎಂಬುವರು ಆಹಾರ ಇಲಾಖೆಗೆ ಪ್ರಮೋಷನ್ ಆಗಿದ್ದು, ಮಂಗಳವಾರ ಸಂಜೆ ತನ್ನ ಕರ್ತವ್ಯ ಮುಗಿಸಿ ತನ್ನ ಗ್ರಾಮ ಬೀಚನಹಳ್ಳಿಗೆ ಬೈಕ್‌ನಲ್ಲಿ ತೆರಳುತ್ತಿದ್ದಾಗ ಆಯತಪ್ಪಿ ಕೆಳಗೆ ಬಿದ್ದು, ಸ್ಥಳದಲ್ಲೇ ಸಾವಿಗೀಡಾಗಿದ್ದಾನೆ. ಬೆಳಗಿನ ಜಾವ ದಾರಿಹೋಕರು ನೋಡಿ ವಿಷಯ ತಿಳಿಸಲಾಗಿ ಬಿಂಡಿಗನವಿಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಭಾರತೀನಗರ ಸಮೀಪದ ಕ್ಯಾತಘಟ್ಟ ಗ್ರಾಮದ ಅಂತರಾಷ್ಟ್ರೀಯ ಆಟಗಾರ ಹಾಗೂ ತರಬೇತುದಾರ ಟಿ.ಬಿ.ರಾಜೇಶ್ ಅವರು ಸ್ವಾಮಿ ವಿವೇಕಾನಂದ ರಾಜ್ಯ ಯುವ ಪ್ರಶಸ್ತಿ ಪಡೆದರು. ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ಆವರಣದಲ್ಲಿ ನಡೆದ ಸಮಾರಂಭದಲ್ಲಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕೆ.ಬಿ. ಜವರೇಗೌಡ ನಿಧನ



ಮಂಡ್ಯ, ಜ.18– ನಗರದ ಕಲ್ಲಹಳ್ಳಿ ನಿವಾಸಿ ಕೆ.ಬಿ.ಜವರೇಗೌಡ ಅಲಿಯಾಸ್ ತಮ್ಮಯ್ಯ (73) ಬುಧವಾರ ಸಂಜೆ ನಿಧನರಾದರು.

ಧರ್ಮಶ್ರೀ ಸಮುದಾಯ ಭವನದ ಪಾಲುದಾರರಾಗಿದ್ದ ಜವರೇಗೌಡರು ಗ್ರಾಮದ ಲೇಟ್ ಗೊಂಬೆ ಬೋರಿ ಬೋರೇಗೌಡರ ಪುತ್ರರಾಗಿದ್ದು, ಪತ್ನಿ ರತ್ನಮ್ಮ, ಯುವ ಕಾಂಗ್ರೆಸ್ ಮುಖಂಡ ಅನೂಪ್ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ ಮತ್ತು ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಾಳೆ (ಜ.19) ಬೆಳಗ್ಗೆ 10.30ಕ್ಕೆ ಕಲ್ಲಹಳ್ಳಿಯ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಈ ಕುಟುಂಬದವರು ನರಳಿ, ನರಳಿ ಸಾಯಲಿ

ದೇವರ ಹುಂಡಿಯಲ್ಲಿ ವಿಕೃತ ಕೋರಿಕೆಯ ಹರಕೆ ಚೀಟಿ

ಕೊಳ್ಳೇಗಾಲ, ಜ.18– ನನಗೆ ಒಳ್ಳೆಯದಾಗಲಿ, ನನ್ನವರಿಗೆ ಒಳ್ಳೆಯದಾಗಲಿ, ನಮ್ಮವರಿಗೆ ಒಳಿತಾಗಲಿ ಎಂದು ದೇವರಲ್ಲಿ ಕೋರಿಕೆ ಸಲ್ಲಿಸುವುದುಂಟು. ಮಾತ್ರವಲ್ಲ, ಇಂಥದ್ದೇ ಕೋರಿಕೆಗಳೊಂದಿಗೆ ಹರಕೆ ಹೇಳಿಕೊಳ್ಳುವುದು ಸರ್ವೆ ಸಾಮಾನ್ಯ. ಆದರೆ ಕೊಳ್ಳೇಗಾಲದ ಶ್ರೀಲಕ್ಷ್ಮೀ ನಾರಾಯಣ ದೇವಾಲಯದ ಹುಂಡಿ ಎಣಿಕೆ ವೇಳೆ ವಿಚಿತ್ರವಾದ ಕೋರಿಕೆಯ ಹರಕೆ ಚೀಟಿ ಸಿಕ್ಕಿದೆ.

ಭಕ್ತನೊಬ್ಬನ ವಿಕೃತ ಮನಸ್ಥಿತಿಯನ್ನು ಈ ಹರಕೆ ಚೀಟಿ ಅನಾವರಣಗೊಳಿಸಿದ್ದು, ಒಂದು ಕುಟುಂಬದವರ ಹೆಸರು ಬರೆದು, ಇವರೆಲ್ಲ ನರಳಿ, ನರಳಿ ಸಾಯಬೇಕು, ನಮ್ಮ ಮನೆಯ ಬಳಿ ಇವರು ಇರದಂತೆ ಮಾಡಬೇಕು, ಒಂದು ವರ್ಷದೊಳಗೆ ಇವನು ಸಾಯಬೇಕು ಎಂಬುದಾಗಿ ಬರೆದಿರುವ ಚೀಟಿ ಈ ದೇವಸ್ಥಾನದ ಹುಂಡಿ ಹಣ ಎಣಿಕೆ ವೇಳೆ ಸಿಕ್ಕಿದೆ. ಈ ವಿಚಿತ್ರ ಹಾಗೂ ವಿಕೃತ ಹರಕೆ ಚೀಟಿಯನ್ನು ನೋಡಿ ದೇವಸ್ಥಾನದ ಸಿಬ್ಬಂದಿಯೂ ಒಮ್ಮೆ ದಿಗ್ಭ್ರಾಂತರಾಗುವಂತಾಗಿದೆ. ಬಳ್ಳಾರಿ ಜಿಲ್ಲೆಯ ವಿಳಾಸ ಬರೆದು ಈ ಹರಕೆ ಚೀಟಿಯನ್ನು ಹುಂಡಿಗೆ ಹಾಕಲಾಗಿದೆ.

ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಪೂರ್ಣಗೊಳಿಸಲು ಸಂಸದ ಶ್ರೀನಿವಾಸಪ್ರಸಾದ್ ತಾಕೀತು



ಚಾಮರಾಜನಗರ, ಜ.18– ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ 209ರಲ್ಲಿ ಬಾಕಿ ಉಳಿದಿರುವ ಕಾಮಗಾರಿಯನ್ನು ಆದ್ಯತೆ ಮೇರೆಗೆ ಕೈಗೆತ್ತಿಕೊಂಡು ತ್ವರಿತವಾಗಿ ಪೂರ್ಣಗೊಳಿಸುವಂತೆ ಲೋಕಸಭಾ ಸದಸ್ಯರಾದ ವಿ. ಶ್ರೀನಿವಾಸಪ್ರಸಾದ್ ಅಧಿಕಾರಿ ಗಳಿಗೆ ತಾಕೀತು ಮಾಡಿದ್ದಾರೆ,

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ಕೇಂದ್ರ ಪುರಸ್ಕೃತ ಯೋಜನೆಗಳ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಷ್ಟ್ರೀಯ ಹೆದ್ದಾರಿ 209ರಲ್ಲಿ ಕಾಮಗಾರಿ ಸ್ಥಗಿತಗೊಂಡಿದ್ದರಿಂದ ಸಾರ್ವಜನಿಕರಿಂದ ಸಾಕಷ್ಟು ದೂರುಗಳು ಬಂದಿದ್ದವು. ಇದೀಗ ಎಲ್ಲ ತೊಡಕುಗಳು ನಿವಾರಣೆಯಾಗಿರುವ ಹಿನ್ನೆಲೆಯಲ್ಲಿ ಬಾಕಿ ಉಳಿದಿರುವ ಹೆದ್ದಾರಿ ಕೆಲಸವನ್ನು ಶೀಘ್ರವೇ ಕೈಗೆತ್ತಿಕೊಂಡು ವೇಗವಾಗಿ ಪೂರ್ಣಗೊಳಿಸಬೇಕು. ಮುಂದಿನ ಸಭೆಯ ವೇಳೆಗೆ ಪ್ರಗತಿಯ ವರದಿ ನೀಡಬೇಕೆಂದು ಅವರು ಕಟ್ಟುನಿಟ್ಟಿನ ಸೂಚನೆ ನೀಡಿದರು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಯೋಜನಾ ನಿರ್ದೇಶಕರಾದ ಶ್ರೀಧರ್ ಮಾತನಾಡಿ ಕಾಮಗಾರಿ ನಿರ್ವಹಿಸಲು ಹೊಸ ಏಜೆನ್ಸಿ ನಿಗದಿಯಾಗಿದ್ದು ಈಗಾಗಲೇ ಪ್ಯಾಚ್ ವರ್ಕ್, ಶುಚಿತ್ವ ಕೆಲಸ ನಡೆಯುತ್ತಿದೆ. ಇನ್ನೂ 15 ದಿನಗಳೊಳಗೆ ಪೂರ್ಣ ಪ್ರಮಾಣದಲ್ಲಿ ಕಾಮಗಾರಿ ಆರಂಭವಾಗಲಿದೆ. ಚಾಮರಾಜನಗರ ವ್ಯಾಪ್ತಿಯಲ್ಲಿ ಬೈಪಾಸ್ ನಿರ್ಮಾಣ ಕಾರ್ಯ ಮಾರ್ಚ್ ಒಳಗೆ ಪೂರ್ಣಗೊಳಿಸಲಾಗುವುದೆಂದು ಮಾಹಿತಿ ನೀಡಿದರು.

ಶಾಸಕ ಸಿ. ಪುಟ್ಟರಂಗಶೆಟ್ಟಿ ಅವರು ಮಾತನಾಡಿ, ಈಗಾಗಲೇ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ವಿಳಂಬವಾಗಿದೆ. ಯಾವ ಸಮಯಕ್ಕೆ ಕಾಮಗಾರಿ ಪೂರ್ಣವಾಗಲಿದೆ ಎಂಬುದನ್ನು ನಿಖರವಾಗಿ ಹೇಳಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಶಾಸಕ ಎನ್. ಮಹೇಶ್ ಮಾತನಾಡಿ, ಹೆದ್ದಾರಿಯಲ್ಲಿ ಹಳ್ಳ ಬಿದ್ದಿರುವ ಕಡೆ ಕೂಡಲೇ ಸರಿಪಡಿಸಿ. ರಸ್ತೆ ಬದಿಯ ಅನವಶ್ಯಕ ಗಿಡ ಗಂಟಿಗಳನ್ನು ತೆರವುಗೊಳಿಸಲಾಗುತ್ತಿಲ್ಲ. ನನ್ನ ಕ್ಷೇತ್ರದಲ್ಲಿ ಮೂರು ಬೈಪಾಸ್ ಬರಲಿದೆ. ಕಂದಹಳ್ಳಿ ಬಳಿ ಇರುವ ರಸ್ತೆ ಸರಿಪಡಿಸುವ ಕಾರ್ಯ ಫೆಬ್ರವರಿ ಒಳಗೆ ಪೂರ್ಣ ಮಾಡಬೇಕೆಂದು ಸೂಚಿಸಿದರು.

ಶ್ರೀನಿವಾಸಪ್ರಸಾದ್ ಮಾತನಾಡಿ, ಕೇಂದ್ರ ಪುರಸ್ಕೃತ ಯೋಜನೆಗಳಡಿ ಫಲಾನುಭವಿಗಳಿಗೆ ಸಾಲ ಸೌಲಭ್ಯವನ್ನು ಬ್ಯಾಂಕುಗಳು ತ್ವರಿತವಾಗಿ ನೀಡಬೇಕು. ಬಡವರಿಗೆ, ನಿರುದ್ಯೋಗಿಗಳಿಗೆ ಆರ್ಥಿಕವಾಗಿ ಮುಂದೆ ಬರಲು ಅನುಕೂಲವಾಗುವಂತೆ ನೆರವಾಗಬೇಕು ಎಂದರು. ಜಿಪಂ ಸಿಇಓ ಕೆ.ಎಂ. ಗಾಯಿತ್ರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ. ಶಿವಕುಮಾರ್, ಬಿ.ಆರ್.ಟಿ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕಿ ದೀಪ ಕಂಟ್ರಾಕ್ಟರ್, ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂತೋಷ್ ಕುಮಾರ್, ಡಿವೈಎಸ್‌ಪಿ ಪ್ರಿಯದರ್ಶಿನಿ ಸಾಣೆಕೊಪ್ಪ, ಕೇಂದ್ರ ಪುರಸ್ಕೃತ ಯೋಜನೆಗಳ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿಯ ನಾಮನಿರ್ದೇಶಿತ ಸದಸ್ಯರಾದ ಲೋಕೇಶ್, ನಾಗೇಶ್, ಸರಸ್ವತಿ, ಮಲ್ಲೇಶಪ್ಪ, ಇತರೆ ಜನಪ್ರತಿನಿಧಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಫೋಟೋಗ್ರಾಫರ್ ಆತ್ಮಹತ್ಯೆ



ಕೊಳ್ಳೇಗಾಲ, ಜ.18– ಜೀವನದಲ್ಲಿ ಜುಗುಪ್ಸೆಗೊಂಡು ಫೋಟೋಗ್ರಾಫರ್ ನೇಣಿಗೆ ಶರಣಾಗಿರುವ ಘಟನೆ ಪಟ್ಟಣದಲ್ಲಿ ಬುಧವಾರ ಜರುಗಿದೆ.

ಪಟ್ಟಣದ ಪೋಸ್ಟ್ ಆಫೀಸ್ ರಸ್ತೆಯ ನಿವಾಸಿ ಗೋಪಿ (44) ಮೃತ ದುರ್ದೈವಿ. ಈತ ಕಳೆದ ಅನೇಕ ವರ್ಷಗಳಿಂದ ಒಬ್ಬಂಟಿಯಾಗಿ ಜೀವನ ಸಾಗಿಸುತ್ತಿದ್ದು, ಜೀವನದಲ್ಲಿ ಜಿಗುಪ್ಸೆಗೊಂಡು ಮನೆಯಲ್ಲಿ ನಿನ್ನೆ ರಾತ್ರಿ ನೇಣಿಗೆ ಶರಣಾಗಿದ್ದಾನೆ ಎನ್ನಲಾಗಿದೆ. ಈತನ ಪತ್ನಿ ತವರು ಮನೆಯಿಂದ ಬಂದ ನಂತರ ಪೊಲೀಸರು ದೂರು ಪಡೆದು ಶವವನ್ನು ಕೆಳಗಿಳಿಸಿ ಮರಣೋತ್ತರ ಪರೀಕ್ಷೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಬಿಜೆಪಿ ಅಲ್ಪಸಂಖ್ಯಾತ ಮೋರ್ಚಾದ ಜಿಲ್ಲಾಧ್ಯಕ್ಷರಾಗಿ ಜಕಾಉಲ್ಲ ನೇಮಕ

ಚಾಮರಾಜನಗರ, ಜ.18– ಬಿಜೆಪಿ ಅಲ್ಪ ಸಂಖ್ಯಾತ ಮೋರ್ಚಾದ ಜಿಲ್ಲಾಧ್ಯಕ್ಷರನ್ನಾಗಿ ಕೊಳ್ಳೇಗಾಲದ ಜಕಾಉಲ್ಲ ಅವರನ್ನು ನೇಮಿಸಿ ಜಿಲ್ಲಾಧ್ಯಕ್ಷ ಆರ್.ಸುಂದರ್ ಆದೇಶ ಹೊರಡಿಸಿದ್ದಾರೆ.

ನಗರದ ಮೇಘಾ ಕಾಂಪ್ಲೆಕ್ಸ್‌ನಲ್ಲಿರುವ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಜಕಾಉಲ್ಲ ಅವರಿಗೆ ಆದೇಶಪತ್ರವನ್ನು ಜಿಲ್ಲಾಧ್ಯಕ್ಷ ಆರ್.ಸುಂದರ್ ವಿತರಿಸಿದರು. ಈ ಸಂದರ್ಭದಲ್ಲಿ ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಮಂಗಲ ಶಿವಕುಮಾರ್, ನಾರಾಯಣ್‌ಪ್ರಸಾದ್, ನಗರಸಭಾ ಸದಸ್ಯ ನಾಸೀರ್ ಷರೀಫ್, ಜಿಲ್ಲಾ ವಕ್ಫ್ ಸದಸ್ಯರಾದ ಸೈಯದ್, ಅನ್ವರ್ ಪಾಷ, ಜಿಲ್ಲಾ ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸದಸ್ಯ ಅಸೀಫ್ ಉಲ್ಲಾ, ಸರಸ್ವತಿ, ಸಾದಿಕ್ ಉಲ್ಲಾ, ಸಮಿ (ಜಾದಿಪುರ) ಇತರರು ಹಾಜರಿದ್ದರು.

ಸಿಮ್ಸ್‌ನಲ್ಲಿ ಕೋ–ಗೈಡ್ ತಂತ್ರಾಂಶ ಅಳವಡಿಕೆ

- ವೈದ್ಯಕೀಯ ಲೋಕದಲ್ಲಿ ನೂತನ ಆವಿಷ್ಕಾರಕ್ಕೆ ಉತ್ತೇಜನ
- ನಾಳೆ ಮೆಡಿಕಲ್ ಕಾಲೇಜಿನಲ್ಲಿ ತಂತ್ರಾಂಶ ಕುರಿತ ಕಾರ್ಯಾಗಾರ



ಚಾಮರಾಜನಗರ, ಜ.18– ವೈದ್ಯಕೀಯ ಲೋಕದಲ್ಲಿನ ನೂತನ ಸಂಶೋಧನೆಗಳನ್ನು ಪ್ರಪಂಚಾದ್ಯಂತ ಪ್ರಚುರ ಪಡಿಸುವ ಸದುದ್ದೇಶದಿಂದ ನಿರ್ಮಾಣಗೊಂಡಿರುವ ಕೋ–ಗೈಡ್ ತಂತ್ರಾಂಶವನ್ನು ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಅಳವಡಿಸಲಾಗಿದೆ ಎಂದು ಸಿಮ್ಸ್‌ನ ಡೀನ್ ಹಾಗೂ ನಿರ್ದೇಶಕ ಡಾ.ಜಿ.ಎಂ. ಸಂಜೀವ್ ತಿಳಿಸಿದರು.

ನಗರದ ಜಿಲ್ಲಾಸ್ಪತ್ರೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಜಿಲ್ಲಾ ಕೇಂದ್ರದಲ್ಲಿ ಸ್ಥಾಪನೆಯಾಗಿರುವ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಳೆದ ಎರಡು ವರ್ಷಗಳ ಹಿಂದೆ ಸ್ನಾತಕೋತ್ತರ ತರಗತಿಗಳನ್ನು ಪ್ರಾರಂಭಿಸಲಾಯಿತು. ವಿದ್ಯಾರ್ಥಿಗಳ ಮುಂದುವರಿದ ಶಿಕ್ಷಣಕ್ಕೆ ಅನುಕೂಲ ಹಾಗೂ ಸಿಮ್ಸ್‌ನ ವೈದ್ಯರು ನಡೆಸುವ ಶಸ್ತ್ರ ಚಿಕಿತ್ಸೆ, ವೈದ್ಯಕೀಯ ಆವಿಷ್ಕಾರಗಳನ್ನು ಪ್ರಚುರಪಡಿಸಲು ಕೋ–ಗೈಡ್ ತಂತ್ರಾಂಶ ಹೆಚ್ಚು ಸಹಾಯಕವಾಗಿದೆ ಎಂದು ತಿಳಿಸಿದರು.

ನಂತರ ಸಿಮ್ಸ್ ಟೀಚರ್ಸ್ ಅಸೋಸಿಯೇಶನ್ ಅಧ್ಯಕ್ಷ ಡಾ.ಸಿ.ವಿ. ಮಾರುತಿ ಮಾತನಾಡಿ, ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ಸಿಮ್ಸ್ ಟೀಚರ್ಸ್ ಅಸೋಸಿಯೇಶನ್‌ನಿಂದ ಮೆಡಿಕಲ್ ಕಾಲೇಜಿನ ಮೆಡಿಕಲ್ ಎಜುಕೇಶನ್ ಯೂನಿಟ್ ಹಾಲ್‌ನಲ್ಲಿ ಜ.20ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಮೆಡಿಕಲ್ ಎಜುಕೇಶನ್ ಯೂನಿಟ್ ಹಾಗೂ ಬೆಂಗಳೂರಿನ ಕೋ–ಗೈಡ್ ಸಂಸ್ಥೆಯಿಂದ ಸಿಎಂಇ ಇನ್ ಪ್ಲಾನಿಂಗ್ ಹಾಗೂ ಕಂಡಕ್ಟಿಂಗ್ ಮೆಡಿಕಲ್ ರೀಸರ್ಚ್ ಕಾರ್ಯಕ್ರಮ ಆಯೋಜಿಸಲಾಗಿದೆ. ಸಿಎಂಇ ಕಾರ್ಯಕ್ರಮಕ್ಕೆ 108 ವೈದ್ಯರುಗಳು ನೋಂದಾಯಿಸಿಕೊಂಡಿದ್ದು, ಎಲ್ಲರೂ ಪಾಲ್ಗೊಳ್ಳಲಿದ್ದಾರೆ ಎಂದರು.

ಸಿಮ್ಸ್‌ನ ಎಲ್ಲಾ ವೈದ್ಯರು, ವೈದ್ಯಾಧಿಕಾರಿಗಳು, ಜಿಲ್ಲೆಯ ವೈದ್ಯಾಧಿಕಾರಿಗಳು, ಇಂಡಿಯನ್ ಮೆಡಿಕಲ್ ಅಸೋಸಿಯೇಶನ್ ವೈದ್ಯರು ಮತ್ತು ಸಂಸ್ಥೆಯ ಸ್ನಾತಕೋತ್ತರ ವಿದ್ಯಾರ್ಥಿಗಳು ಕಾರ್ಯಕ್ರಮದ ಸದ್ಬಳಕೆ ಮಾಡಿಕೊಳ್ಳಲಿದ್ದಾರೆ ಎಂದು ತಿಳಿಸಿದರು.

ಕೋ–ಗೈಡ್ ಸಂಸ್ಥೆಯ ಸಿಇಓ ಡಾ.ಜಿ. ಮುರುಳಿ ಮೋಹನ್‌ರೆಡ್ಡಿ ಮಾತನಾಡಿ, ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯು ಎಲ್ಲಾ ವಿಭಾಗಗಳಲ್ಲಿ ಜಿಲ್ಲೆಯ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡುವುದರಲ್ಲಿ ಮೇಲುಗೈ ಸಾಧಿಸಿದ್ದು, ಸಿಮ್ಸ್‌ನಲ್ಲಿ ದೊರೆಯುತ್ತಿರುವ ಚಿಕಿತ್ಸಾ ಗುಣಮಟ್ಟದ ಬಗ್ಗೆ ವೈದ್ಯಕೀಯ ಲೋಕದಲ್ಲಿ ಸಂಶೋಧನೆಗಳನ್ನು ಕಡಿಮೆ ಸಂಖ್ಯೆಯ ಮಾನವ ಸಂಪನ್ಮೂಲದ ಸದ್ಬಳಕೆ ಮಾಡಿಕೊಂಡು ಕಡಿಮೆ ಖರ್ಚಿನಲ್ಲಿ ತೀವ್ರಗತಿಯಲ್ಲಿ ಅತ್ಯಂತ ದಕ್ಷತೆಯಿಂದ ಆಧುನಿಕ ತಂತ್ರಜ್ಞಾನದ ರಾಜ್ಯದ ಕೋ–ಗೈಡ್ ತಂತ್ರಾಂಶವನ್ನು ಉಪಯೋಗಿಸಿಕೊಂಡು ಇದರ ಬಗ್ಗೆ ಸುಲಭವಾಗಿ ನಿಯತಕಾಲಿಕಗಳಲ್ಲಿ ಪ್ರಕಟಿಸಿ ಪ್ರಪಂಚದ ವೈದ್ಯಲೋಕಕ್ಕೆ ಇದರ ಸಂದೇಶಗಳನ್ನು ಸಾರಿ ಮಾನವ ಕುಲಕ್ಕೆ ಒಳಿತಾಗುವಂತೆ ಮಾಡುವ ಸದುದ್ದೇಶವನ್ನು ಕಾರ್ಯಕ್ರಮವು ಹೊಂದಿದೆ ಎಂದು ತಿಳಿಸಿದರು.

ನಕಲಿ ಜಾತಿ ಪ್ರಮಾಣ ಪತ್ರ ತಡೆಯಲು ಟಿಸಿ ಮಾನದಂಡ ಮಾಡಲಾಗಿದೆ

ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿಕೆ



ಮೈಸೂರು, ಜ. 18(ಆರ್‌ಕೆ)– ಎಸ್‌ಸಿ, ಎಸ್‌ಟಿ ಸಮುದಾಯಗಳ ನಕಲಿ ಜಾತಿ ದೃಢೀಕರಣ ಪತ್ರ ನೀಡುವುದನ್ನು ತಡೆಯಲು ಶಾಲಾ ವರ್ಗಾವಣೆ ಪತ್ರ (ಟಿಸಿ)ವನ್ನು ಮಾನದಂಡ ಮಾಡಲಾಗಿದೆ ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, ಇತರ ಸಮುದಾಯದವರೂ ಎಸ್‌ಸಿ–ಎಸ್‌ಟಿ ನಕಲಿ ಜಾತಿ ಪ್ರಮಾಣ ಪಡೆದು ಸೌಲಭ್ಯ ಪಡೆಯಲು ಪ್ರಯತ್ನಿಸುತ್ತಿರುವುದರಿಂದ ಮೂಲ ಶೋಷಿತ ಸಮುದಾಯದವರಿಗೆ ಅನ್ಯಾಯವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಶಾಲಾ ವರ್ಗಾವಣೆ ಪತ್ರ ಪಡೆದು ಜಾತಿ ಪ್ರಮಾಣ ಪತ್ರ ನೀಡುವಂತೆ ಸೂಚಿಸಲಾಗಿದೆ ಎಂದರು.

ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಹಾಗೂ ದಲಿತ 23 ಲಕ್ಷ ಕುಟುಂಬಗಳಿಗೆ 75 ಯೂನಿಟ್ ವಿದ್ಯುತ್ ಅನ್ನು ಉಚಿತವಾಗಿ ನೀಡಲಾಗುತ್ತಿದೆ. ಇದರಿಂದ ಸರ್ಕಾರಕ್ಕೆ 800 ಕೋಟಿ ರೂ. ನಷ್ಟವಾಗಲಿದೆ. ಅದೇ ವಿದ್ಯಾರ್ಥಿಗಳಿಗೆ 100ಕ್ಕೂ ಹೆಚ್ಚು ವಸತಿ ನಿಲಯಗಳು, 5 ಮೆಗಾ ವಸತಿ ಶಾಲೆಗಳನ್ನು ಇತರ ಸಮುದಾಯಗಳಿಗೆ ನಿರ್ಮಿಸಿ ಉತ್ಕೃಷ್ಟ ವಿದ್ಯಾಭ್ಯಾಸ ನೀಡುವ ಯೋಜನೆಗೆ ಸರ್ಕಾರ ಪ್ರಯತ್ನಿಸುತ್ತಿದೆ ಎಂದು ನುಡಿದರು.

ಇದೇ ವೇಳೆ ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದ ಕೇಂದ್ರ ಸಮಾಜ ಕಲ್ಯಾಣ ಸಚಿವ ಎ.ನಾರಾಯಣಸ್ವಾಮಿ, ಕೇಂದ್ರ ಪುರಸ್ಕೃತ ಸಮುದಾಯಗಳ ಮನೆಗಳಿಗೆ ತಲುಪಿಸಲಾಗುತ್ತಿದ್ದು, ಅದಕ್ಕಾಗಿ ಕೇಂದ್ರ ಸರ್ಕಾರವು 142 ಕೋಟಿ ರೂ. ಅನುದಾನವನ್ನು ಎಲ್ಲಾ ರಾಜ್ಯಗಳಿಗೂ ವಿತರಿಸಲಾಗುತ್ತಿದೆ. ಪಶ್ಚಿಮ ಬಂಗಾಳ ಹೊರತುಪಡಿಸಿ ದೇಶದ ಎಲ್ಲಾ ರಾಜ್ಯಗಳೂ ಕೇಂದ್ರದ ಯೋಜನೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುತ್ತಿವೆ ಎಂದರು.

ಸ್ಯಾಂಟ್ರೋ ರವಿ ಪ್ರಕರಣ

ಮೈಸೂರಲ್ಲಿ ಸಿಐಡಿ ಡಿಜಿಪಿ ಸಂಧು ಮಾಹಿತಿ ಸಂಗ್ರಹ

ಮೈಸೂರು, ಜ. 18(ಆರ್‌ಕೆ)– ಸಿಐಡಿ ವಿಭಾಗದ ಡಿಜಿಪಿ ಪಿ.ಎಸ್.ಸಂಧು ಬುಧವಾರ ಮೈಸೂರಿನಲ್ಲಿ ಸ್ಯಾಂಟ್ರೋ ರವಿ ಪ್ರಕರಣ ಸಂಬಂಧ ಪೊಲೀಸ್ ಅಧಿಕಾರಿಗಳೊಂದಿಗೆ ಅಗತ್ಯ ಮಾಹಿತಿ ಸಂಗ್ರಹಿಸಿದರು.



ಪಿ.ಎಸ್.ಸಂಧು

ಮೈಸೂರಿನ ನಜರ್‌ಬಾದ್‌ನ ಎಸ್ಪಿ ಕಚೇರಿ ಸರ್ಕಲ್‌ನಲ್ಲಿರುವ ಡಿಜಿ ಸೂಟ್‌ನಲ್ಲಿ ಪೊಲೀಸ್ ಆಯುಕ್ತ ಬಿ. ರಮೇಶ್, ಎಸ್ಪಿ ಸೀಮಾ ಲಾಟ್ಕರ್, ಡಿಸಿಪಿ ಎಂ.ಮುತ್ತುರಾಜ್ ಅವರನ್ನು ಭೇಟಿ ಮಾಡಿ ಲೈಂಗಿಕ ದೌರ್ಜನ್ಯ, ಅತ್ಯಾಚಾರ ಪ್ರಕರಣದಲ್ಲಿ ಬಂಧಿತನಾಗಿರುವ ಕೆ.ಎಸ್. ಮಂಜುನಾಥ್ ಅಲಿಯಾಸ್ ಸ್ಯಾಂಟ್ರೋ ರವಿ ಹಾಗೂ ಇತರರನ್ನು ಸಿಐಡಿ ಅಧಿಕಾರಿಗಳು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಸಿಐಡಿ ವಶಕ್ಕೆ ಪ್ರಕರಣ ವಹಿಸುವುದಕ್ಕಿಂತ ಮೊದಲು ನಡೆಸಿದ ವಿಚಾರಣೆಯಲ್ಲಿ ತಿಳಿದು ಬಂದ ಮಾಹಿತಿಗಳನ್ನು ಸಂಗ್ರಹಿಸಿದರು.

ಪ್ರಸ್ತುತ ಸಿಐಡಿ ಆರ್ಥಿಕ ಅಪರಾಧ ವಿಭಾಗದ ಡಿವೈಎಸ್ಪಿ ನರಸಿಂಹಮೂರ್ತಿ ನೇತೃತ್ವದ ತನಿಖಾ ತಂಡ ವಿಚಾರಣೆ ನಡೆಸುತ್ತಿದೆ. ಪ್ರಕರಣ ಸಂಬಂಧ ಎಲ್ಲಾ ದಾಖಲೆಗಳನ್ನು ತನಿಖಾ ತಂಡಕ್ಕೆ ಒಪ್ಪಿಸಿ ಅಗತ್ಯ ನೆರವು ನೀಡಲಾಗುತ್ತಿದೆ ಎಂಬ ಮಾಹಿತಿಯನ್ನು ನಗರ ಪೊಲೀಸ್ ಅಧಿಕಾರಿಗಳು ಸಿಐಡಿ ಡಿಜಿಪಿ ಸಂಧು ಅವರಿಗೆ ನೀಡಿದರು.

ಈ ಮಧ್ಯೆ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳು ಇಂದು ಹೂಟಗಳ್ಳಿಯ ಒಡನಾಡಿ ಸೇವಾ ಸಂಸ್ಥೆಗೂ ಭೇಟಿ ನೀಡಿ ದೂರುದಾರರಾದ ಸಂತ್ರಸ್ತೆಯೊಂದಿಗೆ ಸಮಾಲೋಚನೆ ನಡೆಸಿ, ಆರೋಪಿ ಸ್ಯಾಂಟ್ರೋ ರವಿ ವಿರುದ್ಧ ಬೇರೆ ಬೇರೆ ಕಡೆಗಳಲ್ಲಿ ದಾಖಲಾಗಿರುವ ಪ್ರಕರಣಗಳು, ತನಿಖೆಯ ಪ್ರಗತಿ ಕುರಿತಂತೆ ಪ್ರಾಥಮಿಕ ಮಾಹಿತಿ ಪಡೆದುಕೊಂಡರು. ಆಕೆ ನೀಡಿರುವ ದೂರಿನ ಸಂಬಂಧ ಅಗತ್ಯ ಸಾಕ್ಷ್ಯಾಧಾರ, ದಾಖಲೆಗಳನ್ನು ಪಡೆದುಕೊಂಡಿರುವ ಅಧಿಕಾರಿಗಳು, ಹಣಕಾಸಿನ ವ್ಯವಹಾರ, ಮದುವೆ ಮಾಡಿಕೊಂಡ ಸ್ಥಳ, ಲೈಂಗಿಕ ದೌರ್ಜನ್ಯ, ಕಿರುಕುಳ, ವೇಶ್ಯಾವಾಟಿಕೆ ದಂಧೆ, ಇನ್ನಿತರ ವ್ಯವಹಾರದ ಬಗ್ಗೆಯೂ ಸಂತ್ರಸ್ತೆಯಿಂದ ವಿವರಣೆ ಪಡೆದುಕೊಂಡರು.

ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಜ್ಞಾನದ ಕುಲಪತಿ

ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಬಣ್ಣನೆ



ಮೈಸೂರು,ಜ.18(ಪಿಎಂ)–ಶ್ರೀ ಆದಿಚುಂಚನಗಿರಿ ಮಠದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರು ಕೇವಲ ಮಠಾಧೀಶರಾಗಿರಲಿಲ್ಲ, ಒಂದು ಬೃಹತ್ತಾದ ವಿಶ್ವವಿದ್ಯಾನಿಲಯವನ್ನೇ ಕಟ್ಟಿದ ಮಹಾಚೇತನ. ಅದಕ್ಕಾಗಿ ಅವರನ್ನು ಒಬ್ಬ ಜ್ಞಾನದ ಕುಲಪತಿ ಎಂದು ಕರೆಯಬೇಕು ಎಂದು ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ) ಬಣ್ಣಿಸಿದರು.

ಮೈಸೂರಿನ ಅಖಿಲ ಕರ್ನಾಟಕ ಒಕ್ಕಲಿಗರ ಮಹಾಸಭಾದ ಕಚೇರಿಯಲ್ಲಿ ಮಹಾಸಭಾದ ವತಿಯಿಂದ ಬುಧವಾರ ಹಮ್ಮಿಕೊಂಡಿದ್ದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ 78ನೇ ಜನ್ಮದಿನಾಚರಣೆ ಉದ್ಘಾಟಿಸಿ ಹಾಗೂ ಶ್ರೀಗಳ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು. ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ಎಲ್ಲಾ ಮಠಾಧೀಶರಂತೆ ಅಲ್ಲ. ಅವರು ಒಂದು ವಿಶಿಷ್ಟವಾದ ವ್ಯಕ್ತಿತ್ವ ಹೊಂದಿದ್ದರು. ಜನೋಪಯೋಗಿ ಮತ್ತು ಸಮಾಜಮುಖಿಯಾದ ಹತ್ತು ಹಲವು ಸಾಧನೆಯನ್ನು ಅವರು ಮಾಡಿದ್ದಾರೆ. ಇಂತಹ ಒಬ್ಬ ಮಹಾಪುರುಷರ ಜನ್ಮದಿನ ಆಚರಿಸಿ, ಅವರಿಗೆ ಗೌರವ ಸಲ್ಲಿಸುತ್ತಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶ್ರೀಗಳು ಹಾಕಿಕೊಟ್ಟ ಸಾರ್ಥಕ ಪಥದಲ್ಲಿ ನಾವು ಹೆಜ್ಜೆ ಹಾಕುವುದು ಅತೀ ಮುಖ್ಯ. ಅವರ ವಿಚಾರಧಾರೆ ತಿಳಿದುಕೊಂಡು ಅದರಂತೆ ಯುವ ಜನರು ಮುನ್ನಡೆಯಬೇಕು ಎಂದರು. ಮಹಾಸಭಾದ ಸಂಸ್ಥಾಪಕ ಅಧ್ಯಕ್ಷ ಎನ್.ಬೆಟ್ಟೇಗೌಡ, ಪ್ರಧಾನ ಕಾರ್ಯದರ್ಶಿ ಇ.ಸಿ.ನಿಂಗರಾಜಗೌಡ, ಕೋಶಾಧ್ಯಕ್ಷ ಎಂ.ಎನ್.ಚಂದ್ರಶೇಖರ್, ನಿರ್ದೇಶಕರಾದ ರವಿಕುಮಾರ್, ನಾಗೇಂದ್ರ, ಲಕ್ಷ್ಮೀದೇವಿ, ವಾಸುದೇವ್, ಸಂಸ್ಕೃತಿ ಚಿಂತಕ ಡಾ.ರಘುರಾಮ್ ವಾಜಪೇಯಿ, ಕನ್ನಡಪರ ಹೋರಾಟಗಾರ ಶಿವಶಂಕರ್, ಮುಖಂಡರಾದ ವಿಕ್ರಂ ಅಯ್ಯಂಗಾರ್, ಕ್ಯಾತನಹಳ್ಳಿ ಪ್ರಕಾಶ್, ಹೇಮಂತ್, ವಜ್ರೇಶ್ವರಿ ಉಮೇಶ್, ಮೈನಾ ಸ್ವಾಮಿ, ಎಸ್.ಎನ್.ರಾಜೇಶ್ ಮತ್ತಿತರರು ಹಾಜರಿದ್ದರು.

ಮೈಸೂರು ನಗರಪಾಲಿಕೆಯಿಂದ ಐದು ದಿನಗಳ ‘ಅದಾಲತ್’

- 9 ವಲಯ ಕಚೇರಿ ವ್ಯಾಪ್ತಿಯ ಐದು ಕಡೆ ಅಹವಾಲು ಸ್ವೀಕಾರ
- ಈ ವೇಳೆ ಸಾರ್ವಜನಿಕರು ವಿವಿಧ ದಾಖಲೆ ಪಡೆದುಕೊಳ್ಳಬಹುದು



ಮೈಸೂರು,ಜ.18(ಎಂಟಿವೈ)–ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ನಾಗರಿಕರಿಗೆ ವಿವಿಧ ನಾಗರಿಕ ಸೇವಾ ಸೌಲಭ್ಯ ಕಲ್ಪಿಸಲು ಪಾಲಿಕೆ ‘ಅದಾಲತ್’ ನಡೆಸಲು ನಿರ್ಧರಿಸಿದ್ದು, ಐದು ಪ್ರತ್ಯೇಕ ಸ್ಥಳದಲ್ಲಿ 9 ವಲಯ ಕಚೇರಿಗಳ ವ್ಯಾಪ್ತಿಯ ನಾಗರಿಕರು ತಮ್ಮ ಅಹವಾಲುಗಳ ಸಲ್ಲಿಸಿ, ಪರಿಹಾರ ಕಂಡುಕೊಳ್ಳಬಹುದಾಗಿದೆ.

ಪಾಲಿಕೆ ಅದಾಲತ್ ಜ.20ರಿಂದ ಫೆ.7ರವರೆಗೆ ವಿವಿಧ ವಲಯ ಕಚೇರಿ ಆವರಣದಲ್ಲಿ ನಡೆಯಲಿದೆ. ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಸಾರ್ವಜನಿಕರು ಅಗತ್ಯ ದಾಖಲೆಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಅದಾಲತ್‌ನಲ್ಲಿ ಪ್ರಮುಖವಾಗಿ ನಿವೇಶನ, ಮನೆ ಖಾತೆ ವರ್ಗಾವಣೆ, ನೋಂದಣಿ, ಕಂದಾಯ ನಿಗದಿಗೆ ಅರ್ಜಿ ಸಲ್ಲಿಸಿರುವ ಪ್ರಕರಣ, ಕಟ್ಟಡ ನಿರ್ಮಾಣ ನಕ್ಷೆ ಕೋರಿಕೆ, ಪೂರ್ಣಗೊಂಡ ಕಟ್ಟಡಕ್ಕೆ ಸಿಆರ್, ಡೇ–ನಲ್ಮ್ ಯೋಜನೆ, ನಗರ ಬಡತನ ನಿರ್ಮೂಲನಾ ಯೋಜನೆ, ಟ್ರೇಡ್ ಲೈಸನ್ಸ್, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ, ಜಾಹೀರಾತು ಪ್ರಕಟಣೆ ಫಲಕಕ್ಕೆ ಅರ್ಜಿ, ಆಶ್ರಯ ಯೋಜನೆಯಡಿ ಮನೆ, ನಿವೇಶನ ಮಂಜೂರು, ಸ್ವಾಧೀನ ಪತ್ರ, ಹಕ್ಕುಪತ್ರ, ಹಕ್ಕು ಖುಲಾಸೆ ಪತ್ರ, ಜನನ–ಮರಣ ದೃಢೀಕರಣ ಪತ್ರ ಹಾಗೂ ಇನ್ನಿತರ ಸೌಲಭ್ಯಗಳನ್ನು ಪಡೆಯಬಹುದಾಗಿದೆ.

ಎಲ್ಲೆಲ್ಲಿ ಅದಾಲತ್: ಜ.20ರಂದು ವಲಯ ಕಚೇರಿ–3, ಜ.24ರಂದು ವಲಯ ಕಚೇರಿ 1 ಮತ್ತು 2, ಜ.31ರಂದು ವಲಯ ಕಚೇರಿ 4 ಮತ್ತು 5, ಫೆ.2ರಂದು ವಲಯ ಕಚೇರಿ 6 ಮತ್ತು 7, ಫೆ.7ರಂದು ವಲಯ ಕಚೇರಿ 8 ಮತ್ತು 9ರ ವ್ಯಾಪ್ತಿಗೆ ಆಯಾ ವಲಯ ಕಚೇರಿಗಳ ಆವರಣದಲ್ಲಿ ಅದಾಲತ್ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ಮೇಯರ್ ಶಿವಕುಮಾರ್, ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದ್ದಾರೆ.

ಸಂಸದ ಪ್ರತಾಪ್ ಸಿಂಹರಿಂದ ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ



ಲಾಜಿಸ್ಟಿಕ್ ಪಾರ್ಕ್ ಕಾಮಗಾರಿ



ಅಶೋಕಪುರಂ ರೈಲ್ವೆ ನಿಲ್ದಾಣ



ಕ್ಯಾನ್ಸರ್ ಕೇಂದ್ರ ಸಂಬಂಧ ಚರ್ಚೆ

ಮೈಸೂರು, ಜ. 18 (ಆರ್‌ಕೆ)– ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಯೋಗದಲ್ಲಿ ಕೈಗೊಂಡಿರುವ ನಾನಾ ಅಭಿವೃದ್ಧಿ ಯೋಜನೆಗಳ ಕಾಮಗಾರಿಗಳನ್ನು ಸಂಸದ ಪ್ರತಾಪ್ ಸಿಂಹ ಅವರು ಬುಧವಾರ ಪರಿಶೀಲನೆ ನಡೆಸಿದರು.

ಲಾಜಿಸ್ಟಿಕ್ ಪಾರ್ಕ್ ಕಾಮಗಾರಿ ಪರಿಶೀಲನೆ: ಕಡಕೊಳ ಸಮೀಪ ರೈಲ್ವೆ ಇಲಾಖೆಯ ಕಂಟೇನರ್ ಕಾರ್ಪೊರೇಷನ್ ಆಫ್ ಇಂಡಿಯಾ (CONCOR) ವತಿಯಿಂದ 100 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣ ಮಾಡುತ್ತಿರುವ ಮಲ್ಟಿ ಮಾಡೆಲ್ ಲಾಜಿಸ್ಟಿಕ್ ಪಾರ್ಕ್ ಕಾಮಗಾರಿಯನ್ನು ವೀಕ್ಷಿಸಿದ ಸಂಸದರು, ಸುತ್ತಲಿನ ಕೈಗಾರಿಕಾ ಪ್ರದೇಶದಲ್ಲಿ ಉತ್ಪಾದನೆಯಾಗುವ ಉತ್ಪನ್ನಗಳನ್ನು ಅತೀ ವೇಗವಾಗಿ ಮಂಗಳೂರು ಬಂದರಿಗೆ ಸಾಗಿಸಲು ಅನುವಾಗುವಂತೆ ನಿಗದಿತ ಅವಧಿಯೊಳಗೆ ಯೋಜನೆಯನ್ನು ಪೂರ್ಣಗೊಳಿಸುವಂತೆ ಕಾನ್‌ಕಾರ್ಡ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಅಶೋಕಪುರಂ ರೈಲು ನಿಲ್ದಾಣ: ಮೈಸೂರಿನ ಅಶೋಕಪುರಂ ರೈಲ್ವೆ ನಿಲ್ದಾಣ ವಿಸ್ತರಣೆ, ಉನ್ನತೀಕರಣ ಕಾಮಗಾರಿಯ ಪ್ರಗತಿ ವೀಕ್ಷಿಸಿದ ಪ್ರತಾಪ್ ಸಿಂಹ, ಮೈಸೂರು ರೈಲು ನಿಲ್ದಾಣದ ಒತ್ತಡ ತಗ್ಗಿಸಿ ಎರಡನೇ ರೈಲ್ವೆ ಯಾರ್ಡ್ ಆಗಿ ಅಶೋಕಪುರಂ ರೈಲು ನಿಲ್ದಾಣ ಅಭಿವೃದ್ಧಿಪಡಿಸಿ ಲೋಕಾರ್ಪಣೆ ಮಾಡುವ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಕ್ಯಾನ್ಸರ್ ಕೇಂದ್ರ: ನಂತರ ಜಲದರ್ಶಿನಿ ಅತಿಥಿ ಗೃಹದ ತಮ್ಮ ಕಚೇರಿಯಲ್ಲಿ ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದ ಅವರು, ಮೈಸೂರು ತಾಲೂಕು ಇಲವಾಲ ಹೋಬಳಿ ದಡದಕಲ್ಲಹಳ್ಳಿ ಗ್ರಾಮದ ಸರ್ವೆ ನಂ.125ರ 18 ಎಕರೆ ಪ್ರದೇಶದಲ್ಲಿ ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯ ಘಟಕ ನಿರ್ಮಾಣ ಮಾಡುವ ಕುರಿತಂತೆ ಸಂಸ್ಥೆ ನಿರ್ದೇಶಕ ಡಾ.ಲೋಕೇಶ್ ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಅಧೀನದಲ್ಲಿರುವ ಕೆಆರ್‌ಎಸ್ ರಸ್ತೆಯ ಪಿಕೆಟಿಬಿ ಆಸ್ಪತ್ರೆ ಆವರಣದಲ್ಲಿ 350 ಹಾಸಿಗೆ ಸಾಮರ್ಥ್ಯದ ಪೆರಿಫೆರಲ್ ಕ್ಯಾನ್ಸರ್ ಕೇಂದ್ರವನ್ನು ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆ ಮೇಲ್ವಿಚಾರಣೆಯಲ್ಲಿ ನಿರ್ಮಿಸಿ ಕ್ಯಾನ್ಸರ್ ರೋಗಿಗಳಿಗೆ ಚಿಕಿತ್ಸೆ ನೀಡುವ ಬಗ್ಗೆಯೂ ಸಂಸದ ಪ್ರತಾಪ್ ಸಿಂಹ ಚರ್ಚಿಸಿ ಅದಕ್ಕೆ ಬೇಕಾಗಿರುವ ಅನುಮೋದನೆಯನ್ನು ಸರ್ಕಾರದಿಂದ ಕೊಡಿಸುವುದಾಗಿ ತಿಳಿಸಿದರು. ಪ್ರಕ್ರಿಯೆಯನ್ನು ತ್ವರಿತವಾಗಿ ಯಾವುದಾದರೂ ಅಡೆ–ತಡೆಗಳು ಎದುರಾದರೆ ತಮ್ಮ ಗಮನಕ್ಕೆ ತರುವಂತೆಯೂ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.







ಬುಧವಾರ ಹುಟ್ಟುಹಬ್ಬ ಆಚರಿಸಿಕೊಂಡ ಮಾಜಿ ಕಾರ್ಪೋರೇಟರ್ ಹಾಗೂ ಉದ್ಯಮಿ ಪ್ರಶಾಂತ್‌ಗೌಡ ಅವರನ್ನು ಮಾಜಿ ಶಾಸಕ ವಾಸು, ಕಾರ್ಪೋರೇಟರ್ ಕೆ.ವಿ.ಶ್ರೀಧರ್, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಗುರುಪ್ರಸಾದ್, ಎಂ.ಎಸ್.ಗುರುರಾಜಶೆಟ್ಟಿ, ರಾಕೇಶ್ ಭಟ್, ಸಂತೋಷ್, ರವಿಚಂದ್ರ, ನಂದ, ಉಮೇಶ್, ವಿಕ್ರಂ ಅಯ್ಯಂಗಾರ್, ಹರೀಶ್‌ಗೌಡ, ನಿತಿನ್, ಪ್ರಶಾಂತ್, ಶಿವಕುಮಾರ್, ದೀಪಕ್, ಪ್ರಮೋದ್‌ಗೌಡ, ಸಂತೋಷ್, ಸುರೇಂದ್ರ, ರಾಜಗೋಪಾಲ್, ಸುದರ್ಶನ್, ಶ್ರೀನಿವಾಸ್, ವಿಘ್ನೇಶ್ವರ ಭಟ್, ಕಾಂತಿಲಾಲ್ ಜೈನ್, ವಿನೋದ್, ಪ್ರಮೋದ್, ನವೀನ್, ರವಿ, ವಿಷ್ಣು ಭಾರೀ ಗಾತ್ರದ ಹಾರ ಹಾಕಿ ಶುಭಾಶಯ ಕೋರಿದರು.

ಹಾಸ್ಟೆಲ್ ಮೆಸ್ ಶುಲ್ಕ ಏಕಾಏಕಿ ಹೆಚ್ಚಳ ಆರೋಪ; ಮೈಸೂರು ವಿವಿ ವಿದ್ಯಾರ್ಥಿಗಳ ದಿಢೀರ್ ಪ್ರತಿಭಟನೆ



ಮೈಸೂರು,ಜ.18(ಪಿಎಂ)–ಹಾಸ್ಟೆಲ್ ಮೆಸ್ ಶುಲ್ಕವನ್ನು ಏಕಾಏಕಿ ಹೆಚ್ಚಳ ಮಾಡಲಾಗಿದೆ ಎಂದು ಆರೋಪಿಸಿ ಮಾನಸಗಂಗೋತ್ರಿಯ ಮೈಸೂರು ವಿವಿ ಸಂಶೋಧನಾ ವಿದ್ಯಾರ್ಥಿಗಳ ನೂತನ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು ಬುಧವಾರ ದಿಢೀರ್ ಪ್ರತಿಭಟನೆ ನಡೆಸಿದರು.

ಹಾಸ್ಟೆಲ್ ಎದುರು ಜಮಾಯಿಸಿದ ವಿದ್ಯಾರ್ಥಿಗಳು, ತಿಂಗಳಿಗೆ 1,900 ರೂ. ಮೆಸ್ ಶುಲ್ಕ ನಿಗದಿ ಮಾಡಲಾಗಿತ್ತು. ಇದೀಗ ಏಕಾಏಕಿ 2,900 ರೂ.ಗೆ ಹೆಚ್ಚಳ ಮಾಡಲಾಗಿದೆ. ಇಷ್ಟು ದುಬಾರಿ ಶುಲ್ಕ ಪಾವತಿ ಮಾಡಲು ಸಾಧ್ಯವಿಲ್ಲ. ಯಾವುದೇ ಕಾರಣಕ್ಕೂ ಪರಿಷ್ಕೃತ ಶುಲ್ಕ ಜಾರಿಗೊಳಿಸದೇ ಈ ಹಿಂದೆ ನಿಗದಿ ಮಾಡಿರುವಂತೆಯೇ ಮೆಸ್ ಶುಲ್ಕ ಪಡೆಯಬೇಕು ಎಂದು ಒತ್ತಾಯಿಸಿದರು.

130 ಸಂಶೋಧನಾ ವಿದ್ಯಾರ್ಥಿಗಳು ಸದರಿ ಹಾಸ್ಟೆಲ್‌ನಲ್ಲಿ ಪ್ರವೇಶಾತಿ ಪಡೆದಿದ್ದೇವೆ. ಆದರೆ ಇಲ್ಲಿ ಮೂಲಭೂತ ಸೌಲಭ್ಯಗಳು ಸಮರ್ಪಕವಾಗಿಲ್ಲ. ಭದ್ರತೆಗಾಗಿ ಸಿಸಿಟಿವಿ ಕೂಡ ಅಳವಡಿಸಿಲ್ಲ. ಸಮರ್ಪಕ ಸೌಲಭ್ಯಗಳನ್ನು ಕಲ್ಪಿಸದೇ ತರಾತುರಿಯಲ್ಲಿ ಹಾಸ್ಟೆಲ್ ಉದ್ಘಾಟಿಸಿ, ಪ್ರವೇಶಾತಿ ನೀಡಲಾಗಿದೆ. ಕೂಡಲೇ ಸಮರ್ಪಕ ಮೂಲ ಸೌಲಭ್ಯ ಕಲ್ಪಿಸಲು ಕ್ರಮ ವಹಿಸಬೇಕು. ಹಾಸ್ಟೆಲ್ ಸ್ವಚ್ಛತೆ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸಬೇಕು ಎಂದು ಆಗ್ರಹಿಸಿದರು. ಸ್ಥಳಕ್ಕೆ ಭೇಟಿ ನೀಡಿದ ವಿದ್ಯಾರ್ಥಿ ಕ್ಷೇಮ ಪಾಲನಾ ಅಧಿಕಾರಿಗಳು, ಈ ಹಿಂದಿನ ಶುಲ್ಕವನ್ನೇ ನಿಗದಿ ಮಾಡಲು ಪ್ರಭಾರ ಕುಲಪತಿಗಳೊಂದಿಗೆ ಮಾತನಾಡುವ ಭರವಸೆ ನೀಡಿದ ಬಳಿಕ ಪ್ರತಿಭಟನೆ ಕೈಬಿಡಲಾಯಿತು.

‘ಮೈಸೂರು ಮಿತ್ರ’ನೊಂದಿಗೆ ಮಾತನಾಡಿದ ಸಂಶೋಧನಾ ವಿದ್ಯಾರ್ಥಿ ಪ್ರದೀಪ್ ಮುಮ್ಮಡಿ, ಈ ಹಿಂದಿನಂತೆ ಮೆಸ್ ಶುಲ್ಕವನ್ನು 1,900 ರೂ. ನಿಗದಿ ಮಾಡಲಾಗುವುದು. ಜೊತೆಗೆ ಮೂಲಭೂತ ಸೌಲಭ್ಯ ಕಲ್ಪಿಸಿ, ಹಾಸ್ಟೆಲ್‌ನಲ್ಲಿ ಸಮರ್ಪಕ ಸ್ವಚ್ಛತೆ ನಿರ್ವಹಣೆಗೆ ಶೀಘ್ರವೇ ಕ್ರಮ ವಹಿಸಲಾಗುವುದು ಎಂದು ಪ್ರಭಾರ ಕುಲಪತಿಗಳು ಭರವಸೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಪ್ರತಿಭಟನೆ ಕೈಬಿಡಲಾಗಿದೆ ಎಂದರು. ಸಂಶೋಧನಾ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ನಟರಾಜ್ ಶಿವಣ್ಣ ಸೇರಿದಂತೆ ಹಾಸ್ಟೆಲ್‌ನ ಸಂಶೋಧನಾ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಉಮೇಶ್‌ಗೆ ಪಿಹೆಚ್.ಡಿ




ಮೈಸೂರು, ಜ.18– ಕರ್ನಾಟಕ ರಾಜ್ಯ ಮುಕ್ತ ವಿವಿಯ ಕುವೆಂಪು ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಪ್ರೊ.ಕವಿತಾ ರೈ ಅವರ ಮಾರ್ಗದರ್ಶನದಲ್ಲಿ ಗುಂಡ್ಲುಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾಪಕ ಉಮೇಶ ಸಾದರಪಡಿಸಿದ ಮಹಾಪ್ರಬಂಧವನ್ನು ಕರಾಮುವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಪಿ.ಗಜೇಂದ್ರ



ಡಾ.ಬಿ.ಕೆ.ರವೀಂದ್ರನಾಥ್ ಅವರ ಮಾರ್ಗದರ್ಶನದಲ್ಲಿ ಪಿ.ಗಜೇಂದ್ರ ಲಿಂಗ್ವಿಸ್ಟಿಕ್ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಹುಟ್ಟುಹಬ್ಬ ಆಚರಿಸಿಕೊಂಡ ಇಲವಾಲ ಗ್ರಾಪಂ ಸದಸ್ಯ, ಯುವ ಮುಖಂಡ ಕರೀಗೌಡ ಅವರನ್ನು ಮುಖಂಡರಾದ ಶ್ರೀಧರ್, ಮಾಯಪ್ಪ, ಚೇತನ್, ಕನಕ, ಅನಿಲ್, ಪ್ರಕಾಶ್, ಅಭಿ, ಪ್ರವೀಣ್, ಮಂಜು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

NEET ಪ್ರವೇಶ ಪರೀಕ್ಷೆ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು,ಜ.18–ಸಮಾಜ ಕಲ್ಯಾಣ ಇಲಾಖೆ ವತಿಯಿಂದ NEET ಪ್ರವೇಶ ಪರೀಕ್ಷೆ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ. 2021–22ನೇ ಸಾಲಿನಲ್ಲಿ ವಿಜ್ಞಾನ ವಿಭಾಗದಲ್ಲಿ ದ್ವಿತೀಯ ಪಿ.ಯು.ಸಿ. ಪೂರ್ಣಗೊಳಿಸಿದ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ 10 ತಿಂಗಳು ಅಥವಾ 2022–23ನೇ ಸಾಲಿನ NEET ಪ್ರವೇಶ ಪರೀಕ್ಷೆ ಪ್ರಾರಂಭವಾಗುವರೆಗೂ ಬೆಂಗಳೂರು ಅಥವಾ ಮಂಗಳೂರು ನಗರದಲ್ಲಿ ಎಇಇ, NEET LONG TERM ವಸತಿಯುತ ತರಬೇತಿಯನ್ನು ಆಯೋಜಿಸಿದ್ದು, ಆಸಕ್ತರು www.sw,kar.nic.in ನಲ್ಲಿ ಜ.31ರವರೆಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ:080–22353759, ಮೊ.ಸಂ:9482300400 ಅನ್ನು ಸಂಪರ್ಕಿಸಬಹುದು.

‘ಸ್ಟಾರ್ ಆಫ್ ಮೈಸೂರ್’ ಛಾಯಾಗ್ರಾಹಕ ಲಕ್ಷ್ಮೀನಾರಾಯಣ ಯಾದವ್‌ಗೆ ರಾಜ್ಯ ಪತ್ರಕರ್ತರ ಸಂಘದ ವಾರ್ಷಿಕ ಪ್ರಶಸ್ತಿ



ಮೈಸೂರು, ಜ. 18– ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಪ್ರತಿವರ್ಷ ನೀಡುವ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಿದ್ದು, ‘ಮೈಸೂರು ಮಿತ್ರ’ನ ಸೋದರ ಪತ್ರಿಕೆ ‘ಸ್ಟಾರ್ ಆಫ್ ಮೈಸೂರ್’ನಲ್ಲಿ ಪ್ರಕಟವಾದ ಸುದ್ದಿಚಿತ್ರಕ್ಕೆ ಛಾಯಾಗ್ರಾಹಕ ಎಂ.ಎನ್.ಲಕ್ಷ್ಮೀನಾರಾಯಣ ಯಾದವ್ ಅತ್ಯುತ್ತಮ ಸುದ್ದಿ ಚಿತ್ರಕ್ಕೆ ನೀಡುವ ಬಂಡಾಪುರ ಮುನಿರಾಜು ಪ್ರಶಸ್ತಿಗೆ ಭಾಜನರಾಗಿದ್ದಾರೆ. ಸಂಘವು 21 ವಿಭಾಗಗಳಲ್ಲಿ ಪ್ರಶಸ್ತಿ ಘೋಷಿಸಿದ್ದು, ವಿಜಯಪುರದಲ್ಲಿ ನಡೆಯುವ 37ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಅತ್ಯುತ್ತಮ ರಾಜಕೀಯ ವಿಮರ್ಶೆಗೆ ನೀಡುವ ಖಾದ್ರಿ ಶಾಮಣ್ಣ ಪ್ರಶಸ್ತಿಗೆ ಮೈಸೂರು ‘ಉದಯವಾಣಿ’ಯ ಕೂಡ್ಲಿ ಗುರುರಾಜ್, ಅತ್ಯುತ್ತಮ ಸ್ಕೂಪ್ ವರದಿಗೆ ನೀಡುವ ಬಿ.ಎಸ್. ವೆಂಕಟರಾಮ್ ಪ್ರಶಸ್ತಿಗೆ ಮೈಸೂರು ‘ಕನ್ನಡಪ್ರಭ’ದ ಎಲ್.ಎಸ್.ಶ್ರೀಕಾಂತ್, ಅತ್ಯುತ್ತಮ ಕ್ರೀಡಾ ವರದಿಗೆ ನೀಡುವ ನೆಟ್ಟಕಲ್ಲಪ್ಪ ಪಶಸ್ತಿಗೆ ಮೈಸೂರು ‘ವಿಜಯವಾಣಿ’ಯ ಅವಿನಾಶ್ ಜೈನಹಳ್ಳಿ, ಅರಣ್ಯ ಕುರಿತ ಅತ್ಯುತ್ತಮ ವರದಿಗೆ ಹುಣಸೂರಿನ ಎಸ್.ಎಸ್.ಸಚ್ಚಿನ್ ಮತ್ತು ಹಾಸನದ ಪಿ.ಎ.ಶ್ರೀನಿವಾಸ, ಆರ್ಥಿಕ ದುರ್ಬಲ ವರ್ಗದ ಅತ್ಯುತ್ತಮ ವರದಿಗೆ ಕೊಡಗಿನ ಗೋಣಿಕೊಪ್ಪದ ಕೆ.ಬಿ.ಜಗದೀಶ್ ಜೋಡುಬೀಟಿ, ಅತ್ಯುತ್ತಮ ವರದಿಗೆ ನೀಡುವ ಸಣ್ಣುವಂಡ ಶ್ರೀನಿವಾಸ ಚಂಗಪ್ಪ ಪ್ರಶಸ್ತಿಗೆ ಕೊಡಗಿನ ‘ಶಕ್ತಿ’ ಪತ್ರಿಕೆಯ ಪಿ.ಪಿ.ಕಾಳಯ್ಯ ಭಾಜನರಾಗಿದ್ದಾರೆ.

ಮೈಸೂರಲ್ಲಿ ನಾಳೆ 116.77 ಕೋಟಿ ವೆಚ್ಚದ ಚೆಸ್ಕಾಂ, ಕೆಪಿಟಿಸಿಎಲ್ ಕಟ್ಟಡಗಳ ಉದ್ಘಾಟನೆ, ಶಂಕುಸ್ಥಾಪನೆ



ಮೈಸೂರು, ಜ.18(ಆರ್‌ಕೆಬಿ)–ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ 116.77 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ ವಿವಿಧ ಕಟ್ಟಡಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆಯನ್ನು ಜ.20ರಂದು ಬೆಳಗ್ಗೆ 11.30 ಗಂಟೆಗೆ ಮಹಾರಾಜ ಕಾಲೇಜು ಮೈದಾನದಲ್ಲಿ ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವ ವಿ.ಸುನಿಲ್‌ಕುಮಾರ್ ನೆರವೇರಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅಧ್ಯಕ್ಷತೆ ವಹಿಸಲಿದ್ದಾರೆ.

ಅಂದು ಸೆಸ್ಕಾಂನ ಕೆ.ಆರ್.ನಗರ, ಮದ್ದೂರು, ಮಡಿಕೇರಿ ವಿಭಾಗ ಕಚೇರಿ, ರಾಮಕೃಷ್ಣನಗರ, ಕೆರಗೋಡು, ಮಂಡ್ಯ ಉಪ ವಿಭಾಗ ಕಚೇರಿ ಜಯಪುರ, ಗದ್ದಿಗೆ, ಬಿ.ಮಟಕೆರೆ, ಹನಗೋಡು, ಆಲನಹಳ್ಳಿ, ಬಸರಾಳು, ಮಳವಳ್ಳಿಗಳಲ್ಲಿ ಶಾಖಾ ಕಚೇರಿ ಕಟ್ಟಡಗಳ ಉದ್ಘಾಟನೆ ಹಾಗೂ ವಿದ್ಯುತ್ ಪ್ರಸರಣ ನಿಗಮದ ಬಿ.ಸಿ.ಹಳ್ಳಿ ಚಾಮಲಾಪುರ 66/11 ಕೆ.ವಿ. ವಿದ್ಯುತ್ ಉಪ ಕೇಂದ್ರ ಕಟ್ಟಡಗಳಿಗೆ ಉದ್ಘಾಟನೆ ನಡೆಯಲಿದೆ.

ಅಲ್ಲದೇ ಸೆಸ್ಕಾಂನ ಕೆ.ಆರ್.ಪೇಟೆಯಲ್ಲಿ ವಿಭಾಗ ಕಚೇರಿ, ಹೆಚ್.ಡಿ.ಕೋಟೆ, ಪಿರಿಯಾಪಟ್ಟಣ, ಗುಂಡ್ಲುಪೇಟೆಯಲ್ಲಿ ಉಪ ವಿಭಾಗ ಕಚೇರಿ, ಹೆಚ್.ಡಿ.ಕೋಟೆ ಮತ್ತು ಕಣಕಟ್ಟೆಯಲ್ಲಿ ಶಾಖಾ ಕಚೇರಿ ಕಟ್ಟಡಗಳಿಗೆ ಹಾಗೂ ವಿದ್ಯುತ್ ಪ್ರಸರಣ ನಿಗಮದ ವರಕೋಡು (ವರುಣಾ), ಉದ್ದೂರು (ಡಿ.ಸಾಲುಂಡಿ), ರತ್ನಪುರಿ, ಮಾರಗೌಡನಹಳ್ಳಿ (ಮಾವತ್ತೂರು), ಸುಂಕತೊಣ್ಣೂರು(ಹಳೇಬೀಡು), ಈಚಲುಗುಡ್ಡ ಕಾವಲ್, ಬೀರುವಳ್ಳಿ, ಧನಗೂರುಗಳಲ್ಲಿ 66/11 ಕೆ.ವಿ. ವಿದ್ಯುತ್ ಉಪ ಕೇಂದ್ರಗಳ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಲಿದೆ. ತಿ.ನರಸೀಪುರ ತಾಲೂಕಿನ ಚಾಮಲಾಪುರ (ಬಿ.ಸೀ.ಹಳ್ಳಿ)ಯಲ್ಲಿ 4.61 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡಿರುವ 66/11 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರದ ಚಾಲನೆಯಿಂದ ಉತ್ತಮ ಗುಣಮಟ್ಟದ ವಿದ್ಯುತ್ ಸರಬರಾಜಿನಿಂದ ವಿದ್ಯುತ್ ಕೇಂದ್ರದ ಸುತ್ತಮುತ್ತಲಿನ ಸುಮಾರು 15 ರಿಂದ 20 ಗ್ರಾಮಗಳಿಗೆ ಪ್ರಯೋಜನವಾಗಲಿದೆ.

ಸುದ್ದಿಗೋಷ್ಠಿಯಲ್ಲಿ ಇಂದು ಈ ಎಲ್ಲಾ ಮಾಹಿತಿಯನ್ನು ಚೆಸ್ಕಾಂ ಎಂಡಿ ಜಯವಿಭವಸ್ವಾಮಿ ತಿಳಿಸಿದರು. ಈ ವೇಳೆ ಕೆ.ವಿ.ಉಮೇಶ್ ಚಂದ್ರ (ನಿರ್ದೇಶಕ, ತಾಂತ್ರಿಕ), ಜಿ.ಎಂ.ರವಿಕುಮಾರ್ (ಆಡಳಿತಾಧಿಕಾರಿ ಮತ್ತು ಮಾನವ ಸಂಪನ್ಮೂಲ), ಎಲ್.ಲೋಕೇಶ್ (ನಿರ್ದೇಶಕ–ತಾಂತ್ರಿಕ), ಆರ್.ಶಾಮಸ್ವಾಮಿ, (ನಿರ್ದೇಶಕ–ಯೋಜನೆ), ಕೆ.ಎಂ.ಮುನಿಗೋಪಾಲ ರಾಜು (ನಿರ್ದೇಶಕ–ಸಂಗ್ರಹಣೆ), ಎಸ್.ರಂಗರಾಜು (ಕೆಪಿಟಿಸಿಎಲ್ ಮುಖ್ಯ ಇಂಜಿನಿಯರ್), ಟಿ.ಎಸ್.ರಮೇಶ್ (ಎಸ್‌ಇ–ಕೆಪಿಟಿಸಿಎಲ್) ಉಪಸ್ಥಿತರಿದ್ದರು.

ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ವಿದ್ಯುತ್ ಕಲ್ಪಿಸಲು ಅರಣ್ಯ ಇಲಾಖೆ ನಿರಾಕ್ಷೇಪಣಾ ಪತ್ರ ನೀಡಿಲ್ಲ

ಮೈಸೂರು, ಜ.18–ಗುಂಡ್ಲುಪೇಟೆ ತಾಲೂಕಿನ ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ವಿದ್ಯುತ್ ಸಂಪರ್ಕ ನೀಡಲು ಅರಣ್ಯ ಇಲಾಖೆ ನಿರಾಕ್ಷೇಪಣಾ ಪತ್ರ ನೀಡಿಲ್ಲ. ಅಲ್ಲದೇ, ಅಲ್ಲಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು 3.5 ಕೋಟಿ ಖರ್ಚಾಗಲಿದ್ದು, ಇದು ಕಾರ್ಯಸಾಧುವಲ್ಲ ಎಂದು ಚೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಜಯವಿಭವ ಸ್ವಾಮಿ ಸ್ಪಷ್ಟಪಡಿಸಿದ್ದಾರೆ.

‘ಗೋಪಾಲಸ್ವಾಮಿ ಬೆಟ್ಟಕ್ಕೆ ವಿದ್ಯುತ್ ನೀಡಲು ತಾರತಮ್ಯ ಆರೋಪ’ ವರದಿಗೆ ಸ್ಪಷ್ಟೀಕರಣ ನೀಡಿರುವ ಅವರು, ಗೋಪಾಲಸ್ವಾಮಿ ಬೆಟ್ಟಕ್ಕೆ ವಿದ್ಯುತ್ ಸಂಪರ್ಕ ಕೋರಿ ಗುಂಡ್ಲುಪೇಟೆ ಉಪ ವಿಭಾಗದಲ್ಲಿ 12.08.2022ರಲ್ಲಿ ಅರ್ಜಿ ನೋಂದಾಯಿಸಲ್ಪಟ್ಟಿದೆ. ಈ ಸಂಬಂಧ ಇಲಾಖೆಯ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿದ್ದು, ದೇವಾಲಯವು ಗ್ರಾಮ ಠಾಣಾ ವ್ಯಾಪ್ತಿಯಿಂದ ಹೊರಗಿದ್ದು, ಹುಲಿ ಸಂರಕ್ಷಣಾ ಅರಣ್ಯ ಪ್ರದೇಶದಲ್ಲಿದೆ. ಯಾವುದೇ ವಿದ್ಯುತ್ ನಿರ್ಮಾಣ ಕಾರ್ಯಕ್ಕೆ ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರದ ಅಗತ್ಯವಿರುತ್ತದೆ. ನಿರಾಕ್ಷೇಪಣಾ ಪತ್ರಕ್ಕಾಗಿ ಅರಣ್ಯ ಜಾಲತಾಣದ ಮೂಲಕ ಅರ್ಜಿ ಸಲ್ಲಿಸಿದ್ದು, ಸ್ವೀಕೃತಿ ದಾಖಲಾಗಿದೆ. ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ನೀಡಿಲ್ಲ.

ದೇವಾಲಯಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲು ನೂತನವಾಗಿ ಹೆಚ್‌ಟಿ/ಎಲ್‌ಟಿ ಮಾರ್ಗಗಳ ನಿರ್ಮಾಣ, ಪರಿವರ್ತಕ ಅಳವಡಿಕೆ ಕಾರ್ಯ ಕೈಗೊಳ್ಳಬೇಕಿದ್ದು, 3.5 ಕೋಟಿ ಮೊತ್ತದ ಅಂದಾಜು ಪಟ್ಟಿ ತಯಾರಿಸಲಾಗಿದೆ. ಆದರೆ ಈ ಪ್ರಸ್ತಾವನೆಯು ಆರ್ಥಿಕ, ತಾಂತ್ರಿಕ ಕಾರ್ಯಸಾಧುವಲ್ಲ ಎಂದು ಮೇಲ್ನೋಟಕ್ಕೆ ಕಂಡು ಬಂದಿರುವ ಕಾರಣ, ವಿದ್ಯುತ್ ಸಂಪರ್ಕ ಕಲ್ಪಿಸಲು ಪರ್ಯಾಯ ವ್ಯವಸ್ಥೆಗಳ ಬಗ್ಗೆ ಸಮಾಲೋಚನೆ ನಡೆಸಲಾಗುತ್ತಿದೆ ಎಂದರು. ಈ ಕುರಿತಂತೆ ಧಾರ್ಮಿಕ ದತ್ತಿ ಇಲಾಖೆ ಆಯುಕ್ತರೊಂದಿಗೆ ಪತ್ರ ವ್ಯವಹರಿಸಲಾಗುತ್ತಿದ್ದು, ಸ್ವಯಂ ಕಾರ್ಯ ನಿರ್ವಹಣೆ ಅಡಿಯಲ್ಲಿ ಅಥವಾ ಠೇವಣಾ ವಂತಿಕೆ ಅನ್ವಯ ಕಾಮಗಾರಿಗೆ ತಗುಲುವ ವೆಚ್ಚ ಭರಿಸಿದರೆ, ಚೆಸ್ಕಾಂ ಮುಂದಿನ ಸೂಕ್ತ ಕ್ರಮ ಕೈಗೊಳ್ಳಲಿದೆ ಎಂದು ಜಯವಿಭವಸ್ವಾಮಿ ತಿಳಿಸಿದ್ದಾರೆ.

ಮೈಸೂರು ಮಿತ್ರ

ಗುರುವಾರ 19 ಜನವರಿ 2023

ನ್ಯೂಜಿಲ್ಯಾಂಡ್ ವಿರುದ್ಧ ಭಾರತಕ್ಕೆ ರೋಚಕ ಜಯ

208 ರನ್ ಬಾರಿಸಿದ ಶುಭ್‌ಮನ್ ಗಿಲ್ ಪಂದ್ಯ ಶ್ರೇಷ್ಠ

ಹೈದರಾಬಾದ್, ಜ.18–ಇಲ್ಲಿನ ರಾಜೀವ್ ಗಾಂಧಿ ಅಂತರರಾಷ್ಟ್ರೀಯ ಸ್ಟೇಡಿಯಂನಲ್ಲಿ ನ್ಯೂಜಿಲ್ಯಾಂಡ್ ವಿರುದ್ಧ ನಡೆದ ಮೊದಲ ಏಕದಿನ ಪಂದ್ಯದಲ್ಲಿ ಆರಂಭಿಕ ಆಟಗಾರ ಶುಭ್‌ಮನ್ ಗಿಲ್ ಅವರ ಚೊಚ್ಚಲ ದ್ವಿಶತಕದ ನೆರವಿನಿಂದ ಭಾರತ ರೋಚಕ ಗೆಲುವು ಸಾಧಿಸಿದೆ.



ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಭಾರತ ತಂಡದ ಆರಂಭಿಕ ಆಟಗಾರ ಶುಭ್‌ಮನ್ ಗಿಲ್, ಒಂದೆಡೆ ನಿರಂತರವಾಗಿ ವಿಕೆಟ್‌ಗಳು ಪತನಗೊಳ್ಳುತ್ತಿದ್ದರೂ, ಧೃತಿಗೆಡದೇ ಕೊನೆಯ ಓವರ್‌ನವರೆಗೂ ಕ್ರೀಸ್‌ನಲ್ಲಿ ನಿಂತು ಸಿಡಿಲಬ್ಬರದ ಬ್ಯಾಟಿಂಗ್‌ನಿಂದ ದ್ವಿಶತಕ ಬಾರಿಸುವ ಮೂಲಕ ಹಲವು ದಾಖಲೆ ನಿರ್ಮಿಸಿದ್ದಾರೆ.

49.2 ಓವರ್‌ವರೆಗೆ ಕ್ರೀಸ್‌ನಲ್ಲಿದ್ದ ಅವರು, 149 ಎಸೆತಗಳಲ್ಲಿ 9 ಸಿಕ್ಸರ್ ಮತ್ತು 19 ಬೌಂಡರಿಗಳೊಂದಿಗೆ 208 ರನ್ ಗಳಿಸಿ ಶಿಪ್ಲಿ ಬೌಲಿಂಗ್‌ನಲ್ಲಿ ಫಿಲಿಪ್ಸ್‌ಗೆ ಕ್ಯಾಚ್ ನೀಡಿ, ಔಟಾದರು. ಶುಭ್‌ಮನ್ ಗಿಲ್ ಜೊತೆ ಬ್ಯಾಟಿಂಗ್ ಆರಂಭಿಸಿದ ನಾಯಕ ರೋಹಿತ್ ಶರ್ಮ 38 ಎಸೆತಗಳಲ್ಲಿ 4 ಬೌಂಡರಿ, 2 ಸಿಕ್ಸರ್‌ಗಳೊಂದಿಗೆ 34 ರನ್ ಗಳಿಸಿ ತಂಡದ ಸ್ಕೋರ್ 60 ಇದ್ದಾಗ ಔಟಾದರು. ನಂತರ ಬಂದ ವಿರಾಟ್ ಕೊಹ್ಲಿ 10 ಎಸೆತಗಳಲ್ಲಿ ಕೇವಲ 8 ರನ್, ವಿಕೆಟ್ ಕೀಪರ್ ಇಶಾನ್ ಕಿಶಾನ್ 14 ಎಸೆತಗಳಲ್ಲಿ ಕೇವಲ 5 ರನ್, ಸೂರ್ಯಕುಮಾರ್ ಯಾದವ್ ಬಿರುಸಿನ ಆಟವಾಡಿ 26 ಎಸೆತಗಳಲ್ಲಿ 4 ಬೌಂಡರಿ ಒಳಗೊಂಡ 31 ರನ್ ಕಲೆಹಾಕಿ, ಔಟಾದರು. ಹಾರ್ದಿಕ್ ಪಾಂಡ್ಯ 38 ಎಸೆತಗಳಲ್ಲಿ 28 ರನ್, ಠಾಕೂರ್ 3 ಎಸೆತದಲ್ಲಿ 3 ರನ್ ಗಳಿಸಿ ಔಟ್ ಆದರು. ಒಂದೆಡೆ ವಿಕೆಟ್‌ಗಳು ಪತನಗೊಳ್ಳುತ್ತಿದ್ದರೂ, ಮತ್ತೊಂದೆಡೆ ಸಿಡಿಲಬ್ಬರದ ಆಟವಾಡುತ್ತಿದ್ದ ಶುಬ್‌ಮನ್ ಗಿಲ್ 48ನೇ ಓವರ್‌ನಲ್ಲಿ ಹ್ಯಾಟ್ರಿಕ್ ಸಿಕ್ಸರ್ ಬಾರಿಸುವ ಮೂಲಕ ಚೊಚ್ಚಲ 200ರ ಗಡಿ ದಾಟಿದರು. ಕುಲ್‌ದೀಪ್‌ಯಾದವ್ 5 ಮತ್ತು ಶಮಿ 2 ರನ್ ಗಳಿಸಿ ಔಟಾಗದೆ ಉಳಿದರು. ಅಂತಿಮವಾಗಿ ಭಾರತ 8 ವಿಕೆಟ್ ನಷ್ಟಕ್ಕೆ 349 ರನ್ ಬಾರಿಸುವ ಮೂಲಕ ನ್ಯೂಜಿಲ್ಯಾಂಡ್‌ಗೆ 350 ರನ್‌ಗಳ ಗುರಿ ನೀಡಿತು.

ನ್ಯೂಜಿಲ್ಯಾಂಡ್ ಪರ ಸಿಂಪ್ಲಿ 9 ಓವರ್‌ಗಳಲ್ಲಿ 74 ರನ್ ನೀಡಿ, 2 ವಿಕೆಟ್ ಗಳಿಸಿದರೆ, ಮಿಚೆಲ್ 5 ಓವರ್‌ಗಳಲ್ಲಿ 30 ರನ್ ನೀಡಿ 2 ವಿಕೆಟ್ ಕಬಳಿಸಿದರು. ಲಾಕಿ ಫರ್ಗ್ಯೂಸನ್, ಟಿಕ್ನರ್ ಮತ್ತು ಸ್ಯಾಂಟ್ನರ್ ತಲಾ ಒಂದು ವಿಕೆಟ್ ಪಡೆದರು.

ಬೃಹತ್ ಮೊತ್ತ ಬೆನ್ನತ್ತಿದ ನ್ಯೂಜಿಲ್ಯಾಂಡ್‌ನ ಆರಂಭಿಕ ಬ್ಯಾಟ್ಸ್‌ಮನ್‌ಗಳು ಅಷ್ಟೇನೂ ಉತ್ತಮ ಪ್ರದರ್ಶನ ನೀಡಲಿಲ್ಲ. 7ನೇ ವಿಕೆಟ್ ಜೊತೆಯಾಟಕ್ಕಿಳಿದ ಮೈಕೇಸ್ ಬ್ರೇಸ್‌ವೆಲ್ ಕೇವಲ 78 ಎಸೆತಗಳಲ್ಲಿ 10 ಸಿಕ್ಸರ್, 12 ಬೌಂಡರಿಗಳ 140 ರನ್ ಬಾರಿಸುವ ಮೂಲಕ ಭಾರತ ತಂಡಕ್ಕೆ ಸದ್ಯ ಆತಂಕವನ್ನುಂಟು ಮಾಡಿದರು. ಅವರ ಜೊತೆಗಾರ ಸ್ಯಾಂಟರ್ ಕೂಡ 45 ಎಸೆತಗಳಲ್ಲಿ 1 ಸಿಕ್ಸರ್, 7 ಬೌಂಡರಿ ನೆರವಿನೊಂದಿಗೆ 57 ರನ್ ಗಳಿಸುವ ಮೂಲಕ ಬೃಹತ್ ಮೊತ್ತದ ಗುರಿ ತಲುಪುವ ವಿಶ್ವಾಸ ಮೂಡಿಸಿದ್ದರು. ಆದರೆ, ಶಿರಾಜ್ ಬೌಲಿಂಗ್‌ನಲ್ಲಿ ಸೂರ್ಯಕುಮಾರ್ ಯಾದವ್‌ಗೆ ಕ್ಯಾಚ್ ನೀಡಿ, ಸ್ಯಾಂಟರ್ ನಿರ್ಗಮಿಸಿದರು. ಕೊನೆಯ ಓವರ್‌ನಲ್ಲಿ ಗೆಲುವು ಸಾಧಿಸಲು ನ್ಯೂಜಿಲ್ಯಾಂಡ್‌ಗೆ ಕೇವಲ 13 ರನ್‌ಗಳು ಮಾತ್ರ ಬೇಕಿತ್ತು. ಸಿಡಿಲಬ್ಬರದ ಬ್ಯಾಟ್ಸ್‌ಮನ್ ಬ್ರೇಸ್‌ವೆಲ್ ಕ್ರೀಸ್‌ನಲ್ಲಿದ್ದರು. ನ್ಯೂಜಿಲ್ಯಾಂಡ್ ತಂಡಕ್ಕೆ ಆಗಲೂ ಗೆಲುವಿನ ವಿಶ್ವಾಸವಿತ್ತು. ಆದರೆ, 49.2ನೇ ಓವರ್‌ನಲ್ಲಿ ಶಾರ್ದೂಲ್ ಠಾಕೂರ್, ಬ್ರೇಸ್‌ವೆಲ್ ಎಲ್‌ಬಿಡಬ್ಲ್ಯೂಗೆ ಕೆಡವುವ ಮೂಲಕ ಭಾರತಕ್ಕೆ 12 ರನ್‌ಗಳ ರೋಚಕ ಗೆಲುವು ತಂದು ಕೊಟ್ಟರು.

ಭಾರತದ ಪರ ಮಹಮದ್ ಶಿರಾಜ್ 10 ಓವರ್‌ಗಳಲ್ಲಿ 2 ಮೇಡನ್‌ಗಳನ್ನು ಪಡೆದು 46 ರನ್ ನೀಡಿ 4 ವಿಕೆಟ್ ಕಬಳಿಸುವ ಮೂಲಕ ಅತ್ಯುತ್ತಮ ಬೌಲರ್ ಆಗಿ ಹೊರಹೊಮ್ಮಿದರೆ, ಕುಲ್‌ದೀಪ್ ಯಾದವ್ 8 ಓವರ್‌ಗಳಲ್ಲಿ 43 ರನ್ ನೀಡಿ 2 ವಿಕೆಟ್ ಗಳಿಸಿದರು. ಠಾಕೂರ್ 7.2 ಓವರ್‌ನಲ್ಲಿ 54 ರನ್‌ಗಳನ್ನು ನೀಡಿ, 2 ವಿಕೆಟ್ ಗಳಿಸಿದರು. ಚೊಚ್ಚಲ ದ್ವಿಶತಕ ಬಾರಿಸಿದ ಶುಭ್‌ಮನ್ ಗಿಲ್ 'ಪಂದ್ಯ ಶ್ರೇಷ್ಠ' ಪ್ರಶಸ್ತಿಗೆ ಭಾಜನರಾದರು.

ಶುಬ್‌ಮನ್ ಗಿಲ್ ಎಲೈಟ್ ಕ್ಲಬ್‌ಗೆ ಲಗ್ಗೆ

ಹೈದರಾಬಾದ್, ಜ.18– ನ್ಯೂಜಿಲೆಂಡ್ ವಿರುದ್ಧದ ಮೊದಲ ಏಕದಿನ ಪಂದ್ಯದಲ್ಲಿ ಅಮೋಘ ದ್ವಿಶತಕ ದಾಖಲಿಸಿದ ಶುಭ್‌ಮನ್ ಗಿಲ್, ಈ ಮೂಲಕ ಕ್ರಿಕೆಟ್ ಜಗತ್ತಿನ ಎಲೈಟ್ ಕ್ಲಬ್(Elite Club) ಸೇರಿದ್ದಾರೆ. ಹೈದರಾಬಾದ್‌ನಲ್ಲಿ ನಡೆಯುತ್ತಿರುವ ನ್ಯೂಜಿಲೆಂಡ್ ವಿರುದ್ಧ ಮೊದಲ ಏಕದಿನ ಪಂದ್ಯದಲ್ಲಿ ಶುಭ್‌ಮನ್ ಗಿಲ್ ಭರ್ಜರಿ ಬ್ಯಾಟಿಂಗ್ ಮೂಲಕ ಏಕದಿನ ಕ್ರಿಕೆಟ್‌ನಲ್ಲಿ ತಮ್ಮ ಚೊಚ್ಚಲ ದ್ವಿಶತಕ ಸಿಡಿಸಿದರು.

ಭಾರತದ 5ನೇ ಆಟಗಾರ, 7ನೇ ದ್ವಿಶತಕ

ಏಕದಿನ ಕ್ರಿಕೆಟ್‌ನಲ್ಲಿ ಗಿಲ್ ಸಿಡಿಸಿದ ದ್ವಿಶತಕ, ಅಂತರಾಷ್ಟ್ರೀಯ ಏಕದಿನ ಕ್ರಿಕೆಟ್‌ನಲ್ಲಿ ದಾಖಲಾದ 10ನೇ ದ್ವಿಶತಕವಾಗಿದ್ದು, ಭಾರತದ ಪರ ದಾಖಲಾದ 7ನೇ ದ್ವಿಶತಕವಾಗಿದೆ. ಅಲ್ಲದೆ ಭಾರತದ ಪರ ದ್ವಿಶತಕ ಸಿಡಿಸಿದ 5ನೇ ಆಟಗಾರ ಎಂಬ ಕೀರ್ತಿಗೂ ಶುಭ್‌ಮನ್ ಗಿಲ್ ಪಾತ್ರರಾಗಿದ್ದಾರೆ. ಈ ಹಿಂದೆ ಸಚಿನ್ ತೆಂಡೂಲ್ಕರ್, ವಿರೇಂದ್ರ ಸೆಹ್ವಾಗ್, ರೋಹಿತ್ ಶರ್ಮಾ, ಇಶಾನ್ ಕಿಶನ್ ಭಾರತದ ಪರ ದ್ವಿಶತಕದ ಸಾಧನೆ ಮಾಡಿದ್ದರು. ಇದೀಗ ಈ ಪಟ್ಟಿಗೆ ಶುಭ್‌ಮನ್ ಗಿಲ್ ಸೇರಿದ್ದಾರೆ.

ದಾಖಲೆ: ಕೇವಲ 19 ಪಂದ್ಯಗಳಲ್ಲಿ ಸಾವಿರ ರನ್ ಪೂರೈಸಿರುವ ಶುಬ್‌ಮನ್ ಗಿಲ್, ಅತೀ ವೇಗವಾಗಿ ಸಾವಿರ ರನ್ ಪೂರೈಸಿದ ಭಾರತದ ಮೊದಲನೆಯ ಆಟಗಾರನಾಗಿ ಹೊಸ ದಾಖಲೆ ಬರೆದಿದ್ದಾರೆ. ವಿರಾಟ್ ಕೊಹ್ಲಿ ಹಾಗೂ ಶಿಖರ್ ದವನ್ 24 ಪಂದ್ಯಗಳಲ್ಲಿ ಸಾವಿರ ರನ್ ಪೂರೈಸಿದ್ದರು. ಈ ಇಬ್ಬರ ದಾಖಲೆಯನ್ನು ಶುಬ್‌ಮನ್ ಗಿಲ್ ಹಿಂದಿಕ್ಕಿದ್ದಾರೆ. ಅಲ್ಲದೆ ದ್ವಿಶತಕ ದಾಖಲಿಸಿದ ಅತ್ಯಂತ ಕಿರಿಯ ಆಟಗಾರ ಎಂಬ ಹೆಗ್ಗಳಿಕೆಗೂ ಶುಬ್‌ಮನ್ ಗಿಲ್ ಪಾತ್ರರಾಗಿದ್ದಾರೆ.

ಒಂದನೇ ಪುಟದಿಂದ

ವರ್ಣರಂಜಿತ ಚಾಲನೆ

ನೀಡಿದರು. ಇದಕ್ಕೂ ಮೊದಲು ಕತೃ ಗದ್ದುಗೆಯಲ್ಲಿ ಮಹಾಸಂಕಲ್ಪಪೂರ್ವಕ ಮಹಾರುದ್ರಾಭಿಷೇಕ ನೆರವೇರಿಸಲಾಯಿತು. ಗ್ರಾಮದ ದೇವಾಲಯಗಳಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಷಟ್ ಸ್ಥಳ ಧ್ವಜಾರೋಹಣವನ್ನು ಕೊಡಗಿನ ಶ್ರೀ ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ ನೆರವೇರಿಸಿದರು. ಉಕ್ಕಿನಮಠದ ಸಾಂಬಸದಾಶಿವ ಸ್ವಾಮೀಜಿ ಧರ್ಮ ಸಂದೇಶ ನೀಡಿದರು. ಬೆಳಗ್ಗೆ 8 ಗಂಟೆಗೆ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಉತ್ಸವ ಮೂರ್ತಿಗೆ ಅಭಿಷೇಕ ಮಹಾಮಂಗಳಾರತಿಯನ್ನು ನೆರವೇರಿಸಲಾಯಿತು. ಸಂಜೆ 4.30ಕ್ಕೆ ಉತ್ಸವಮೂರ್ತಿಯನ್ನು ಶ್ರೀಮಠದಿಂದ ಕರ್ತೃ ಗದ್ದುಗೆಗೆ ಬಿಜಯಂಗೈಸಲಾಯಿತು. ರಾತ್ರಿ 7.30ರಲ್ಲಿ ಕರ್ತೃಗದ್ದುಗೆಯಲ್ಲಿ ಅಗ್ರೋದಕ, ಪುಣ್ಯಹ, ನಾಂದಿ, ಕಲಸ ಸ್ಥಾಪನೆ, ಅಂಕುರಾರ್ಪಣೆ ನೆರವೇರಿಸಲಾಯಿತು. ಜನಪದ ಗಾಯನ, ರಂಗಗೀತೆ, ಭಕ್ತಿಗೀತೆ, ಭರತನಾಟ್ಯ, ಬಿಚ್ಚಿದ ಜೋಳಿಗೆ, ನಾಟಕ, ದಕ್ಷಯಜ್ಞ, ಪ್ರಭುಲಿಂಗಲೀಲೆ, ಶಿವಕುಮಾರ ನಾಟಕಗಳು ಜನರಿಗೆ ಮುದ ನೀಡಿದವು.

ಮಠ ಮಾನ್ಯಗಳಿಂದ ವೈಷಮ್ಯ ದೂರ: ಶೆಟ್ಟರ್

ಸಮರ್ಥ ನಾಯಕತ್ವದಿಂದ ದೇಶ ಮುಂಚೂಣಿಗೆ: ಪ್ರಧಾನಿ ಮೋದಿ ದೊಡ್ಡ ಜನಸಂಖ್ಯೆಯುಳ್ಳ ದೇಶದಲ್ಲಿ ಉಚಿತ ವ್ಯಾಕ್ಸಿನೇಷನ್ ನೀಡುವ ಮೂಲಕ ದೇಶದಿಂದ ಕೊರೊನಾವನ್ನು ಹೋಗಲಾಡಿಸಿದ್ದಾರೆ. ಸಮರ್ಥ ನಾಯಕತ್ವವಿದ್ದರೆ ದೇಶ ಹೇಗೆ ಬೆಳವಣಿಗೆಯಾಗಲಿದೆ ಎಂಬುದಕ್ಕೆ ಮೋದಿ ಉದಾಹರಣೆ, ಜಾಗತಿಕ ಮಟ್ಟದಲ್ಲಿ ನಂ.1 ನಾಯಕನೆನಿಸಿದ್ದಾರೆ. ಪಾಕಿಸ್ತಾನದಲ್ಲಿ ನಾಯಕತ್ವ ಕೊರತೆಯಿಂದ ಆರ್ಥಿಕವಾಗಿ ದಿವಾಳಿಯಾಗಿದೆ. ಚೈನಾದ ಸೈನಿಕರನ್ನೂ ಹಿಮ್ಮೆಟ್ಟಿಸುವಂತಹ ಧೈರ್ಯ ದೇಶದ ಸೈನಿಕರಿಗೆ ಬಂದಿರುವುದಕ್ಕೆ ಮೋದಿ ಕಾರಣ ಎಂದರು. ಕೃಷಿ ಸಚಿವ ಬಿ.ಸಿ.ಪಾಟೀಲ್ ಮಾತನಾಡಿ, ಕೃಷಿ ವಿಶ್ವವಿದ್ಯಾನಿಲಯದಲ್ಲಿ ಮಾಡದ ಕೃಷಿ ಮಾದರಿಯನ್ನು ಸುತ್ತೂರು ಜಾತ್ರೆಯಲ್ಲಿ ಆಧುನಿಕ, ಸಾವಯವ ಮಾದರಿಗಳನ್ನು ಮಾಡುವ ಮೂಲಕ ರೈತರಿಗೆ ತಿಳುವಳಿಕೆ ಮೂಡಿಸಿ ಅವರ ಬದುಕು ಕಟ್ಟಿಕೊಡುವ ಕೆಲಸವನ್ನು ಮಾಡಿದ್ದಾರೆ ಎಂದರು.

ರೈತರಿಗೆ ಅನೇಕ ರೈತಪರ ಕಲ್ಯಾಣ ಕೆಲಸವನ್ನು ಸರ್ಕಾರ ಕೈಗೊಂಡಿದೆ. 11 ಸಾವಿರ ಕೃಷಿ ಕಾರ್ಮಿಕರು, ರೈತರ ಮಕ್ಕಳಿಗೆ ವಿದ್ಯಾನಿಧಿಯನ್ನು ಕೊಡಲಾಗಿದೆ. ರೈತರಿಗೆ ನೆರವಾಗುವ ಉದ್ದೇಶದಿಂದ ರೈತ ಶಕ್ತಿ ಯೋಜನೆಯನ್ನು ಜಾರಿಗೊಳಿಸಿ 10 ಎಕರೆಗೆ 1250 ರೂ. ಡೀಸೆಲ್ ಸಬ್ಸಿಡಿ ಕೊಡುವ ಯೋಜನೆಯನ್ನು ಜ.31ರಂದು ಘೋಷಣೆ ಮಾಡಲಾಗುವುದು ಎಂದರು.

ವರುಣಾ ಜನರನ್ನು ನೆನೆಯದಿದ್ದರೆ ಅಪರಾಧ: ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಮಾತನಾಡಿ, ನಾನು ರಾಜಕಾರಣದಲ್ಲಿ ಎಷ್ಟೇ ಎತ್ತರಕ್ಕೆ ಬೆಳೆದರೂ ಸಹ ಮೈಸೂರು ಮತ್ತು ವರುಣಾ ಭಾಗದ ಜನರ ಪ್ರೀತಿ ವಿಶ್ವಾಸವನ್ನು ಮರೆಯಲು ಸಾಧ್ಯವಿಲ್ಲ. ಈ ಜನರ ಋಣವನ್ನು ತೀರಿಸಲು ಸಾಧ್ಯವಿಲ್ಲ. ಈ ಜನರ ಪ್ರೀತಿ, ವಿಶ್ವಾಸವನ್ನು ಉಳಿಸಿಕೊಳ್ಳುತ್ತೇನೆ ಎಂದರು. ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯ ಮುಖ್ಯಸ್ಥ ಡಾ.ವಿ.ಲೋಕೇಶ್ ಮಾತನಾಡಿ, ಪ್ರತಿ ವರ್ಷ 12 ಲಕ್ಷ ಕ್ಯಾನ್ಸರ್ ರೋಗಿಗಳು ಪತ್ತೆಯಾಗುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಇದು ದ್ವಿಗುಣವಾಗಲಿದೆ. ಕ್ಯಾನ್ಸರ್‌ನಿಂದ ದೂರವಿರಲು ಸೊಪ್ಪು, ತರಕಾರಿ, ಹೆಚ್ಚಾಗಿ ತಿನ್ನಬೇಕು, ನಿತ್ಯ ವ್ಯಾಯಾಮದಲ್ಲಿ ತೊಡಗಬೇಕೆಂದು ಸಲಹೆ ನೀಡಿದರು.ಸಮಾರಂಭದಲ್ಲಿ ಕೇಂದ್ರ ಸಾಮಾಜಿಕ ನ್ಯಾಯ ಸಬಲೀಕರಣ ಸಚಿವ ನಾರಾಯಣಸ್ವಾಮಿ ಮಾತನಾಡಿದರು. ಸುತ್ತೂರು ದೇಶಿಕೇಂದ್ರ ಸ್ವಾಮೀಜಿ, ಕಾಸರಗೋಡಿನ ಎಡನೀರು ಮಠದ ಸಚ್ಚಿದಾನಂದ ಭಾರತೀ ಶ್ರೀಪಾದಂಗಳು ದಿವ್ಯ ಸಾನ್ನಿಧ್ಯ ವಹಿಸಿದ್ದರು. ಸಮಾರಂಭದಲ್ಲಿ ಶಾಸಕರಾದ ಯತೀಂದ್ರ ಸಿದ್ದರಾಮಯ್ಯ, ನಿರಂಜನಕುಮಾರ್, ಮಾಜಿ ಶಾಸಕ ಮರಿತಿಬ್ಬೇಗೌಡ, ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಶಿವಣ್ಣ, ಶಿಲ್ಪ ಜಗದೀಶ್‌ಶೆಟ್ಟರ್, ತ್ರಿಪುರಾಂತಕ ಇದ್ದರು.

ಮೈಸೂರಿನಲ್ಲಿ ಸಿರಿಧಾನ್ಯ ಹಬ್ಬಕ್ಕೆ ಕೃಷಿ ಸಚಿವ ಬಿ.ಸಿ.ಪಾಟೀಲ್ ಚಾಲನೆ

ಅಂದು ಬಡವರ ಆಹಾರವಾಗಿದ್ದ ಸಿರಿಧಾನ್ಯ ಈಗ ಶ್ರೀಮಂತರ ಆಹಾರ!



ಮೈಸೂರು, ಜ.18(ಎಂಕೆ)– ಖುಷಿ ನೀಡುವ ಕೃಷಿಯನ್ನು ಪ್ರೀತಿಸಿ, ಬೆಳೆಸುವುದರ ಜೊತೆಗೆ ಎಲ್ಲರ ಆರೋಗ್ಯದ ದೃಷ್ಟಿಯಿಂದ ರೈತರು ಪೌಷ್ಟಿಕಾಂಶ ಹೆಚ್ಚಾಗಿರುವ ಸಿರಿಧಾನ್ಯಗಳನ್ನು ಬೆಳೆಯುವುದು ಅವಶ್ಯವಾಗಿದೆ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಹೇಳಿದರು.

ದಸರಾ ವಸ್ತುಪ್ರದರ್ಶನ ಆವರಣದಲ್ಲಿರುವ ಪಿ.ಕಾಳಿಂಗರಾವ್ ಗಾನ ಮಂಟಪದಲ್ಲಿ ಕೃಷಿ ಇಲಾಖೆ ವತಿಯಿಂದ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆಯಡಿ ಆಯೋಜಿಸಿದ್ದ 'ಜಿಲ್ಲಾ ಮಟ್ಟದ ಸಿರಿಧಾನ್ಯ ಉತ್ಪಾದಕರ ಮಾರುಕಟ್ಟೆದಾರರ ಕಾರ್ಯಾಗಾರ ಹಾಗೂ ಜಿಲ್ಲಾ ಮಟ್ಟದ ಸಿರಿಧಾನ್ಯ ಹಬ್ಬವನ್ನು ಮಡಿಕೆಗಳಿಗೆ ಸಿರಿಧಾನ್ಯ ತುಂಬುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಪೌಷ್ಟಿಕಾಂಶದ ಭದ್ರತೆಗಾಗಿ ರೈತರು ಸಿರಿಧಾನ್ಯಗಳನ್ನು ಬೆಳೆಯುವಂತೆ ಕರೆ ನೀಡಿದರು.

ಒಂದು ಕಾಲದಲ್ಲಿ ಬಡವರ ಆಹಾರವಾಗಿದ್ದ ಸಿರಿಧಾನ್ಯ ಇಂದು ಶ್ರೀಮಂತರ ಆಹಾರವಾಗಿದೆ. ಪುರಾತನ ಕಾಲದಲ್ಲಿ ಬಳಕೆಯಾಗುತ್ತಿದ್ದ ಆಹಾರ ಪದಾರ್ಥಗಳು ಮತ್ತೆ ಪುನರ್ ಬಳಕೆಗೆ ಬರುತ್ತಿವೆ ಎನ್ನುವುದಕ್ಕೆ ಈ ಸಿರಿಧಾನ್ಯಗಳು ಉದಾಹರಣೆ. ಅತಿಯಾದ ರಸಾಯನಿಕ ಗೊಬ್ಬರ, ಕ್ರಿಮಿನಾಶಕಗಳ ಬಳಕೆಯಿಂದ ಆಹಾರ ಪದಾರ್ಥಗಳು ವಿಷಪೂರಿತವಾಗುತ್ತಿದ್ದು, ಪೌಷ್ಟಿಕಾಂಶದ ಕೊರತೆಯಿಂದ ಕೂಡಿವೆ. ಇದರಿಂದಾಗಿ ಜನರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದ್ದು, ಬಿಪಿ, ಶುಗರ್ ನಂತಹ ಕಾಯಿಲೆಗಳು ಹೆಚ್ಚಾಗುತ್ತಿವೆ. ಇದನ್ನು ಮನಗಂಡು 2017, 18 ಮತ್ತು 19ರಲ್ಲಿ ರಾಜ್ಯದಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಿರಿಧಾನ್ಯ ಮೇಳವನ್ನು ಆಯೋಜಿಸಿ, ಅಂತರರಾಷ್ಟ್ರೀಯ ಸಿರಿಧಾನ್ಯ ವರ್ಷವೆಂದು ಘೋಷಣೆ ಮಾಡಲು ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಅದರಂತೆ 77 ರಾಷ್ಟ್ರಗಳ ಒಪ್ಪಿಗೆಯೊಂದಿಗೆ 2023ನೇ ವರ್ಷವನ್ನು ಅಂತರರಾಷ್ಟ್ರೀಯ ಸಿರಿಧಾನ್ಯಗಳ ವರ್ಷವೆಂದು ಘೋಷಣೆ ಮಾಡಲಾಗಿದೆ ಎಂದರು.

10 ಸಾವಿರ ರೂ. ಪ್ರೋತ್ಸಾಹ ಧನ: ರಾಜ್ಯ ಸರ್ಕಾರದಿಂದ ಸಿರಿಧಾನ್ಯ ಬೆಳೆಯುವ ರೈತರಿಗೆ ಪ್ರತೀ ಹೆಕ್ಟರ್‌ಗೆ 10 ಸಾವಿರ ರೂ.ಪ್ರೋತ್ಸಾಹ ಧನ ನೀಡಲಾಗುತ್ತಿದೆ. ಬೇರೆ ಬೇರೆ ದೇಶಗಳಿಂದಲೂ ಸಿರಿಧಾನ್ಯಕ್ಕೆ ಬೇಡಿಕೆ ಹೆಚ್ಚಾಗುತ್ತಿದೆ. ಈ ನಿಟ್ಟಿನಲ್ಲಿ ಸಿರಿಧಾನ್ಯ ರಫ್ತುದಾರರು ಮತ್ತು ಆಮದುದಾರರ ನಡುವೆ ಸೇತುವೆಯಾಗಿ ಕೃಷಿ ಇಲಾಖೆ ಕೆಲಸ ಮಾಡುತ್ತಿದೆ. ಕೃಷಿ ಖುಷಿ ಕೊಡುತ್ತದೆ. ಬಹಳಷ್ಟು ಜನ, ಅದರಲ್ಲೂ ಇತ್ತೀಚೆಗೆ ಯುವಕರು ಕೃಷಿಯತ್ತಾ ಬರುತ್ತಿದ್ದಾರೆ ಎಂದು ತಿಳಿಸಿದರು.

ರಾಜ್ಯದಲ್ಲಿ ಹಲವು ಮಂದಿ ಪ್ರಗತಿಪರ ರೈತರು ಕೃಷಿ ಲಾಭದಾಯಕವೆಂದು ಪ್ರತ್ಯಕ್ಷವಾಗಿ ತೋರಿಸಿದ್ದಾರೆ. ಒಂದೂವರೆ ಎಕರೆ ಜಾಗದಲ್ಲಿ ವರ್ಷಕ್ಕೆ 10–15 ಲಕ್ಷ ಆದಾಯ ಗಳಿಸುವವರಿದ್ದಾರೆ. ಕೃಷಿ ಭೂಮಿ ಕಡಿಮೆಯಾಗುತ್ತಿದ್ದರೂ ಆಹಾರ ಪದಾರ್ಥಗಳ ಉತ್ಪಾದನೆ ಕಡಿಮೆಯಾಗುತ್ತಿಲ್ಲ. ದೇಶಕ್ಕೆ ಅನ್ನ ನೀಡುವುದು ರೈತರೇ ಹೊರತು ಟಾಟಾ, ಅಂಬಾನಿ, ಅದಾನಿಯಲ್ಲ ಎನ್ನುವ ಮೂಲಕ ನೆರೆದಿದ್ದ ರೈತರನ್ನು ಪ್ರೋತ್ಸಾಹಿಸಿದರು.

ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ಉಪ ಮೇಯರ್ ಡಾ.ರೂಪ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಡಾ.ಬಿ.ಎಸ್.ಚಂದ್ರಶೇಖರ್, ಮೈಸೂರು ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಅಧ್ಯಕ್ಷ ಲಿಂಗರಾಜು, ಪ್ರಗತಿಪರ ರೈತರಾದ ದಿಲೀಪ್‌ಕುಮಾರ್, ಮಧು ಕಿಶೋರ್ ಹೆಗಡೆ, ಕಲ್ಲಹಳ್ಳಿ ಶಿವಕುಮಾರ್ ಮತ್ತಿತರರಿದ್ದರು.

ಸಿರಿಧಾನ್ಯ ಪದಾರ್ಥಗಳಿಗೆ ಮುಗಿಬಿದ್ದ ಜನ...: ಸಿರಿಧಾನ್ಯ ಮೇಳದಲ್ಲಿನ ಸಿರಿಧಾನ್ಯ ಮಳಿಗೆಗಳತ್ತ ಧಾವಿಸಿದ ಜನರು, ಸಿರಿಧಾನ್ಯಗಳಿಂದ ತಯಾರಿಸಿದ ಪದಾರ್ಥಗಳನ್ನು ಕೊಂಡುಕೊಳ್ಳಲು ಮುಗಿಬಿದ್ದರು.

ನವಣೆ, ಸಾಮೆ, ಸಜ್ಜೆ, ಊದಲು, ರಾಗಿ ಇನ್ನಿತರೆ ಸಿರಿಧಾನ್ಯಗಳಿಂದ ತಯಾರಿಸಿದ್ದ ತಿನಿಸುಗಳನ್ನು ಖರೀದಿಸಿದರು. ವಿವಿಧ ಬಗೆಯ ಜೇನುತುಪ್ಪದ ಬಾಟಲ್‌ಗಳು, ಜೀನಿ ಹೆಲ್ತ್ ಮಿಕ್ಸ್ ಸೇರಿದಂತೆ ಸಿರಿಧಾನ್ಯ ಪದಾರ್ಥಗಳಿಗೆ ಭಾರೀ ಬೇಡಿಕೆ ಕಂಡುಬಂದಿತು.

ರಾಜಕಾರಣಿಗಳು ಮಾತಿನ ಎಲ್ಲೆ ಮೀರಬಾರದು

ಕಾಂಗ್ರೆಸ್‌ನ ಹರಿಪ್ರಸಾದ್ ಹೇಳಿಕೆಗೆ ಕೃಷಿ ಸಚಿವ ಬಿ.ಸಿ.ಪಾಟೀಲ್ ಎದಿರೇಟು

ಮೈಸೂರು, ಜ.18(ಎಂಕೆ)– ರಾಜಕಾರಣಿಗಳು ಮಾತಿನ ಎಲ್ಲೆ ಮೀರಬಾರದು. ಯಾರೇ ಆದರೂ ಕೆಟ್ಟ ಕೆಟ್ಟ ಶಬ್ದಗಳನ್ನು ಬಳಸುವುದನ್ನು ನಿಲ್ಲಿಸಬೇಕು. ಪ್ರಗತಿಯ ಬಗ್ಗೆ, ಒಳ್ಳೆ ವಿಚಾರಗಳ ಬಗ್ಗೆ ಚರ್ಚಿಸಬೇಕು, ಮಾತನಾಡಬೇಕೇ ವಿನಃ ಕೆಟ್ಟ ಪದಗಳನ್ನು ಬಳಸುವುದು, ಬಳಸುವುದರಿಂದ ಪಾಪ್ಯುಲರ್ ಆಗುತ್ತೇವೆ ಎಂದುಕೊಳ್ಳುವುದು ಮೂರ್ಖತನದ ಪರಮಾವಧಿ ಎಂದು ಕೃಷಿ ಸಚಿವ ಬಿ.ಸಿ.ಪಾಟೀಲ್ ಹೇಳಿದರು.

ದಸರಾ ವಸ್ತುಪ್ರದರ್ಶನ ಆವರಣದಲ್ಲಿ ವಿಧಾನಪರಿಷತ್ ವಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್ ಅವರ 'ವೇಶ್ಯೆ' ಹೇಳಿಕೆ ಕುರಿತು ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಇನ್ನೊಬ್ಬರ ಬಗ್ಗೆ ಕೆಟ್ಟದಾಗಿ, ಕೀಳಾಗಿ ಮಾತನಾಡಿದರೆ ಜನ ಮತ ನೀಡುತ್ತಾರೆ ಎಂದುಕೊಂಡರೆ ಅದಕ್ಕಿಂತ ಮೂರ್ಖತನ ಮತ್ತೊಂದಿಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ಪ್ರೀತಿ ಗಳಿಸಿ, ಅಭಿವೃದ್ಧಿ ಕಾರ್ಯಗಳನ್ನು ಮಾಡಿದರಷ್ಟೇ ಜನ ಮನ್ನಣೆಯನ್ನು ಪಡೆಯಲು ಸಾಧ್ಯ. ಯಾರೋ ಒಂದಷ್ಟು ಜನ ಚಪ್ಪಾಳೆ ಹೊಡೆಯುತ್ತಾರೆ ಎಂದು ಬಾಯಿಗೆ ಬಂದಂತೆ ಮಾತನಾಡುವುದು ಸರಿಯಲ್ಲ ಎಂದು ಕಿಡಿಕಾರಿದರು.

ತಾವು ಪೊಲೀಸ್ ಅಧಿಕಾರಿಯಾಗಿದ್ದಾಗ ಯಶವಂತಪುರ ಪೊಲೀಸ್ ಠಾಣೆ ಮೇಲೆ ಮಹಿಳೆಯರು ದಾಳಿ ಮಾಡಿದ್ದರು ಎಂಬ ಆರೋಪ ಕುರಿತು ಪ್ರತಿಕ್ರಿಯಿಸಿ, ಹಲ್ಲೆ ಮಾಡಿದ್ದು ಮಹಿಳೆಯರಲ್ಲ. ಠಾಣೆಯಲ್ಲಿ ಸಿಬ್ಬಂದಿಗಳ ಸಂಖ್ಯೆ ಕಡಿಮೆಯಿದ್ದಾಗ ರೌಡಿಗಳು ಅಟ್ಯಾಕ್ ಮಾಡಿದ್ದರು. ಮರುದಿನವೇ ರೌಡಿಗಳನ್ನು ಬಂಧಿಸಲಾಗಿತ್ತು. ಪೊಲೀಸ್ ಹುದ್ದೆಯಲ್ಲಿದ್ದಾಗ ಹೊಡೆಯುವುದು, ಹೊಡೆಸಿಕೊಳ್ಳುವುದು ಸಹಜ. ಒಬ್ಬ ವ್ಯಕ್ತಿಯ ಬಾಯಿಂದ ಬರುವ ಶಬ್ದಗಳು ಆತನ ಸಂಸ್ಕೃತಿಯನ್ನು ತೋರುತ್ತವೆ. ಆಗಾಗಿ ಅವರು ಯಾವ ಶಬ್ದಗಳನ್ನು ಬಳಸುತ್ತಿದ್ದಾರೆ, ಅವರಲ್ಲಿ ಯಾವ ಸಂಸ್ಕೃತಿ ಇದೆ ಎಂಬುದು ಜನತೆಗೆ ತಿಳಿಯುತ್ತಿದೆ ಎಂದು ಟಾಂಗ್ ನೀಡಿದರು.

ಟೀಕೆ ಮಾಡುವುದು ಬಿಟ್ಟು ಬೇರೇನೂ ಗೊತ್ತಿಲ್ಲ: ಪ್ರಧಾನಿ ಮೋದಿಯವರು ಸ್ಕಿಲ್ ಇಂಡಿಯಾ ಬದಲು ಕಿಲ್ ಇಂಡಿಯಾ ಮಾಡುತ್ತಿದ್ದಾರೆ ಎಂಬ ಬಿ.ಕೆ.ಹರಿಪ್ರಸಾದ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಕೃಷಿ ಸಚಿವ ಬಿ.ಸಿ.ಪಾಟೀಲ್, ಅವರಿಗೆ ಟೀಕೆ ಮಾಡುವುದನ್ನು ಬಿಟ್ಟು ಬೇರೇನೂ ಗೊತ್ತಿಲ್ಲ. ಪ್ರಧಾನ ಮಂತ್ರಿಗಳ ಟೀಕೆ ಮಾಡುವಷ್ಟು ದೊಡ್ಡವರೇನಲ್ಲ. ಆದ್ದರಿಂದ ಅವರ ಹೇಳಿಕೆಗೆ ಉತ್ತರಿಸದೆ ಇರುವುದು ಬಹಳ ಸೂಕ್ತ. ಸುಳ್ಳನ್ನು ಒಂದು ಬಾರಿ ಹೇಳಬಹುದೇ ಹೊರತು ಮತ್ತೆ ಮತ್ತೆ ಹೇಳುವುದಕ್ಕೆ ಆಗುವುದಿಲ್ಲ. 2014ಕ್ಕಿಂತ 2019ರಲ್ಲಿ ಮತ್ತೆ ಹೆಚ್ಚಿನ ಸ್ಥಾನಗಳಿಂದ ಬಿಜೆಪಿ ಅಧಿಕಾರಕ್ಕೆ ಬಂದಿದೆ. ಪ್ರಧಾನಿಗಳು ಸುಳ್ಳು ಹೇಳುತ್ತಿದ್ದಾರೆ ಎಂದು ಜನರಿಗೆ ಅನಿಸಿದ್ದರೆ, ಅವರಿಗೆ ಮತ ನೀಡುತ್ತಿರಲಿಲ್ಲ. ನರೇಂದ್ರ ಮೋದಿಯವರು ಪ್ರಧಾನಿಯಾಗುವುದಕ್ಕೂ ಮುಂಚೆ ಆರ್ಥಿಕತೆಯಲ್ಲಿ ದೇಶ 7ನೇ ಸ್ಥಾನದಲ್ಲಿತ್ತು ಇವತ್ತು 5ನೇ ಸ್ಥಾನದಲ್ಲಿದ್ದೇವೆ. ಮುಂದಿನ ಎರಡು ವರ್ಷಗಳಲ್ಲಿ 3ನೇ ಸ್ಥಾನಕ್ಕೆ ಬರುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರಲ್ಲದೆ ದೇಶ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ಆರ್ಥಿಕ ಪ್ರಗತಿ ಸಾಧಿಸುತ್ತಿದೆ ಎಂದರು.

ಮೈಸೂರಲ್ಲಿ ಸಿರಿಧಾನ್ಯಗಳ ನಡಿಗೆ: ಮೇಯರ್ ಶಿವಕುಮಾರ್ ಚಾಲನೆ



ಮೈಸೂರು, ಜ.18(ಆರ್‌ಕೆಬಿ)– ವಿಶ್ವಸಂಸ್ಥೆಯು 2023 ಅನ್ನು ಅಂತಾರಾಷ್ಟ್ರೀಯ ಸಿರಿಧಾನ್ಯಗಳ ವರ್ಷ ಎಂದು ಘೋಷಿಸಿರುವ ಹಿನ್ನೆಲೆಯಲ್ಲಿ 2022–23ನೇ ಸಾಲಿನ ರಾಷ್ಟ್ರೀಯ ಆಹಾರ ಮತ್ತು ಪೌಷ್ಟಿಕ ಭದ್ರತಾ ಅಭಿಯಾನ ಕಾರ್ಯಕ್ರಮದಡಿ ಕೃಷಿ ಇಲಾಖೆಯು ಬುಧವಾರ ಮೈಸೂರಿನಲ್ಲಿ ಆಯೋಜಿಸಿದ್ದ ಮೈಸೂರು ಜಿಲ್ಲಾ ಮಟ್ಟದ ಸಿರಿಧಾನ್ಯ ನಡಿಗೆ ಕಾರ್ಯಕ್ರಮಕ್ಕೆ ಮೇಯರ್ ಶಿವಕುಮಾರ್ ಚಾಲನೆ ನೀಡಿದರು.

ಜನರಲ್ಲಿ ಸಿರಿಧಾನ್ಯಗಳ ಬಳಕೆಯನ್ನು ಹೆಚ್ಚಿಸುವ ಮೂಲಕ ಈ ಬೆಳೆಯನ್ನು ಉತ್ತೇಜಿಸಲು ಜನಜಾಗೃತಿಗಾಗಿ ಏರ್ಪಡಿಸಿದ್ದ ಸಿರಿಧಾನ್ಯಗಳ ನಡಿಗೆ ಅರಮನೆ ಕೋಟೆ ಶ್ರೀ ಆಂಜನೇಯ ಸ್ವಾಮಿ ದೇವಾಲಯದ ಆವರಣದಿಂದ ಹೊರಟು, ಡಿ.ದೇವರಾಜ ಅರಸು ರಸ್ತೆ ಮೂಲಕ ಜಿಲ್ಲಾಧಿಕಾರಿ ಕಚೇರಿ ತಲುಪಿತು. ಘೋಷಣಾ ಫಲಕಗಳನ್ನು ಹಿಡಿದಿದ್ದ ವಿದ್ಯಾರ್ಥಿಗಳು, ಎನ್‌ಸಿಸಿ ಕೆಡೆಟ್‌ಗಳು, ಕೃಷಿ ಇಲಾಖೆಯ ಅಧಿಕಾರಿಗಳು ನಡಿಗೆಯಲ್ಲಿ ಭಾಗವಹಿಸಿ, ಸಿರಿಧಾನ್ಯಗಳ ಬಳಕೆಯ ಮಹತ್ವ ಕುರಿತು ಘೋಷಣೆಗಳನ್ನು ಕೂಗಿದರು.

ಉಪ ಮೇಯರ್ ಡಾ.ರೂಪಾ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಬಿ.ಆರ್.ಪೂರ್ಣಿಮಾ, ಜಂಟಿ ಕೃಷಿ ನಿರ್ದೇಶಕ ಬಿ.ಎಸ್.ಚಂದ್ರಶೇಖರ್, ಕೃಷಿ ತಂತ್ರಜ್ಞರ ಸಂಸ್ಥೆಯ ಉಪಾಧ್ಯಕ್ಷ ಡಾ.ಎಂ.ಮಹಂತೇಶಪ್ಪ, ಮೈಸೂರು–ಚಾಮರಾಜನಗರ ಕೃಷಿ ಪರಿಕರ ಮಾರಾಟಗಾರರ ಸಂಘದ ಅಧ್ಯಕ್ಷ ನಂಜಪ್ಪ, ಕೃಷಿ ಇಲಾಖೆ ಉಪ ನಿರ್ದೇಶಕ ಯೋಗೇಶ್ ಇನ್ನಿತರರು ಉಪಸ್ಥಿತರಿದ್ದರು.

ಜಯಪುರ ಗ್ರಾ.ಪಂ. ಪ್ರಭಾರ ಅಧ್ಯಕ್ಷರಾಗಿ ಡಿ.ಬಸವಣ್ಣ ಆಯ್ಕೆ



ಜಯಪುರ, ಜ.18– ಜಯಪುರ ಗ್ರಾಮ ಪಂಚಾಯಿತಿಗೆ ಪ್ರಭಾರ ಅಧ್ಯಕ್ಷರಾಗಿ ಬರಡನಪುರ ಗ್ರಾಮದ ಡಿ.ಬಸವಣ್ಣ ಆಯ್ಕೆಯಾದರು. ಇವರು ಹಾಲಿ ಉಪಾಧ್ಯಕ್ಷರಾಗಿದ್ದರು. ಅಧ್ಯಕ್ಷರಾಗಿದ್ದ ಮಹದೇವಿ ಜವರನಾಯಕ ಇತ್ತೀಚೆಗೆ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದರು. ಪ್ರಭಾರ ಅಧ್ಯಕ್ಷ ಡಿ.ಬಸವಣ್ಣ ಅವರನ್ನು ಜಯಪುರ ಗ್ರಾಮ ಪಂಚಾಯಿತಿ ಸದಸ್ಯರು, ಪಿಡಿಓ ಬಸವಣ್ಣ, ಕಾರ್ಯದರ್ಶಿ ನಾಗವೇಣಿ, ಬರಡನಪುರ ಗ್ರಾಮಸ್ಥರು ಅಭಿನಂದಿಸಿದರು.

ಎರಡು ವರ್ಷದಲ್ಲಿ ಮೂರು ಬಾರಿ ಬದಲಾದ ಅಧ್ಯಕ್ಷ, ಉಪಾಧ್ಯಕ್ಷರು:– 2021ನೇ ವರ್ಷದಲ್ಲಿ ಗ್ರಾಮ ಪಂಚಾಯಿತಿ ಚುನಾವಣೆ ನಡೆದಾಗ ಅಧ್ಯಕ್ಷರಾಗಿ ಗುಮಚನಹಳ್ಳಿ ನವೀನಮ್ಮ, ಉಪಾಧ್ಯಕ್ಷರಾಗಿ ಎಸ್. ಸಂದೀಪ್ ಆಯ್ಕೆಯಾಗಿದ್ದರು. ಇವರು ರಾಜೀನಾಮೆ ನೀಡಿದ ತರುವಾಯ ಜಯಪುರದ ಮಹಾದೇವಿ ಜವರನಾಯಕ, ಉಪಾಧ್ಯಕ್ಷರಾಗಿ ಕೆಲ್ಲಹಳ್ಳಿ ಬೈರೇಶ್ ಆಯ್ಕೆಯಾಗಿ ಹತ್ತು ತಿಂಗಳ ನಂತರ ರಾಜೀನಾಮೆ ಸಲ್ಲಿಸಿದರು. ನಂತರ ಉಪಾಧ್ಯಕ್ಷರಾಗಿ ಬರಡನಪುರ ಗ್ರಾಮದ ಡಿ.ಬಸವಣ್ಣ ಆಯ್ಕೆಯಾಗಿದ್ದರು. ಇದೀಗ ಖಾಲಿಯಾದ ಅಧ್ಯಕ್ಷ ಸ್ಥಾನಕ್ಕೆ ಪ್ರಭಾರವಾಗಿ ಡಿ.ಬಸವಣ್ಣನವರು ಆಯ್ಕೆಯಾಗಿದ್ದು, ಎರಡು ವರ್ಷದ ಅವಧಿಯಲ್ಲಿ ಜಯಪುರ ಗ್ರಾಮ ಪಂಚಾಯಿತಿಯು ಮೂರು ಅಧ್ಯಕ್ಷ, ಉಪಾಧ್ಯಕ್ಷರನ್ನು ಕಂಡಿದೆ.

ಪತ್ನಿಗೆ ಕಿರುಕುಳ: ಪತಿಗೆ 2 ವರ್ಷ ಜೈಲು ಶಿಕ್ಷೆ

ಮೈಸೂರು, ಜ.18– ಮಹಿಳೆ ಮೇಲಿನ ಕೌಟುಂಬಿಕ ಕಿರುಕುಳ ಪ್ರಕರಣದ ಆರೋಪಿಗೆ ಎರಡು ವರ್ಷಗಳ ಕಾರಾಗೃಹ ಸಜೆ ಹಾಗೂ ಹತ್ತು ಸಾವಿರ ರೂ. ದಂಡ ವಿಧಿಸಲಾಗಿದೆ.

ಮೈಸೂರಿನ ರಾಮಕೃಷ್ಣನಗರದ ನಿವಾಸಿ ಕುಮಾರ್ ನಿತ್ಯ ಕುಡಿದು ಬಂದು ಪತ್ನಿ ಮೇಲೆ ಹಲ್ಲೆ ಮಾಡಿ ಕೊಲೆ ಬೆದರಿಕೆ ಹಾಕಿದ ಸಂಬಂಧ 30.8.2009ರಂದು ಆತನ ಪತ್ನಿ ನಗರದ ಮಹಿಳಾ ಠಾಣೆಗೆ ದೂರು ನೀಡಿದ್ದರು. ಅಂದಿನ ಪಿಎಸ್‌ಐ ದೇವಮ್ಮ ಪ್ರಕರಣವನ್ನು ದಾಖಲಿಸಿಕೊಂಡು ಅವಶ್ಯ ದಾಖಲೆ ಜೊತೆಗೆ ಸಾಕ್ಷಿದಾರರ ಹೇಳಿಕೆ ಪಡೆದುಕೊಂಡು ಆರೋಪಿ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು. ಈ ಪ್ರಕರಣವನ್ನು ಸರ್ಕಾರಿ ಸಹಾಯಕ ಅಭಿಯೋಜಕರಾದ ಜಿ.ಜಿ. ಸಂಧ್ಯಾ ವಾದ ಮಂಡಿಸಿದ್ದರು. ಜ.16ರಂದು 5ನೇ ಎ.ಎಸ್.ಸಿ.ಜೆ. ನ್ಯಾಯಾಲಯದ ನ್ಯಾಯಾಧೀಶರಾದ ಎ.ಸಿ. ದಯಾನಂದ ಮೂರ್ತಿ ಅವರು ಆರೋಪಿ ಕುಮಾರ್‌ಗೆ ಎರಡು ವರ್ಷಗಳ ಕಾರಾಗೃಹ ಶಿಕ್ಷೆ ಹಾಗೂ ಹತ್ತು ಸಾವಿರ ರೂ. ದಂಡ ವಿಧಿಸಿದ್ದು, ದಂಡವನ್ನು ಕಟ್ಟದೇ ಇದ್ದಲ್ಲಿ ಮತ್ತೆ 6 ತಿಂಗಳ ಸಾದಾ ಶಿಕ್ಷೆ ಹಾಗೂ ಎರಡೂವರೆ ಸಾವಿರ ರೂ. ದಂಡ ವಿಧಿಸಿ ಆದೇಶಿಸಿದ್ದಾರೆ.

ಸೈಬರ್ ಅಪರಾಧಗಳ ಕುರಿತು ಪೊಲೀಸರೊಂದಿಗೆ ವಿದ್ಯಾರ್ಥಿಗಳ ಸಂವಾದ

ಉಚಿತ ಉಡುಗೊರೆ ಜಾಹೀರಾತು ಸಂದೇಶ, ಕರೆಗಳ ಮೂಲಕ ಬ್ಯಾಂಕ್ ಖಾತೆಗೆ ಕನ್ನ ಹಾಕುವ ವಂಚಕರ ಬಗ್ಗೆ ಎಚ್ಚರವಿರಲಿ...!

ಸೈಬರ್ ಅಪರಾಧಗಳ ತಡೆಗೆ ಪೊಲೀಸರೊಂದಿಗೆ ಕೈಜೋಡಿಸಿ; ಪೊಲೀಸ್ ಆಯುಕ್ತ ಬಿ.ರಮೇಶ್ ಮನವಿ

- ನಕಲಿ ಮ್ಯಾಟ್ರಿಮೋನಿಯಲ್ (ವಧು–ವರಾನ್ವೇಷಣೆ) ವೆಬ್‌ಸೈಟ್
- ಆನ್‌ಲೈನ್‌ನಲ್ಲಿ ಕೆವೈಸಿ ಫಾರ್ಮ್ ನವೀಕರಿಸುವ ವಿನಂತಿ
- ಎಟಿಎಂ ಕಾರ್ಡ್ ವಿವರ, ಒಟಿಪಿ ಸಂಖ್ಯೆ ಹಂಚಿಕೊಳ್ಳಬೇಡಿ
- ಆನ್‌ಲೈನ್ ಬಿಲ್ ಪಾವತಿ ಸಲಹೆಗಳ ಪರಿಶೀಲಿಸಿ ನಿರ್ಧರಿಸಿ





ಮೈಸೂರಿನ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ವಿದ್ಯಾರ್ಥಿಗಳೊಂದಿಗೆ ಪೊಲೀಸ್ ಸಂವಾದ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಳಿಕ ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಚಿತ್ರದಲ್ಲಿ ಭಾಗವಹಿಸಿರುವ ವಿದ್ಯಾರ್ಥಿಗಳು ಹಾಗೂ ಶಿಕ್ಷಕರನ್ನು ಕಾಣಬಹುದು.

ಮೈಸೂರು, ಜ.18(ಆರ್‌ಕೆಬಿ)– ಸೈಬರ್ ಅಪರಾಧಗಳ ಕುರಿತು ಜಾಗೃತಿ ಮೂಡಿಸಲು ಮತ್ತು ಅದನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಬುಧವಾರ ಮೈಸೂರಿನ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಪೊಲೀಸರು ಮತ್ತು ವಿದ್ಯಾರ್ಥಿಗಳ ಸಂವಾದ ನಡೆಯಿತು.

ಮೈಸೂರು ವಿಶ್ವವಿದ್ಯಾನಿಲಯದ ಸಂಶೋಧನಾ ವಿದ್ಯಾರ್ಥಿಗಳ ಸಂಘದ ಸಹಯೋಗದಲ್ಲಿ ಸೈಬರ್ ಎಕನಾಮಿಕ್ ಮತ್ತು ನಾರ್ಕೋಟಿಕ್ಸ್ (ಸಿಇಎನ್) ಅಪರಾಧ ಪೊಲೀಸ್ ಠಾಣೆ ಸಂವಾದವನ್ನು ಆಯೋಜಿಸಿತ್ತು. ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ಸೈಬರ್ ಅಪರಾಧಗಳ ಕುರಿತ ಜಾಗೃತಿ ಗೀತೆ, ಕಿರುಚಿತ್ರ ಮತ್ತು ಸಾಕ್ಷ್ಯಚಿತ್ರವನ್ನು ಬಿಡುಗಡೆ ಮಾಡಿದರು.

ವಿದುಷಿ ರೇಖಾ ವೆಂಕಟೇಶ್ ರಚಿಸಿದ ಜಾಗೃತಿ ಗೀತೆಯಲ್ಲಿ ಯಾರಿಗೂ ಸುಲಭವಾಗಿ ಅರಿವಿಗೆ ಬಾರದೆಯೇ ನಡೆಯುವ ಸೈಬರ್ ಅಪರಾಧಗಳು, ಅಪರಿಚಿತರು ಉಡುಗೊರೆ ಮತ್ತು ಆಮಿಷವೊಡ್ಡಿ ಮಾಡುವ ವಂಚನೆ, ತ್ವರಿತ ಸಾಲ ನೀಡುವ ನೆಪದಲ್ಲಿ ಮೋಸ, ಮೋಸದ ಸಂದೇಶಗಳ ಮೂಲಕ ವಂಚಿಸುವುದು, ಒನ್ ಟೈಮ್ ಪಾಸ್‌ವರ್ಡ್ (ಒಟಿಪಿ) ಕೇಳುವ ಅಪರಿಚಿತರ ಬಗ್ಗೆ ಎಚ್ಚರಿಕೆ ವಹಿಸುವಂತೆ ಜಾಗೃತಿ ಗೀತೆ ಸಭಿಕರ ಗಮನ ಸೆಳೆಯಿತು.

ಇದೇ ಸಂದರ್ಭದಲ್ಲಿ ಪ್ರದರ್ಶಿಸಲಾದ ಸಾಕ್ಷ್ಯಚಿತ್ರದಲ್ಲಿ, ಜನರು, ವಿಶೇಷವಾಗಿ ಯುವಕರು ಇಂಟರ್ನೆಟ್ ಬಳಸುವಾಗ ನಕಲಿ ಮ್ಯಾಟ್ರಿಮೋನಿಯಲ್ (ವಧು–ವರಾನ್ವೇಷಣೆ) ವೆಬ್‌ಸೈಟ್‌ಗಳ ಮೂಲಕ ಮೋಸ ಹೋಗುವುದು, ಆನ್‌ಲೈನ್‌ನಲ್ಲಿ ನಿಮ್ಮ ಕೆವೈಸಿ ಫಾರ್ಮ್ ನವೀಕರಿಸುವ ವಿನಂತಿಗಳ ಮೊಬೈಲ್ ಹಾಗೂ ಕರೆಗಳ ಮೂಲಕ ಗ್ರಾಹಕರಿಂದ ಮಾಹಿತಿ ಪಡೆದು ಅವರ ಬ್ಯಾಂಕ್ ಖಾತೆಗೆ ಕನ್ನ ಹಾಕುವುದು ಇನ್ನಿತರೆ ವಂಚನೆ ಜಾಹಿರಾತುಗಳ ಬಗ್ಗೆ ಎಚ್ಚರ ವಹಿಸುವಂತೆ ಮಾಹಿತಿ ನೀಡಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಜನರು ಫೋನ್ ಕರೆಗಳಿಗೆ ಉತ್ತರಿಸುವಾಗ ಬಹಳ ಜಾಗ್ರತೆ ವಹಿಸಬೇಕು. ಎಟಿಎಂ ಕಾರ್ಡ್ ವಿವರ ಹಾಗೂ ಒಟಿಪಿಗಳನ್ನು ಕೇಳಿ ನಕಲಿ ಕರೆಗಳು ಬಂದಾಗ ಅಂಥ ಕರೆಗಳಿಗೆ ಉತ್ತರ ನೀಡದೆ, ತಿರಸ್ಕರಿಸಬೇಕು. ಯಾವುದೇ ಕಾರಣಕ್ಕೂ ಇಂತಹ ಕರೆಗಳಿಗೆ ನಿಮ್ಮ ಮಾಹಿತಿ ಬಹಿರಂಗಪಡಿಸಬಾರದು ಎಂದು ಕರೆ ನೀಡಿದರು.

ಇಂಟರ್ನೆಟ್ ನೆಟ್‌ವರ್ಕ್‌ಗಳು ಮತ್ತು ಹಣಕಾಸಿನ ವಿವರಗಳನ್ನು ಬಲವಾದ ಪಾಸ್‌ವರ್ಡ್‌ಗಳೊಂದಿಗೆ ಸುರಕ್ಷಿತಗೊಳಿಸಿಕೊಳ್ಳಬೇಕು. ನಿಮ್ಮ ಕಂಪ್ಯೂಟರ್ ಮತ್ತು ಮೊಬೈಲ್ ಸಾಫ್ಟ್‌ವೇರ್‌ಗಳು ನವೀಕೃತವಾಗಿದೆ ಎಂಬುದನ್ನು ಆಗಾಗ್ಗೆ ಖಚಿತಪಡಿಸಿಕೊಳ್ಳಬೇಕು. ಆಗಾಗ್ಗೆ ನಿಮ್ಮ ಪಾಸ್‌ವರ್ಡ್‌ಗಳನ್ನು ಬದಲಿಸಿಕೊಳ್ಳಬೇಕು. ಪಾಪ್–ಅಪ್‌ಗಳನ್ನು ನಿರ್ಲಕ್ಷಿಸಬೇಕು. ವೈಯಕ್ತಿಕ ಮತ್ತು ಖಾಸಗಿ ಡೇಟಾವನ್ನು ನಿಯಂತ್ರಿಸಬೇಕು. ಯಾರೊಂದಿಗೂ ಒಟಿಪಿ ಸಂಖ್ಯೆಯನ್ನು ಹಂಚಿಕೊಳ್ಳಬಾರದು. ಅನುಮಾನಾಸ್ಪದ ಕರೆಗಳು, ಮೊಬೈಲ್ ಸಂದೇಶಗಳಿಗೆ ಪ್ರತಿಕ್ರಿಯಿಸದಿರುವುದೇ ಒಳ್ಳೆಯದು. ಸೈಬರ್ ವಂಚನೆಗಳಿಂದ ನಮ್ಮನ್ನು ನಾವು ಸುರಕ್ಷಿತವಾಗಿರಿಸಿಕೊಳ್ಳಲು ಈ ಎಲ್ಲಾ ಎಚ್ಚರಿಕೆಗಳನ್ನು ವಹಿಸಬೇಕು ಎಂದು ತಿಳುವಳಿಕೆ ನೀಡಿದರು.

ಸಂವಾದ ಕಾರ್ಯಕ್ರಮದಲ್ಲಿ ದೇವರಾಜ ಉಪವಿಭಾಗದ ಎಸಿಪಿ ಎಂ.ಎನ್.ಶಶಿಧರ್, ನಗರ ಅಪರಾಧ ವಿಭಾಗದ (ಸಿಸಿಬಿ) ಎಸಿಪಿ ಸಿ.ಕೆ.ಅಶ್ವತ್ಥನಾರಾಯಣ, ಪ್ರೊ.ಆನಂದ್ ಇನ್ನಿತರರು ಉಪಸ್ಥಿತರಿದ್ದರು.

ನಂಜನಗೂಡು ತಾಲೂಕಲ್ಲಿ ಕೈಗಾರಿಕಾ ಪ್ರದೇಶ ಅಭಿವೃದ್ಧಿಗೆ ಜಮೀನು ಸ್ವಾಧೀನ

ರೈತರಿಗೆ ನ್ಯಾಯಯುತ ಬೆಲೆ ಕೊಡಿಸಲು ಪ್ರಾಮಾಣಿಕ ಪ್ರಯತ್ನ

- ಪ್ರತಿ ಎಕರೆಗೆ 40 ಲಕ್ಷ ರೂ. ನಿಗದಿ ಪಡಿಸಲು ಶಾಸಕರ ಸೂಚನೆ
- ಪ್ರತಿ ಎಕರೆಗೆ 1.5 ಕೋಟಿ ರೂ. ನಿಗದಿ ಪಡಿಸಲು ರೈತರ ಆಗ್ರಹ



ನಂಜನಗೂಡು, ಜ.18– ತಾಲೂಕಿನ ಮುದ್ದಹಳ್ಳಿಯಲ್ಲಿ ಕೈಗಾರಿಕಾ ಪ್ರದೇಶ ಅಭಿವೃದ್ಧಿಪಡಿಸಲು ಸ್ವಾಧೀನಪಡಿಸಿಕೊಳ್ಳಲಿರುವ ಜಮೀನುಗಳಿಗೆ ನ್ಯಾಯಯುತ ಬೆಲೆ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಶಾಸಕ ಬಿ.ಹರ್ಷವರ್ಧನ್ ಭರವಸೆ ನೀಡಿದ್ದಾರೆ.

ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಬುಧವಾರ ಕೆಐಎಡಿಬಿಯಿಂದ ಮುದ್ದಹಳ್ಳಿ ಕೈಗಾರಿಕಾ ಪ್ರದೇಶ ಸ್ಥಾಪನೆಗೆ ಸಂಬಂಧಿಸಿದಂತೆ ಭೂಸ್ವಾಧೀನಕ್ಕೆ ಒಳಪಡುವ ಜಮೀನುಗಳಿಗೆ ಬೆಲೆ ನಿಗದಿ ಪಡಿಸಲು ಕರೆಯಲಾಗಿದ್ದ ರೈತರ ಸಭೆಯಲ್ಲಿ ಅವರು ಮಾತನಾಡುತ್ತಿದ್ದರು.

ತಾಲೂಕಿನ ಮುದ್ದಹಳ್ಳಿ, ಎಲಚಗೆರೆ ಹಾಗೂ ಸಿಂಧುವಳ್ಳಿಪುರ ಗ್ರಾಮಕ್ಕೆ ಸೇರಿದ 448 ಎಕರೆ ಭೂಪ್ರದೇಶದಲ್ಲಿ ಕೈಗಾರಿಕಾ ಪ್ರದೇಶ ಸ್ಥಾಪನೆಗೆ ಅಧಿಸೂಚನೆ ಹೊರಡಿಸಲಾಗಿದ್ದು, ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಉದ್ದೇಶಿತ ಕೈಗಾರಿಕಾ ಪ್ರದೇಶದಲ್ಲಿ ಭವಿಷ್ಯದಲ್ಲಿ ಕೈಗಾರಿಕೆಗಳು ಸ್ಥಾಪನೆ ಆದಲ್ಲಿ ಸ್ಥಳೀಯವಾಗಿ ಹೆಚ್ಚಿನ ಉದ್ಯೋಗವಕಾಶಗಳು ಲಭ್ಯವಾಗಲಿವೆ. ವಿಶೇಷವಾಗಿ ಸೆಮಿ ಕಂಡಕ್ಟರ್ ಉದ್ಯಮಗಳು ಸ್ಥಾಪನೆ ಆಗುವ ಅವಕಾಶವಿದ್ದು ಇದರಿಂದ ಸ್ಥಳೀಯ ನಿರುದ್ಯೋಗ ಸಮಸ್ಯೆ ನಿವಾರಣೆಯಾಗಲಿದೆ ಎಂದು ಅವರು ಹೇಳಿದರು.

ಈ ಹಿಂದೆ ಕಂದಾಯ ಸಚಿವರಾಗಿದ್ದ ವಿ. ಶ್ರೀನಿವಾಸಪ್ರಸಾದ್ ಕೈಗಾರಿಕೆಗಳಿಗೆ ಭೂಪ್ರದೇಶವನ್ನು ವಶಪಡಿಸಿಕೊಳ್ಳುವ ವೇಳೆ ದರ ನಿಗದಿಗೆ ಸಂಬಂಧಿಸಿದಂತೆ ರೈತರ ಬೇಡಿಕೆಗೆ ಓಗೊಟ್ಟು ನಿಗದಿತ ಬೆಲೆಗಿಂತ ನಾಲ್ಕು ಪಟ್ಟು ಹೆಚ್ಚಿನ ದರದಲ್ಲಿ ಖರೀದಿಸುವ ನಿಯಮಾವಳಿ ರೂಪಿಸಿದರು. ಇದರಿಂದ ಭೂಮಿ ಕಳೆದುಕೊಳ್ಳುವ ರೈತರಿಗೆ ನ್ಯಾಯಯುತ ಬೆಲೆ ದೊರಕುವುದರ ಜೊತೆಗೆ ಕುಟುಂಬದ ಒಬ್ಬ ಸದಸ್ಯರಿಗೆ ಖಾಯಂ ಉದ್ಯೋಗ ದೊರಕಲಿದೆ ಎಂದು ತಿಳಿಸಿದರು.

ಇನ್ನು ರೈತರ ಒಪ್ಪಿಗೆ ಪಡೆದುಕೊಂಡೇ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಲಿದ್ದು ಯಾವುದೇ ಮಧ್ಯವರ್ತಿಗಳು ಹಾಗೂ ಬಂಡವಾಳಶಾಹಿಗಳು ರೈತರನ್ನು ಶೋಷಿಸದಂತೆ ನೋಡಿಕೊಳ್ಳಲಾಗುವುದು. ಜತೆಗೆ ಕೆಐಎಡಿಬಿ ಅಧಿಕಾರಿಗಳು ವಿವಿಧ ರೀತಿಯ ದರವನ್ನು ನಿಗದಿಪಡಿಸಿದ್ದಾರೆ. ಆದರೆ, ಎಲ್ಲಾ ರೈತರಿಗೂ ಒಂದೇ ದರ ಲಭ್ಯವಾಗಬೇಕು ಎಂಬ ಆಶಯದೊಂದಿಗೆ ಪ್ರತಿ ಎಕರೆಗೆ ಕನಿಷ್ಠ 40 ಲಕ್ಷ ರೂ. ನಿಗದಿಪಡಿಸುವಂತೆ ಸೂಚಿಸಲಾಗಿದೆ. ಇದರೊಂದಿಗೆ ಇಂದಿನ ಸಭೆಯಲ್ಲಿ ರೈತರು ಪ್ರಸ್ತಾಪಿಸಿರುವ ದರವನ್ನು ಕೊಡಿಸಿಕೊಡಲು ಸರ್ಕಾರದೊಂದಿಗೆ ಮಾತುಕತೆ ನಡೆಸಲಾಗುತ್ತದೆ. ಜತೆಗೆ ಇಂದಿನ ಸಭೆಯಲ್ಲಿ ರೈತರು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಕ್ರೋಢೀಕರಿಸಿ ಮುಂಬರುವ ದಿನಗಳಲ್ಲಿ ಇನ್ನೊಂದು ಸಭೆ ನಡೆಸಿ ಸ್ವಾಧೀನಪಡಿಸಿಕೊಳ್ಳಲಾಗುವ ಭೂಮಿಗೆ ನ್ಯಾಯಯುತ ದರ ನಿಗದಿಪಡಿಸಲಾಗುವುದು ಎಂದು ಹೇಳಿದರು.

ಭೂಸ್ವಾಧೀನ ವಿಶೇಷ ಜಿಲ್ಲಾಧಿಕಾರಿ ದಯಾನಂದ ಭಂಡಾರಿ ಮಾತನಾಡಿ, ಸರ್ಕಾರ ನಿಗದಿಪಡಿಸಿರುವ ಮಾರ್ಗಸೂಚಿಗಳ ಅನ್ವಯ ಜಮೀನುಗಳಿಗೆ ದರ ನಿಗದಿಪಡಿಸಲಾಗುವುದು ಎಂದು ತಿಳಿಸಿದರು.

1.5 ಕೋಟಿ ಕೊಡಿಸಿ: ಸಭೆಯಲ್ಲಿ ಹಾಜರಿದ್ದ ರೈತರು ಕೆಐಎಡಿಬಿ ಭೂಸ್ವಾಧೀನಕ್ಕೆ ಒಳಪಡಿಸಲು ಮುಂದಾಗಿರುವ ಜಮೀನು ಕೃಷಿ ಯೋಗ್ಯ ಭೂಮಿಯಾಗಿದ್ದು ಈ ಭೂಮಿಯನ್ನೇ ನಂಬಿ ನೂರಾರು ಕುಟುಂಬಗಳು ಜೀವನ ನಿರ್ವಹಣೆ ಮಾಡುತ್ತಿವೆ. ಇದೀಗ ಕೈಗಾರಿಕಾ ಪ್ರದೇಶ ಸ್ಥಾಪನೆ ಹೆಸರಿನಲ್ಲಿ ರೈತರಿಂದ ಭೂಮಿಯನ್ನು ಕಸಿಯುತ್ತಿರುವುದು ಆತಂಕ ತಂದಿದೆ. ಹೀಗಾಗಿ ಶಾಸಕರು ಮಧ್ಯಪ್ರವೇಶಿಸಿ ರೈತರಿಂದ ಸ್ವಾಧೀನಕ್ಕೆ ಒಳಪಡುವ ಪ್ರತಿ ಎಕರೆ ಭೂಮಿಗೆ 1.5 ಕೋಟಿ ದರವನ್ನು ನಿಗದಿ ಪಡಿಸಬೇಕು ಎಂದು ಆಗ್ರಹಿಸಿದರು.

ರೈತ ಸಂಘಟನೆಗಳಿಂದ ವಿರೋಧ, ಪ್ರತಿಭಟನೆ



ಇನ್ನು ಮುದ್ದಹಳ್ಳಿಯಲ್ಲಿ ರೈತರ ವಿರೋಧದ ನಡುವೆಯೂ ಕೈಗಾರಿಕಾ ಪ್ರದೇಶ ಸ್ಥಾಪನೆಗೆ ಮುಂದಾಗಿರುವುದು ಸರಿಯಲ್ಲ. ಅಭಿವೃದ್ಧಿಯ ನೆಪದಲ್ಲಿ ರೈತರನ್ನು ಒಕ್ಕಲೆಬ್ಬಿಸಲು ಕೆಐಎಡಿಬಿ ಮುಂದಾಗಿದೆ ಎಂದು ಆರೋಪಿಸಿ ಅಂಬೇಡ್ಕರ್ ಭವನದ ಮುಂಭಾಗ ರೈತ ಸಂಘಟನೆಗಳು ಹಾಗೂ ವಿವಿಧ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಈಗಾಗಲೇ ಕಡಕೊಳ, ತಾಂಡ್ಯ, ತಾಂಡವಪುರ, ಅಡಕನಹಳ್ಳಿ, ಇಮ್ಮಾವು ಕೈಗಾರಿಕಾ ಪ್ರದೇಶದಲ್ಲಿ ನೂರಾರು ಎಕರೆ ಕೈಗಾರಿಕಾ ಪ್ರದೇಶದಲ್ಲಿ ಬೆರಳೆಣಿಕೆ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿದ್ದು ಉಳಿದಂತೆ ಕೈಗಾರಿಕಾ ಪ್ರದೇಶವೇ ಪಾಳುಬಿದ್ದಿದೆ. ಹೀಗಾಗಿ ಹೊಸದೊಂದು ಕೈಗಾರಿಕಾ ಪ್ರದೇಶ ಅಭಿವೃದ್ಧಿಯಿಂದ ಅಧಿಕಾರಿಗಳಿಗೆ ಲಾಭವಿದೆಯೇ ಹೊರತು ರೈತರಿಗೆ ಹಾಗೂ ಸ್ಥಳೀಯರಿಗೆ ಯಾವುದೇ ಅನುಕೂಲವಿಲ್ಲ. ಹೀಗಾಗಿ ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡುವಂತೆ ಒತ್ತಾಯಿಸಿದರು.

ಈ ಸಂದರ್ಭ ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತನಾಡಿದ ಶಾಸಕ ಬಿ.ಹರ್ಷವರ್ಧನ್, ರೈತರ ಒಪ್ಪಿಗೆ ಪಡೆದುಕೊಂಡೇ ಭೂ ಸ್ವಾಧೀನ ಪ್ರಕ್ರಿಯೆ ಮುಂದುವರೆಸುವಂತೆ ಅಧಿಕಾರಿಗಳಿಗೆ ಸೂಚಿಸುವುದಾಗಿ ತಿಳಿಸಿದರು.

ಪ್ರತಿಭಟನೆಯಲ್ಲಿ ರೈತಸಂಘದ ಜಿಲ್ಲಾ ಕಾರ್ಯದರ್ಶಿ ಹೊಸಕೋಟೆ ಬಸವರಾಜು, ಕರ್ನಾಟಕ ರೈತಸಂಘದ ರಾಜ್ಯ ಉಪಾಧ್ಯಕ್ಷ ಕಂದೇಗಾಲ ಶ್ರೀನಿವಾಸ್, ಕಾರ್ಯ ಬಸವಣ್ಣ, ಬೊಕ್ಕಹಳ್ಳಿ ನಂಜುಂಡಸ್ವಾಮಿ, ಉಗ್ರನರಸಿಂಹೇಗೌಡ, ಬಸವಟ್ಟಿಗೆ ನಾಗೇಂದ್ರ, ಶಿರಮಳ್ಳಿ ಸಿದ್ದಪ್ಪ, ಪ್ರಕಾಶ್ ಸೇರಿದಂತೆ ಇತರರಿದ್ದರು.

ಕಾಡಂಚಿನ ರೈತರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡು ಹಿಡಿಯಿರಿ

ರೈತ ಕಲ್ಯಾಣದ ರಾಜ್ಯಾಧ್ಯಕ್ಷ ಆಗ್ರಹ

ಸರಗೂರು, ಜ.18– ಸರಗೂರು ಕಾಡಂಚಿನ ರೈತರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡು ಹಿಡಿಯಬೇಕು ಎಂದು ರೈತ ಕಲ್ಯಾಣದ ರಾಜ್ಯಾಧ್ಯಕ್ಷ ಭೂಮಿ ಪುತ್ರ ಚಂದನ್ ಗೌಡ ಆಗ್ರಹಿಸಿದರು.

ತಾಲೂಕಿನ ಚಿಕ್ಕದೇವಮ್ಮನವರ ಬೆಟ್ಟದ ಮೀಸಲು ಅರಣ್ಯ ಭಾಗದಲ್ಲಿರುವ ಗ್ರಾಮಗಳಲ್ಲಿ ಆನೆ ದಾಳಿಯಿಂದ ಬೆಳೆ



ನಾಶವಾಗುತ್ತಿದ್ದು, ರೈತರ ಬದುಕು ದುಸ್ತರವಾಗಿದೆ. ಈ ರೀತಿ ಜೀವನ ಸಾಗಿಸುತ್ತಿರುವ ಸಮಸ್ಯೆಗಳನ್ನು ಕಂಡ ರೈತ ಕಲ್ಯಾಣ ರಾಜ್ಯಾಧ್ಯಕ್ಷ ಚಂದನ್‌ಗೌಡ ಖುದ್ದಾಗಿ ಗ್ರಾಮಕ್ಕೆ ಭೇಟಿ ನೀಡಿ ಎಸಿಫ್ ಶಿವರಾಂ ಹಾಗೂ ಆರ್‌ಎಫ್‌ಓ ಮಧು ಅವರನ್ನು ತಾಲೂಕಿನ ಹುನಗನಹಳ್ಳಿ ಗ್ರಾಮಕ್ಕೆ ಕರೆಸಿಕೊಂಡು ಮಾತನಾಡಿ ಈ ಆಗ್ರಹ ಮಾಡಿದರು.

ಆನೆ ದಾಳಿಗೆ ತುತ್ತಾದ ಪ್ರದೇಶಗಳ ಸಮೀಕ್ಷೆ ಮಾಡಿ ಸ್ಥಳದಲ್ಲೇ ರೈತರ ಜೊತೆ ಸಮಾಲೋಚನೆ ನಡೆಸುವುದರ ಜೊತೆಗೆ ಸೂಕ್ತ ಪರಿಹಾರ ಒದಗಿಸಿಕೊಡಬೇಕು ಹಾಗೂ ಆನೆ ದಾಳಿ ನಿಯಂತ್ರಿಸಲು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಬೇಕು ಮತ್ತೆ ಇದು ಮರುಕಳಿಸದಂತೆ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು. ನಂತರ ಮಾತನಾಡಿದ ಅಧಿಕಾರಿಗಳು ಕಾಡು ಪ್ರಾಣಿಗಳ ದಾಳಿಗಳಿಗೆ ಪರಿಹಾರವನ್ನು ಒದಗಿಸಲು ಮುಂದಾಗುತ್ತೇವೆ. ಕಾಡುಪ್ರಾಣಿಗಳ ತಡೆಗೆ ಕ್ರಮ ಕೈಗೊಳ್ಳುತ್ತೇವೆ ಎಂದರು.

ಈ ಸಂದರ್ಭದಲ್ಲಿ ಎಚ್.ಡಿ. ಕೋಟೆ ತಾಲೂಕಿನ ಅಧ್ಯಕ್ಷರು, ತಾಲೂಕು ಘಟಕದ ಎಲ್ಲ ಪದಾಧಿಕಾರಿಗಳು, ಹುಣಸೂರು ತಾಲೂಕಿನ ಅಧ್ಯಕ್ಷರು, ರಾಜ್ಯ ಘಟಕದ ಪದಾಧಿಕಾರಿಗಳು, ಯಜಮಾನರು, ಗ್ರಾಮಸ್ಥರು, ರೈತ ಬಾಂಧವರು ಭಾಗವಹಿಸಿದ್ದರು.

ಕೆ.ಆರ್.ನಗರದಲ್ಲಿ ಸರಗಳ್ಳತನ

ಕೆ.ಆರ್.ನಗರ,ಜ.18– ಪಟ್ಟಣದಲ್ಲಿ ಇಂದು ಬೆಳಗ್ಗೆ ಸರಗಳ್ಳತನ ನಡೆದಿದ್ದು, ಸಾರ್ವಜನಿಕರಲ್ಲಿ ಆತಂಕ ಮೂಡಿಸಿದೆ.

ಪಟ್ಟಣದ ಬಜಾರ್ ರಸ್ತೆಯ ನಿವಾಸಿ ಮಣಿಯಮ್ಮ ಎಂಬವರ 20 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರವನ್ನು ಬೈಕ್‌ನಲ್ಲಿ ಬಂದ ಇಬ್ಬರು ಯುವಕರು ಕಿತ್ತುಕೊಂಡು ಪರಾರಿಯಾಗಿದ್ದಾರೆ.

ಸರಗಳಗಳ್ಳತನದ ಸುದ್ದಿ ತಿಳಿಯುತ್ತಿದ್ದಂತೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಅಕ್ಕಪಕ್ಕದ ರಸ್ತೆಗಳಲ್ಲಿರುವ ಸಿ.ಸಿ.ಟಿವಿ ಕ್ಯಾಮರಾವನ್ನು ಪರಿಶೀಲನೆ ನಡೆಸಿ ಸರಗಳ್ಳರ ಪತ್ತೆಗೆ ಮುಂದಾಗಿದ್ದಾರೆ. ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನಂದಿನಿ ಆಗಮಿಸಿ ಪತ್ತೆಗೆ ವಿಶೇಷ ತಂಡವನ್ನು ರಚಿಸಲಿದ್ದಾರೆ ಎಂದು ತಿಳಿದುಬಂದಿದೆ. ಪಟ್ಟಣ ಪ್ರದೇಶದಲ್ಲಿ ವ್ಯಾಪಕವಾಗಿ ಹರಡಿದ್ದ ಸರಗಳ್ಳತನ ತಾಲೂಕು ಮತ್ತು ಗ್ರಾಮಾಂತರ ಪ್ರದೇಶಗಳಿಗೂ ಈ ಹಾವಳಿ ಹರಡುತ್ತಿರುವುದು ಗ್ರಾಮೀಣ ಭಾಗದ ಜನರಲ್ಲಿ ಆತಂಕವನ್ನುಂಟು ಮಾಡಿದೆ.

ಗಾಂಜಾ ಹಾವಳಿ: ಪಟ್ಟಣದಲ್ಲಿ ಗಾಂಜಾ ಘಾಟು ಹೆಚ್ಚಾಗಿದ್ದು, ಅನೈತಿಕ ಚಟುವಟಿಕೆ ಹೆಚ್ಚಾಗಲು ಕಾರಣವಾಗುತ್ತಿದೆ ಎಂದು ಸಾರ್ವಜನಿಕ ವಲಯದಲ್ಲಿ ಕೇಳಿ ಬರುತ್ತಿದೆ. ಗಾಂಜಾ, ಮದ್ಯ ವ್ಯಸನಿಗಳಾದವರು ಪಟ್ಟಣದಲ್ಲಿ ಅಪರಾಧ ಹಾಗೂ ಕಳ್ಳತನ, ಹಗಲು ಕಳ್ಳತನ, ವಂಚನೆಯಂತಹ ಪ್ರಕರಣಗಳಲ್ಲಿ ಭಾಗಿಯಾಗುತ್ತಿದ್ದಾರೆ. ಸ್ಥಳೀಯ ಪೊಲೀಸರು ಕ್ರಮ ವಹಿಸಬೇಕಾಗಿದೆ. ತಿಂಗಳಿಗೊಮ್ಮೆ ವಾಹನ ಮತ್ತು ಬೈಕ್ ಸವಾರರ ವಿರುದ್ಧ ದಂಡ ವಿಧಿಸುವ ಪೊಲೀಸರು, ಅನೈತಿಕ ಚಟುವಟಿಕೆಗಳನ್ನು ತಡೆಗಟ್ಟಲು ಏಕೆ ಮೀನಾಮೇಷ ಎಣಿಸುತ್ತಿದ್ದಾರೆ ಎಂಬ ಆರೋಪ ಹೆಚ್ಚಾಗಿ ಕೇಳಿಬರುತ್ತಿದೆ.

ಎಂದೆಂದಿಗೂ ನಾನು ಪಿರಿಯಾಪಟ್ಟಣದ ಜನಸೇವಕ

ಹಿತೈಷಿಗಳು, ಸ್ನೇಹಿತರ ನಡುವೆ ಹುಟ್ಟುಹಬ್ಬ ಆಚರಿಸಿಕೊಂಡ ಪ್ರಶಾಂತ್‌ಗೌಡ

ಪಿರಿಯಾಪಟ್ಟಣ, ಜ.18– ಪಿರಿಯಾಪಟ್ಟಣ ತಾಲೂಕು ನನಗೆ ಎಲ್ಲವನ್ನು ಕೊಟ್ಟಿದೆ ನಾನು ಕೊನೆಯ ಉಸಿರು ಇರುವವರೆಗೂ ತಾಲೂಕಿನ ಜನಸೇವಕನಾಗಿ ಇರುತ್ತೇನೆ ಎಂದು ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯ ಹಾಗೂ ಕಲ್ಪವೃಕ್ಷ ಕ್ರೆಡಿಟ್ ಕೋ ಆಪರೇಟಿವ್ ಬ್ಯಾಂಕಿನ ಅಧ್ಯಕ್ಷ ಪಿ. ಪ್ರಶಾಂತ್ ಗೌಡ ಭಾವುಕರಾಗಿ ನುಡಿದರು.

ಪಿರಿಯಾಪಟ್ಟಣದ ಮಸಣಿಕಮ್ಮ ದೇವಾಲಯದ ಬಳಿ ಹಾಗೂ ಕಲ್ಪವೃಕ್ಷ ಕ್ರೆಡಿಟ್ ಕೋ ಆಪರೇಟಿವ್ ಬ್ಯಾಂಕಿನ ಆವರಣದಲ್ಲಿ ಅವರ ಹಿತೈಷಿಗಳು ಹಾಗೂ ಸ್ನೇಹಿತರಿಂದ 44ನೇ ಹುಟ್ಟುಹಬ್ಬದ ಅಂಗವಾಗಿ ಏರ್ಪಡಿಸಲಾಗಿದ್ದ ಸಮಾರಂಭದಲ್ಲಿ ಕೇಕ್ ಕತ್ತರಿಸಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡುತ್ತಿದ್ದರು.

ಪಿರಿಯಾಪಟ್ಟಣ ತಾಲೂಕಿನ ಹುಣಸವಾಡಿ ಗ್ರಾಮದಲ್ಲಿ ಜನಿಸಿದ ನನಗೆ ರಾಜಕೀಯವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಶೈಕ್ಷಣಿಕವಾಗಿ ತಾಲೂಕಿನ ಜನತೆ, ಹಿತೈಷಿಗಳು, ಸ್ನೇಹಿತರು ನನ್ನನ್ನು ಆತ್ಮೀಯವಾಗಿ ಗೌರವಿಸಿ ಗುರುತಿಸಿ ಬೆಳೆಸಿದ್ದಾರೆ. ಆದ್ದರಿಂದ ನಾನು ತಾಲೂಕಿನ ಜನಸೇವಕನಾಗಿ ಉಳಿದು ತಾಲೂಕಿನ ಋಣ ತೀರಿಸಲು ಪ್ರಾಮಾಣಿಕ ಪ್ರಯತ್ನ ಪಡುತ್ತೇನೆ ಎಂದರು.



ಈ ಸಂದರ್ಭದಲ್ಲಿ ಕಲ್ಪವೃಕ್ಷ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ ಉಪಾಧ್ಯಕ್ಷ ಕಿತ್ತೂರು ಕೃಷ್ಣೇಗೌಡ, ನಿರ್ದೇಶಕರುಗಳಾದ ಪ್ರಕಾಶ್.ಬಿ.ಎ, ದಿನೇಶ್.ಎಸ್.ಆರ್, ಎ.ಪಿ. ದಿನೇಶ್ ಕುಮಾರ್, ಸುರೇಶ್.ಕೆ.ಎಲ್., ನಟೇಶ್. ಕೆ.ಎನ್, ರಾಜೇಶ್. ಬಿ.ಪಿ, ಶ್ರುತಿ ಮಂಜುನಾಥ, ಕೆಂಪಣ್ಣ. ಕೆ. ಆರ್, ಮಹೇಶ್ವರಿ ಪುಟ್ಟಣ್ಣಯ್ಯ, ಕಾರ್ಯದರ್ಶಿ. ಮಂಜುನಾಥ ಆರ್., ಸಿಬ್ಬಂದಿಗಳಾದ ಚಿತ್ರ ಆರ್., ಆಶಾ. ಹೆಚ್.ಎಂ., ಕುಮಾರಿ, ಮಹದೇವ ಪಿ.ವಿ, ಮನು. ಹೆಚ್.ಆರ್, ಮಹೇಂದ್ರ ಪಿ.ಎಂ, ಪ್ರಿಯದರ್ಶಿನಿ ಹಾಗೂ ಹಿತೈಷಿಗಳಾದ ವಕೀಲ ಸುದೇಶ್, ಉಮೇಶ್ ಮೊಹನ, ಪ್ರಸನ್ನ, ಬಾಬು, ಹೆಚ್.ಕೆ. ಸುಧಾಕರ್, ಅಶೋಕ್, ಉಪೇಂದ್ರ, ಬಾಲು, ಮಹೇಶ್, ಸುದೀರ್, ಸಿ.ಕೆ.ದೀಪು ಸೇರಿದಂತೆ ನೂರಾರು ಸ್ನೇಹಿತರು ಬಂಧು ಮಿತ್ರರು ಆಗಮಿಸಿ ಶುಭ ಹಾರೈಸಿದರು.

ಆಶ್ರಯ ಮನೆ, ನಿವೇಶನ ಹಂಚಿಕೆಯಲ್ಲಿ ಭಾರೀ ಭ್ರಷ್ಟಾಚಾರ

ಪುರಸಭೆ ಇನ್‌ಚಾರ್ಜ್ ಮುಖ್ಯಾಧಿಕಾರಿ ವಿರುದ್ಧ ಕ್ರಮಕ್ಕೆ ಮಾಜಿ ಶಾಸಕ ಸಿ.ರಮೇಶ್ ಆಗ್ರಹ



ತಿ.ನರಸೀಪುರ.ಜ.18–ಪುರಸಭೆಯ ಇನ್ ಚಾರ್ಜ್ ಮುಖ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಬಸವರಾಜು ಆಶ್ರಯ ಮನೆ ಮತ್ತು ನಿವೇಶನ ಹಂಚಿಕೆಯಲ್ಲಿ ಕೋಟ್ಯಂತರ ರೂ.ಗಳ ಭ್ರಷ್ಟಾಚಾರ ಮಾಡಿದ್ದು ಸರ್ಕಾರ ಕೂಡಲೇ ಈತನ ಮೇಲೆ ತನಿಖೆ ನಡೆಸಿ ವಜಾಗೊಳಿಸಬೇಕೆಂದು ಮಾಜಿ ವಿಧಾನಪರಿಷತ್ ಸದಸ್ಯ ಸಿ.ರಮೇಶ್ ಒತ್ತಾಯಿಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಮೂಲತಃ ರೆವಿನ್ಯೂ ಇನ್ಸ್‌ಪೆಕ್ಟರ್ ಆಗಿರುವ ಈತ ಪುರಸಭೆಯ ಇನ್‌ಚಾರ್ಜ್ ಮುಖ್ಯಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಪಕ್ಷವೊಂದರ ಕಾರ್ಯಕರ್ತನಂತೆ ಕೆಲಸ ಮಾಡುತ್ತಿದ್ದಾರೆ. ಆಶ್ರಯ ಸಮಿತಿಯ ನಿಯಮಗಳನ್ನು ಗಾಳಿಗೆ ತೂರಿ ನಿವೇಶನ, ಮನೆಗಳನ್ನು ಲಂಚ ಪಡೆದು ಹಂಚಿಕೆ ಮಾಡುತ್ತಿದ್ದಾರೆ. ಪುರಸಭೆಯಲ್ಲಿ ಇವರ ಅಧಿಕಾರದ ದುರುಪಯೋಗ ಮಿತಿ ಮೀರಿದೆ ಎಂದು ಏಕವಚನದಲ್ಲೇ ಆರೋಪಿಸಿದರು.

ಆಶ್ರಯ ಸಮಿತಿ ನಿರ್ಣಯವಾಗದೇ ಯಾವುದೇ ಮನೆಗಳನ್ನು ಪುರಸಭೆ ಹಂಚಿಕೆ ಮಾಡುವಂತಿಲ್ಲ ಎಂಬ ನಿಯಮ ವಿದ್ದರೂ ಸಹ ಈತ ಫಲಾನುಭವಿಗಳಿಂದ ಮನೆ ಹಾಗೂ ನಿವೇಶನಕ್ಕೆ 70 ರಿಂದ 80 ಸಾವಿರ ರೂ.ಗಳ ಲಂಚ ಪಡೆದು ಅಧಿಕಾರ ದುರುಪಯೋಗ ಪಡಿಸಿಕೊಳ್ಳುತ್ತಿದ್ದು, ಸರ್ಕಾರ ತನಿಖೆ ನಡೆಸಿದರೆ ಕೋಟ್ಯಂತರ ರೂ.ಗಳ ದುರುಪಯೋಗ ಬಯಲಿಗೆ ಬರಲಿದೆ ಎಂದರು.

ಶಾಸಕ ಅಶ್ವಿನ್ ಸಹ ಭಾಗಿ: ಮುಖ್ಯಾಧಿಕಾರಿ ಬಸವರಾಜು ಅಕ್ರಮದಲ್ಲಿ ಶಾಸಕರು ಸಹ ಭಾಗಿಯಾಗಿದ್ದಾರೆ ಎಂದು ಆರೋಪಿಸಿದ ರಮೇಶ್ ಇಲ್ಲಿನ ಹರಿಜನ ಕಾಲೋನಿಗೆ ಕಳೆದ ಹತ್ತು ವರ್ಷಗಳಿಂದಲೂ ಲೈಬ್ರರಿ ನಿರ್ಮಿಸಿ, ಬಿದ್ದು ಹೋಗಿರುವ ಶಿಶುವಿಹಾರವನ್ನು ದುರಸ್ತಿ ಪಡಿಸುವಂತೆ ಕೇಳಲಾಗಿತ್ತು. ಶಾಸಕರು ಸಹ 30 ಲಕ್ಷ ರೂ.ಗಳ ಅನುದಾನದಲ್ಲಿ ಲೈಬ್ರರಿ ಕೆಲಸ ಮಾಡುವಂತೆ ಸಿಇಓಗೆ ಪತ್ರ ಬರೆದಿದ್ದರು. ಆದರೆ ಈಗ ಪುರಸಭೆ ಅಭಿವೃದ್ಧಿಗೆ ಬಿಡುಗಡೆಯಾಗಿರುವ 13.5 ಕೋಟಿ ರೂ.ಗಳನ್ನು ರಸ್ತೆ ಅಭಿವೃದ್ಧಿಗಾಗಿಯೇ ಬಳಸಿಕೊಳ್ಳುತ್ತಿದ್ದಾರೆ. ರಸ್ತೆ ಅಭಿವೃದ್ಧಿಗೆ ಹಣ ಹಾಕಿದರೆ ಕಮಿಷನ್ ಸಿಗುತ್ತದೆಂಬ ದುರಾಸೆಯಿಂದ ಶಾಸಕರು ಲೈಬ್ರರಿ ಕೆಲಸವನ್ನು ಸ್ಥಗಿತಗೊಳಿಸಿ ರಸ್ತೆ ಅಭಿವೃದ್ಧಿ ಮಾಡಲು ಮುಂದಾಗಿದ್ದಾರೆ ಎಂದು ಕಿಡಿಕಾರಿದರು.

ಈ ಅಧಿಕಾರಿಯ ಭ್ರಷ್ಟಾಚಾರದ ಪರಮಾವಧಿ ಮೇರೆ ಮೀರಿದ್ದು ಕೂಡಲೇ ಈತನನ್ನು ಬೇರೆಡೆಗೆ ವರ್ಗಾವಣೆ ಮಾಡಿ, ತನಿಖಾ ಸಮಿತಿ ರಚಿಸಿ ಶಿಸ್ತು ಬದ್ಧ ತನಿಖೆ ನಡೆಸಬೇಕು. ಇಲ್ಲದಿದ್ದಲ್ಲಿ ತಿ.ನರಸೀಪುರ ಪುರಸಭೆಯನ್ನೇ ಮಾರಾಟ ಮಾಡಿ ಬರಿದು ಮಾಡುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಅವರು ಆತಂಕ ವ್ಯಕ್ತಪಡಿಸಿದರು.

ಮುಖ್ಯ ಮಂತ್ರಿ ಮನೆ ಮುಂದೆ ಧರಣಿ, ಉಪವಾಸ ಸತ್ಯಾಗ್ರಹ: ಗೋಪಾಲಪುರ ಗ್ರಾಮದಲ್ಲಿರುವ ಪಾರ್ಕಿನಲ್ಲಿ ಹಾವುಗಳು ಹೆಚ್ಚಾಗಿದ್ದು,ಜನರು ಜೀವ ಭಯದಿಂದ ಓಡಾಡುವಂತಾಗಿದೆ. ಗ್ರಾಮದಲ್ಲಿ ಹತ್ತಾರು ಎಕರೆ ಜಮೀನು ಖಾಲಿ ಬಿದ್ದಿದೆ. ಜಮೀನು ಮಾಲೀಕರಿಗೆ ನೋಟೀಸ್ ನೀಡಿ ವ್ಯವಸಾಯ ಮಾಡಲು ಕ್ರಮ ಜರುಗಿಸಬೇಕಾದ ಮುಖ್ಯಾಧಿಕಾರಿ ಲಂಚ ಪಡೆದು ಅಕ್ರಮವಾಗಿ ಆಶ್ರಯ ನಿವೇಶನ ಹಂಚುವುದರಲ್ಲಿ ನಿರತರಾಗಿದ್ದಾರೆ. ಮೊನ್ನೆ ನಡೆದ ರಸ್ತೆ ಅಭಿವೃದ್ಧಿ ಕಾರ್ಯಕ್ರಮಕ್ಕೆ ಬಿಜೆಪಿ ಪಕ್ಷದ ಏಕೈಕ ರಾಜ್ಯ ನಾಯಕನಾಗಿರುವ ನನಗೆ ಆಹ್ವಾನ ಪತ್ರಿಕೆ ನೀಡಿಲ್ಲ. ಹಾಗಾಗಿ ಪುರಸಭೆಯಲ್ಲಿ ತನ್ನಿಷ್ಟಕ್ಕೆ ಬಂದಂತೆ ಕಾರ್ಯ ನಿರ್ವಹಿಸುತ್ತಿರುವ ಈತನನ್ನು ಕೂಡಲೇ ಎತ್ತಂಗಡಿ ಮಾಡಿ ಇಲಾಖೆ ತನಿಖೆ ನಡೆಸಿ ಕರ್ತವ್ಯದಿಂದ ವಜಾ ಗೊಳಿಸದಿದ್ದಲ್ಲಿ ಪಟ್ಟಣದ ಜನತೆ ಮುಖ್ಯ ಮಂತ್ರಿಗಳ ಮನೆ ಮುಂದೆ ಧರಣಿ ಉಪವಾಸ ಸತ್ಯಾಗ್ರಹ ನಡೆಸಲಿದ್ದಾರೆ ಎಂದು ಎಚ್ಚರಿಸಿದರು.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 5ರಲ್ಲಿ

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ತುನಿವು (ತ): ಬೆ.10.05ಕ್ಕೆ, ಮ.1ಕ್ಕೆ, ರಾ.7.15ಕ್ಕೆ, ರಾ.10.10ಕ್ಕೆ, ವಾರಿಸು (ತ): ಸಂ.4ಕ್ಕೆ
ಸ್ಕ್ರೀನ್ 2	ತುನಿವು (ತ): ಬೆ.8ಕ್ಕೆ, ಸಂ.4.05ಕ್ಕೆ, ವೇದ (ಕ): ಮ.1.05ಕ್ಕೆ, ವಾರಿಸು (ತ): ರಾ.7.10ಕ್ಕೆ, ರಾ.10.30ಕ್ಕೆ.
ಸ್ಕ್ರೀನ್ 3	ವಾರಿಸು (ತ): ಬೆ.8.30ಕ್ಕೆ, ಮ.1.05ಕ್ಕೆ, ವೇದ (ಕ): ಸಂ.4.20ಕ್ಕೆ, ರಾ.10.20ಕ್ಕೆ, ತುನಿವು (ತ): ರಾ.7.30ಕ್ಕೆ.
ಸ್ಕ್ರೀನ್ 4	ವಾರಿಸು (ತ): ಬೆ.7.30ಕ್ಕೆ, ಬೆ.11.15ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಮ.2.40ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಮಿಸ್ಟರ್ ಬ್ಯಾಚುಲರ್ (ಕ): ಬೆ.10.30ಕ್ಕೆ, ಸಂ.4.35ಕ್ಕೆ, ರಾ.10.20ಕ್ಕೆ, ವೇದ (ಕ): ಮ.1.25ಕ್ಕೆ, ಕಾಕ್ಟೇಲ್ (ಕ): ರಾ.7.35ಕ್ಕೆ.
ಸ್ಕ್ರೀನ್ 2	ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.10.40ಕ್ಕೆ, ಮ.2.30ಕ್ಕೆ, ಸಂ.6.20ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 3	ಸ್ಪೂಕಿ ಕಾಲೇಜ್ (ಕ): ಬೆ.10ಕ್ಕೆ, ಥಗ್ ಆಫ್ ರಾಮಘಡ (ಕ): ಮ.12.50ಕ್ಕೆ, ಮಿಸ್ ನಂದಿನಿ (ಕ): ಮ.3.25ಕ್ಕೆ, ಬೇಡಿಯಾ (ಹಿಂ): ಸಂ.6ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ರಾ.9.10ಕ್ಕೆ.
ಸ್ಕ್ರೀನ್ 4	ವೈಶಂಪಾಯನ ತೀರ (ಕ): ಬೆ.11.30ಕ್ಕೆ, ಸ್ಪೂಕಿ ಕಾಲೇಜ್ (ಕ): ಮ.1.55ಕ್ಕೆ, ರಾ.7.10ಕ್ಕೆ, ಲವ್‌ಸ್ಟೋರಿ 1998 (ಕ): ಸಂ.4.45ಕ್ಕೆ, ವೇದ (ಕ): ರಾ.10ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಓ (ಕ): ಬೆ.10.30ಕ್ಕೆ, ಯಶೋಧಾ (ತೆ): ಮ.1.15ಕ್ಕೆ, ರಾಣಾ (ಕ): ಸಂ.4ಕ್ಕೆ, ಲವ್ ಟುಡೆ (ತ): ಸಂ.6.30ಕ್ಕೆ, ಯೆಲ್ಲೋ ಗ್ಯಾಂಗ್ಸ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಹುಬ್ಬಳ್ಳಿ ಡಾಬಾ (ಕ): ಬೆ.10.15ಕ್ಕೆ, ಕಾಂತಾರ (ಕ): ಮ.12.45ಕ್ಕೆ, ಸಂ.6.35ಕ್ಕೆ, ದಿಲ್ ಪಸಂದ್ (ಕ): ಮ.3.40ಕ್ಕೆ, ಗಂಧದಗುಡಿ (ಕ): ರಾ.9.30ಕ್ಕೆ.
ಸ್ಕ್ರೀನ್ 3	ಕಾಂತಾರ (ಕ): ಬೆ.10.30ಕ್ಕೆ, ಮ.3.25ಕ್ಕೆ, ಗಂಧದ ಗುಡಿ (ಕ): ಮ.1.25ಕ್ಕೆ, ಬ್ಲಾಕ್ ಪ್ಯಾಂಥರ್ (3ಡಿ)(ಇಂ): ಸಂ.6.20ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ದಿಲ್ ಪಸಂದ್ (ಕ): ಬೆ.10.40ಕ್ಕೆ, ಬನಾರಸ್ (ಕ): ಮ.1.45ಕ್ಕೆ, ಮಿರಲ್ (ತ): ಸಂ.4.45ಕ್ಕೆ, ಗಂಧದ ಗುಡಿ (ಕ): ರಾ.7.15ಕ್ಕೆ, ಲವ್ ಟುಡೆ (ತ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ವೇದ (ಕ): ಬೆ.11.25ಕ್ಕೆ, ಮ.3.30ಕ್ಕೆ, ಸಂ.6.40ಕ್ಕೆ, ರಾ.9.30ಕ್ಕೆ, ಒನ್ಸ್ ಅಪಾನ್ ಟೈಂ ಇನ್ ಜಮಾಲಿಗುಡ್ಡ (ಕ): ಬೆ.10.30ಕ್ಕೆ, ಮ.12.50ಕ್ಕೆ, ಸಂ.6.50ಕ್ಕೆ, ರಾ.10.10ಕ್ಕೆ, ಕಾಂತಾರ (ಕ): ಮ.1.20ಕ್ಕೆ, ನಾನು ಅದು ಮತ್ತು ಸರೋಜ (ಕ): ರಾ.7.25ಕ್ಕೆ, ಪದವಿ ಪೂರ್ವ (ಕ): ಸಂ.4.30ಕ್ಕೆ, ಮೇಡ್ ಇನ್ ಬೆಂಗಳೂರು (ಕ): ಸಂ.6.25ಕ್ಕೆ, ಸರ್ಕಸ್ (ಹಿಂ): ಮ.12ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಬೆ.9.45ಕ್ಕೆ, ಬೆ.10.45ಕ್ಕೆ, ಮ.1.40ಕ್ಕೆ, ಮ.2.40ಕ್ಕೆ, ಸಂ.5.35ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (ಇಂ): ಮ.2.45ಕ್ಕೆ, ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವಾರಿಸು (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕಾಂತಾರ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕುಟ್ಟೆ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ತುನಿವು (ತ)	4 ಪ್ರದರ್ಶನಗಳು
ಗಾಯಿತ್ರಿ	
ತುನಿವು (ತ)	4 ಪ್ರದರ್ಶನಗಳು
ರಾಜ್‌ಕಮಲ್	
ತುನಿವು (ತ)	4 ಪ್ರದರ್ಶನಗಳು
ಸಂಗಂ	
ವಾಲ್ಟರ್ ವೀರಯ್ಯ (ತೆ)	4 ಪ್ರದರ್ಶನಗಳು
ವಾರಿಸು (ತ)	4 ಪ್ರದರ್ಶನಗಳು
ಲಿಡೋ	
ವೀರಸಿಂಹ ರೆಡ್ಡಿ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ವಾರಿಸು (ತ)	4 ಪ್ರದರ್ಶನಗಳು
ಪ್ರಭಾ	
ಲವ್ ಸ್ಟೋರಿ (ಕ) ಕಾಕ್ಟೇಲ್ (ಕ)	2 ಪ್ರದರ್ಶನಗಳು

ಮೈಸೂರು ಚಳಿಗಾಲದ ರೇಸುಗಳು

10ನೇ ದಿನ, ಗುರುವಾರ 19-1-2023

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ)

I. ಗೇರುಸೊಪ್ಪ ಪ್ಲೇಟ್–1400 ಮೀ. ರೇಟೆಡ್ 20 ರಿಂದ 45. ಮ.1.30ಕ್ಕೆ
1. ಡಿ ಡಾನ್‌ಕಿಂಗ್ 2. ಚಿರೋಕಿ ಮೂನ್ 3. ನಾವೆಲ್ ವೆಸೆಲರ್

II. ಕ್ರಿಸ್ಟಲ್ ಮ್ಯಾನ್ ಪ್ಲೇಟ್–1200 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ಏಂಜಲ್ ಬರ್ಗ್ 2. ಜಾಗ್‌ವೇರ್ 3. ಮಿಸ್ಟಿ ಮರ್ಲಿನ್

III. ಸ್ಪಾರ್ಕ್ ಆಫ್ ಲೈಫ್ ಪ್ಲೇಟ್– 1400 ಮೀ. ರೇಟೆಡ್ 00 ರಿಂದ 25. ಮ.2.30ಕ್ಕೆ
1. ಎಕೊ ಸಿಸ್ಟಮ್ 2. ಲೀಡ್ ಸಿಂಗರ್ 3. ಕಂಟ್ರಿಸ್ ಪೇಸ್

IV. ಶಿರಸಿ ಪ್ಲೇಟ್ ಡಿ2– 1200 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ಮಿಚ್ಚಲಿ ಪ್ರೈಡ್ 2. ಕೇಸರಿ ಕ್ವೀನ್ 3. ಟವರ್ ಕ್ರೆಸ್ಟ್

V. ಮೈಸೂರ್ ಝೂ ಪ್ಲೇಟ್–1400 ಮೀ. ರೇಟೆಡ್ 40 ರಿಂದ 65. ಮ.3.30ಕ್ಕೆ
1. ಜಮಿನಿ 2. ಪನ್ ಅಂಡ್ ಲಾಫ್ಟರ್ 3. ಸಮಯ್ ಬಲ್‌ವನ್

VI. ಸಿ. ದಶರಥರಾಮ ಮೆಮೋರಿಯಲ್ ಟ್ರೋಫಿ– 1200 ಮೀ. ರೇಟೆಡ್ 40 ರಿಂದ 65. ಸಂ.4.00ಕ್ಕೆ
1. ಅನ್ ಇಮ್ಯಾಜಿನಬಲ್ 2. ಡಿ ಇಮ್ಯೂಸ್ 3. ಅಮೇಜ಼ಿಂಗ್ ಸಫಾರಿ

VII. ಸಂಗಮ್ ಪ್ಲೇಟ್ – 1200 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.30ಕ್ಕೆ
1. ಸ್ಮಾರ್ಟ್ ಕ್ಯಾಡಿಲಾಕ್ 2. ಮೊಗಲ್ 3. ಬಹನ್ ಸಿನಿ

VIII. ಶಿರಸಿ ಪ್ಲೇಟ್ ಡಿ1– 1200 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1. ಲೆಜಿನೋರಿ 2. ಅಸ್ತ್ರ 3. ಏಂಜಲಿಕ ಸ್ಟಾರ್

ದಿನದ ಅತ್ಯುತ್ತಮ	: ಜಮಿನಿ
ಡಬ್ಬಲ್	: ಸ್ಮಾರ್ಟ್ ಕ್ಯಾಡಿಲಾಕ್, ಲೆಜಿನೋರಿ
ಜಾಕ್‌ಪಾಟ್	: 3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	: 5, 6, 7 ಮತ್ತು 8
I ಟ್ರಿಬಲ್	: 1, 2 ಮತ್ತು 3
II ಟ್ರಿಬಲ್	: 3, 4 ಮತ್ತು 5
III ಟ್ರಿಬಲ್	: 6, 7 ಮತ್ತು 8
ಎಕ್ಸ್‌ಆಕ್ಟ್	: 7 ಮತ್ತು 8

ಟಿಪ್ ಸ್ಟರ್ ಪಿಜೆಸಿ

ಫೆ.16, ತ್ರಿಪುರಾ, ಫೆ.27, ನಾಗಾಲ್ಯಾಂಡ್– ಮೇಘಾಲಯದಲ್ಲಿ ವಿಧಾನಸಭೆ ಚುನಾವಣೆ



ನವದೆಹಲಿ, ಜ.18– ನಾಗಾಲ್ಯಾಂಡ್, ಮೇಘಾಲಯ ಮತ್ತು ತ್ರಿಪುರಾ ವಿಧಾನಸಭೆಗಳಿಗೆ ಒಂದೇ ಹಂತದಲ್ಲಿ ಚುನಾವಣೆ ನಡೆಯಲಿದ್ದು, ಚುನಾವಣಾ ಆಯೋಗ ಬುಧವಾರ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಭಾರತದ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್, ಫೆ.16ರಂದು ತ್ರಿಪುರಾ, ಫೆ.27ರಂದು ನಾಗಾಲ್ಯಾಂಡ್ ಮತ್ತು ಮೇಘಾಲಯದಲ್ಲಿ ವಿಧಾನಸಭೆ ಚುನಾವಣೆಗೆ ಮತದಾನ ನಡೆಯಲಿದೆ. ಮಾರ್ಚ್ 2 ರಂದು ಮೂರು ರಾಜ್ಯಗಳ ಚುನಾವಣಾ ಫಲಿತಾಂಶ ಪ್ರಕಟವಾಗಲಿದೆ ಎಂದು ತಿಳಿಸಿದ್ದಾರೆ. ನಾಗಾಲ್ಯಾಂಡ್, ಮೇಘಾಲಯ ಮತ್ತು ತ್ರಿಪುರಾ ರಾಜ್ಯಗಳ ವಿಧಾನಸಭೆಗಳ ಐದು ವರ್ಷಗಳ ಅವಧಿಯು ಕ್ರಮವಾಗಿ ಮಾರ್ಚ್ 12, ಮಾರ್ಚ್ 15 ಮತ್ತು ಮಾರ್ಚ್ 22ರಂದು ಕೊನೆಗೊಳ್ಳಲಿದೆ. ಪ್ರತಿ ರಾಜ್ಯದಲ್ಲಿ 60 ಕ್ಷೇತ್ರಗಳಿಗೆ ಚುನಾವಣೆ ನಿಗದಿಪಡಿಸಲಾಗಿದೆ. ನಾಗಾಲ್ಯಾಂಡ್, ಮೇಘಾಲಯ ಮತ್ತು ತ್ರಿಪುರಾದಲ್ಲಿ ಒಟ್ಟು 62.8 ಲಕ್ಷಕ್ಕೂ ಹೆಚ್ಚು ಮತದಾರರಿದ್ದಾರೆ ಎಂದು ತಿಳಿಸಿದ್ದಾರೆ. ಇದಕ್ಕೂ ಮೊದಲು ಚುನಾವಣಾ ಸಿದ್ಧತೆಗಳನ್ನು ಪರಿಶೀಲಿಸಲು ಚುನಾವಣಾ ಆಯೋಗದ ತಂಡವು ರಾಜ್ಯಗಳಿಗೆ ಭೇಟಿ ನೀಡಿತ್ತು ಮತ್ತು ಭದ್ರತಾ ವ್ಯವಸ್ಥೆಗಳ ಪರಿಶೀಲನೆಯ ಜೊತೆಗೆ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸಭೆಗಳನ್ನು ನಡೆಸಿತು. ಇದರೊಂದಿಗೆ, ಚುನಾವಣಾಧಿಕಾರಿಗಳನ್ನು ಭೇಟಿ ಮಾಡಿ, ಪೊಲೀಸ್ ಮುಖ್ಯಸ್ಥರೊಂದಿಗೆ ಭದ್ರತಾ ವ್ಯವಸ್ಥೆಗಳ ಕುರಿತು ಪ್ರತ್ಯೇಕ ಸಭೆ ನಡೆಸಿದರು. ಅಲ್ಲದೆ, ಚುನಾವಣಾ ಸಮಿತಿಯು ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಗಾಗಿ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿದೆ.

ಕರ್ನಾಟಕ ಜನತೆ ನಡುವೆ ಇರಲು ಉತ್ಸುಕನಾಗಿದ್ದೇನೆ



ಬೆಂಗಳೂರು: ಪ್ರಧಾನಿ ಮೋದಿ ಗುರುವಾರ ಯಾದಗಿರಿ ಮತ್ತು ಕಲಬುರಗಿ ಜಿಲ್ಲೆಗಳಿಗೆ ಆಗಮಿಸುತ್ತಿದ್ದು, ನಾಳೆಯ ಕರ್ನಾಟಕ ಪ್ರವಾಸದ ಬಗ್ಗೆ ಕನ್ನಡದಲ್ಲೇ ಪ್ರಧಾನಿ ಟ್ವೀಟ್ ಮಾಡಿದ್ದಾರೆ.

"ಕರ್ನಾಟಕದ ಜನತೆಯ ನಡುವೆ ಇರಲು ನಾನು ಉತ್ಸುಕನಾಗಿದ್ದೇನೆ. ಸುಮಾರು 10,000 ಕೋಟಿ ರೂ. ಮೌಲ್ಯದ ಕಾಮಗಾರಿಗಳಿಗೆ ಚಾಲನೆ ನೀಡಲಾಗುವುದು ಅಥವಾ ಶಂಕುಸ್ಥಾಪನೆ ನೆರವೇರಿಸಲಾಗುವುದು. ಈ ಕಾಮಗಾರಿಗಳು ಜಲಶಕ್ತಿ, ರಸ್ತೆಗಳು ಒಳಗೊಂಡಿವೆ ಮತ್ತು ಹೊಸದಾಗಿ ಘೋಷಿಸಲಾದ ಕಂದಾಯ ಗ್ರಾಮಗಳ ಫಲಾನುಭವಿಗಳಿಗೆ ಹಕ್ಕು ಪತ್ರಗಳನ್ನು ವಿತರಿಸಲಾಗುವುದು" ಎಂದು ಪ್ರಧಾನಿ ಮೋದಿ ಮೋದಿ ಟ್ವೀಟ್ ಮಾಡಿದ್ದಾರೆ.

ಪಿಹೆಚ್.ಡಿ ಪದವಿ



ಮೈಸೂರು: ಡಾ.ಕೋಕಿಲಾ ಅವರ ಮಾರ್ಗದರ್ಶನದಲ್ಲಿ ಎಂ.ಎಲ್.ಶೇಖರ ರಂಗಭೂಮಿ ಕ್ಷೇತ್ರಕ್ಕೆ ಮಾಸ್ಟರ್ ಹಿರಣ್ಣಯ್ಯ ಅವರ ಕೊಡುಗೆ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯವು ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಜಾನುವಾರು ಸಂತೆ, ಸಾಗಣೆ ನಿಷೇಧ

ಮೈಸೂರು,ಜ.18– ಮೈಸೂರು ಜಿಲ್ಲೆಯಾದ್ಯಂತ ಜಾನುವಾರುಗಳಲ್ಲಿ ಚರ್ಮಗಂಟು ರೋಗವು (Lumpy Skin Disease) ಕಾಣಿಸಿಕೊಂಡಿದ್ದು ರೋಗ ವ್ಯಾಪಕವಾಗಿ ಹರಡುವ ಸಾಧ್ಯತೆ ಇರುತ್ತದೆ.

ಆದ್ದರಿಂದ ಚರ್ಮಗಂಟು ರೋಗ ಹರಡುವುದನ್ನು ತಡೆಗಟ್ಟಲು ಮುಂಜಾಗ್ರತಾ ಕ್ರಮವಾಗಿ ರೋಗವನ್ನು ಹತೋಟಿಗೆ ತರುವ ಸಲುವಾಗಿ ಜಿಲ್ಲೆಯಾದ್ಯಂತ ಜಾನುವಾರು ಸಾಗಣೆ, ಸಂತೆ ಹಾಗೂ ನೆರೆ ರಾಜ್ಯಗಳಿಂದ ಒಳಗೆ, ಹೊರಗೆ ಜಾನುವಾರು ಸಾಗಣೆಯನ್ನು ತಾತ್ಕಾಲಿಕವಾಗಿ ಫೆಬ್ರವರಿ 10ರವರೆಗೆ ನಿಷೇಧಿಸಿ ಜಿಲ್ಲಾಧಿಕಾರಿ ಡಾ.ರಾಜೇಂದ್ರ ಆದೇಶ ಹೊರಡಿಸಿದ್ದಾರೆ.

ಗೌರವಾನ್ವಿತ 5ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ ಅಸಲು ದಾವ ಸಂಖ್ಯೆ: 951/2020

ವಾದಿ: ಶ್ರೀ ಮಾದೇಗೌಡ ಬಿನ್ ಲೇಟ್ ನಂಜೇಗೌಡ ವಯಸ್ಸು 41 ವರ್ಷ, ವಾಸ: ಹೂಟಗಳ್ಳಿ ಗ್ರಾಮ, ಕಸಬಾ ಹೋಬಳಿ, ಮೈಸೂರು ತಾಲ್ಲೂಕು. ವಿರುದ್ಧ ಪ್ರತಿವಾದಿ: ಶ್ರೀಮತಿ. ಹೆಚ್.ಆರ್. ಸುಕನ್ಯಾ ಕೋಂ. ಹೆಚ್.ಆರ್.ನಾಗರಾಜು ಸುಮಾರು 60 ವರ್ಷ ವಾಸ: ನಂ.145, ಎಲ್.ಐ.ಜಿ.ಹುಡ್ಕೋ ಲಕ್ಷ್ಮಿಕಾಂತ ನಗರ 1ನೇ ಹಂತ, ಮೈಸೂರು ನಗರ.

ಸಾರ್ವಜನಿಕ ಪ್ರಕಟಣೆ

ಮೇಲ್ಕಂಡ ದಾವೆಯನ್ನು ವಾದಿಯು ದಾವಾ ಷೆಡ್ಯೂಲ್ ಸ್ವತುಗಳಿಗೆ ಸಂಬಂಧಿಸಿದಂತೆ ಪ್ರತಿವಾದಿಯ ವಿರುದ್ಧ ಶಾಶ್ವತ ತಡೆಯಾಜ್ಞೆಗಾಗಿ ಈ ಸದರಿ ದಾವೆಯನ್ನು ಈ ಘನ ನ್ಯಾಯಾಲಯದಲ್ಲಿ ಹೂಡಿರುತ್ತಾರೆ. ಈ ಮೂಲಕ ಮೇಲ್ಕಂಡ ವಾದಿಯು ತಿಳಿಯಪಡಿಸುವುದೇನೆಂದರೆ ಮೇಲ್ಕಂಡ ದಾವೆಯು ದಿನಾಂಕ: 30-01-2023 ರಂದು ಸುನಾವನೆಗೆ ಇರುತ್ತದೆ. ಆದುದ್ದರಿಂದ ಸದರಿ ದಿನಾಂಕದಂದು ಬೆಳ್ಳಿಗ್ಗೆ 11 ಗಂಟೆಗೆ ಈ ಸಂಬಂಧ ತಕರಾರು ಸಲ್ಲಿಸುವವರು ಇದ್ದರೆ, ಘನ ನ್ಯಾಯಾಲಯದಲ್ಲಿ ಖುದ್ದಾಗಿಯಾಗಲೀ ಅಥವಾ ನಿಮ್ಮ ಪರ ವಕೀಲರ ಮೂಲಕವಾಗಲೀ ಈ ಘನ ನ್ಯಾಯಾಲಯದ ಮುಂದೆ ಹಾಜರಾಗಿ ನಿಮ್ಮ ಅಹವಾಲನ್ನು ಸಲ್ಲಿಸುವುದು. ಇದಕ್ಕೆ ತಪ್ಪಿದಲ್ಲಿ ನಿಮ್ಮ ಗೈರು ಹಾಜರಾತಿಯನ್ನು ಪರಿಗಣಿಸಿ ಮೇಲ್ಕಂಡ ದಾವೆಯನ್ನು ಘನ ನ್ಯಾಯಾಲಯವು ಏಕಪಕ್ಷೀಯ ಎಂದು ಪರಿಗಣಿಸಿ ದಾವೆಯನ್ನು ಮುಂದಿನ ಕ್ರಮಕ್ಕಾಗಿ ತೀರ್ಮಾನ ಮಾಡಲಾಗುವುದು ಎಂದು ತಿಳಿಯಪಡಿಸಲಾಗಿದೆ.

ಷೆಡ್ಯೂಲ್

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ನಾಚನಹಳ್ಳಿ ಗ್ರಾಮದ ಸರ್ವೆ ನಂ.159/1 ರ ಒಟ್ಟು ವಿಸ್ತೀರ್ಣ 0-13 ಗುಂಟೆಯ ಅನುಮೋದಿತ ನಿವೇಶನ ಪೂರ್ವ ಪಶ್ಚಿಮ 40 ಅಡಿ ಮತ್ತು ದಕ್ಷಿಣ ಉತ್ತರ 30 ಅಡಿಗಳುಳ್ಳ ಇದರಲ್ಲಿ 7 ಚದರ ಅಡಿ, ವಿಸ್ತೀರ್ಣದಲ್ಲಿ ಕಟ್ಟಿಸಿರುವ ಆರ್.ಸಿ.ಸಿ. ಮನೆ ನಂ.159/8, ಜಂಜರ್ 228 ಇದಕ್ಕೆ ಚಕ್ಕುಬಂದಿ:– **ಪೂರ್ವಕ್ಕೆ** : ತುಂಗಾಬಾಯಿ ರವರ ಮನೆ **ಪಶ್ಚಿಮಕ್ಕೆ** : ರಸ್ತೆ **ಉತ್ತರಕ್ಕೆ** : ಅರಸು ರವರ ಫಾರಂ **ದಕ್ಷಿಣಕ್ಕೆ** : ವಿಜಯಲಕ್ಷ್ಮೀ ರವರ ಮನೆ

ಸ್ಥಳ : ಮೈಸೂರು
ದಿನಾಂಕ: 18–01–2023

ಪ್ರಭಾಕರ
ವಾದಿಯ ಪರ ವಕೀಲರು,
#178/ಎ. 11ನೇ ಮೇನ್, 5ನೇ ಕ್ರಾಸ್, ಸರಸ್ವತಿಪುರಂ, ಮೈಸೂರು.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಮೈಸೂರು ತಾಲ್ಲೂಕು, ದುದ್ದಗೆರೆ ಗ್ರಾಮದ ಲೇಟ್ ಚಿನ್ನಾಚಾರಿರವರ ಮಗ ಲಕ್ಷ್ಮಣಚಾರಿ ಮತ್ತು ಸದರಿಯವರ ಸಹೋದರರಾದ ಮಹದೇವಚಾರಿ ಹಾಗೂ ಸಿದ್ದರಾಜು ರವರ ಹೇಳಿಕೆ ಮೇರೆಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ: ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತು ನಮ್ಮ ಕಕ್ಷಿದಾರರ ಪಿತ್ರಾರ್ಜಿತ ಸ್ವತ್ತಾಗಿರುತ್ತದೆ. ನಮ್ಮ ಕಕ್ಷಿದಾರರುಗಳು ಮೈಸೂರು ಮೂರನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಓ.ಎಸ್.422/2000ರ ನಂಬರ್ ನಲ್ಲಿ ವಿಭಾಗಾಂಶದ ದಾವೆಯನ್ನು ಸಲ್ಲಿಸಿ, ಷೆಡ್ಯೂಲ್‌ನಲ್ಲಿ ಉದಹರಿಸಿರುವ ಸ್ವತ್ತಿನಲ್ಲಿ ಭಾಗಾಂಶದ ಡಿಕ್ರಿ ಹೊಂದಿರುತ್ತಾರೆ. ತದುವಾಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಆರ್.ಎಸ್.ಎ. 1909/2016ರ ನಂಬರ್‌ನಲ್ಲಿ ಮೇಲ್ಮನವಿ ಜರುಗಿರುತ್ತದೆ, ಈ ಮಧ್ಯೆ ಕೆಲವರು ಅಕ್ರಮವಾಗಿ ಖಾತೆ ವರ್ಗಾವಣೆ ಮಾಡಿಕೊಂಡು ಅನ್ಯರಿಗೆ ಮಾರಾಟ ಮಾಡಲು ಸಂಚು ಮಾಡುತ್ತಿರುವುದರಿಂದ ಷೆಡ್ಯೂಲ್ ಸ್ವತ್ತಿನ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೈಸೂರು ವಿಭಾಗಾಧಿಕಾರಿಯವರ ನ್ಯಾಯಾಲಯದಲ್ಲಿ ಆರ್.ಆರ್.ಟಿ 614/2022ರ ನಂಬರಿನ ಪ್ರಕರಣ ಜರುಗುತ್ತಿರುವುದರಿಂದ ಯಾರೇ ಆಗಲಿ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆಯಲು ಪ್ರಯತ್ನಿಸಿದ್ದಲ್ಲಿ ಸಿಂಧುವಾಗುವುದಿಲ್ಲ. ನಮ್ಮ ಕಕ್ಷಿದಾರರುಗಳಿಗೆ ಪಿತ್ರಾರ್ಜಿತವಾದ ಸ್ವತ್ತನ್ನು ಭಾಗಾಂಶದ ಹಕ್ಕು ಇರುವುದರಿಂದಲೂ ಮತ್ತು ನಮ್ಮ ಕಕ್ಷಿದಾರರುಗಳ ಸ್ವಾಧೀನಾನುಭವದಲ್ಲಿರುವ ಸ್ವತ್ತಿನಲ್ಲಿ ಯಾರಿಗೂ ಯಾವ ವಿಧವಾದ ಹಕ್ಕಾಗಲೀ, ಸ್ವಾಮ್ಯವಾಗಲಿ ಇರುವುದಿಲ್ಲವೆಂದು ಈ ಮೂಲಕ ಶೃತಪಡಿಸಿದೆ.

ಷೆಡ್ಯೂಲ್

ಮೈಸೂರು ತಾಲ್ಲೂಕು, ವರುಣಾ ಹೋಬಳಿ, ದುದ್ದಗೆರೆ ಗ್ರಾಮದ ಸರ್ವೆ ನಂ.178ರ ವಿಸ್ತೀರ್ಣ4 ಎಕರೆ ಜಮೀನು

ಸಹಿ/– ವರದರಾಜು ಬಿಎಸ್ಸಿ, ಎಲ್.ಎಲ್.ಬಿ., ವಕೀಲರು, ನಂ 104, ದೇವರಾಜ ಮಾರ್ಕೆಟ್ ಮೈಸೂರು. ಮೊ: 9945727462

ದಿನಾಂಕ: 17.01.2023, ಮೈಸೂರು

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ, ಮಡಿಕೇರಿ

ಅಲ್ಪಾವಧಿ ಟೆಂಡರ್ ಪ್ರಕಟಣೆ

ಟೆಂಡರ್ ಪ್ರಕಟಣೆ ಸಂಖ್ಯೆ: 28/2022–23/ ದಿನಾಂಕ: 17.01.2023

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 1999 ಹಾಗೂ ನಿಯಮಗಳು 2000ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4 ರನ್ವಯ ದ್ವಿಲಕೋಟೆ ಪದ್ಧತಿಯಲ್ಲಿ ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗದ ವ್ಯಾಪ್ತಿಯಲ್ಲಿ ಸೋಮವಾರಪೇಟೆ ತಾಲ್ಲೂಕು ಕುಶಾಲನಗರದಲ್ಲಿ ನ್ಯಾಯಾಲಯ ಕಟ್ಟಡ ನಿರ್ಮಾಣ (ಇಂಡೆಂಟ್ ಸಂಖ್ಯೆ: 141458) ಕಾಮಗಾರಿಗೆ ಇ–ಸಂಗ್ರಹಣಾ ವೇದಿಕೆ ಮೂಲಕ 2ನೇ ಕರೆ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಕಾಮಗಾರಿಯ ಟೆಂಡರ್‌ಗಿಟ್ಟ ಮೊತ್ತ ರೂ.814.68 ಲಕ್ಷಗಳಾಗಿರುತ್ತದೆ. ಟೆಂಡರ್ ದಾಖಲಾತಿಗಳನ್ನು, ದಿನಾಂಕ: 17.01.2023 ರಿಂದ ಕರ್ನಾಟಕ ರಾಜ್ಯ ಸರ್ಕಾರದ ಇ–ಸಂಗ್ರಹಣಾ ವೇದಿಕೆ ಮುಖಾಂತರ ಪಡೆಯಬಹುದಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 01.02.2023 ಸಂಜೆ 5.00 ಗಂಟೆಯಾಗಿರುತ್ತದೆ.

ಟೆಂಡರ್ ಸಂಪೂರ್ಣ ವಿವರಗಳನ್ನು ಇ–ಸಂಗ್ರಹಣಾ ವೇದಿಕೆ http://www.eproc.karnataka.gov.in ನಲ್ಲಿ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ. ಯಾವುದೇ ತಿದ್ದುಪಡಿ/ಮಾರ್ಪಾಡುಗಳನ್ನು ಇ–ಪೋರ್ಟಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಕೊಡಗು ವಿಭಾಗ, ಮಡಿಕೇರಿ

ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಪಾಲಿಕೆ ಆರೋಗ್ಯಾಧಿಕಾರಿಗಳು
ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು ಮಹಾನಗರ ಪಾಲಿಕೆ, ಮೈಸೂರು–570024

ಸಂಖ್ಯೆ: ನಂ.ಹೆಚ್1/ಪವಿ/97/2022–23 ದಿನಾಂಕ: 17.01.2023

ಪ್ರಕಟಣೆ

ವಿಷಯ: ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ, ನೇರಪಾವತಿ ಪೌರಕಾರ್ಮಿಕರಿಗೆ ಹಾಗೂ ಒಳ ಚರಂಡಿ ಸಹಾಯಕರುಗಳಿಗೆ ಸಾಮಾನ್ಯ ಆರೋಗ್ಯ ತಪಾಸಣೆ, ವರ್ಷಕ್ಕೆ ಒಂದು ಬಾರಿ ಸಂಪೂರ್ಣ ದೇಹ ಪರೀಕ್ಷೆಯನ್ನು ಮಾಡಲು ದರವನ್ನು ಆಹ್ವಾನಿಸಲು ಬಗ್ಗೆ.

ಉಲ್ಲೇಖ : ಮಾನ್ಯ ಆಯುಕ್ತರ ಆದೇಶದ ದಿನಾಂಕ : 14.12.2022.

ವಿಷಯಕ್ಕೆ ಸಂಬಂಧಿಸಿದಂತೆ ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸ್ವಚ್ಛತಾ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರ ಆರೋಗ್ಯ ಹಿತದೃಷ್ಟಿಯಿಂದ ಪೌರಕಾರ್ಮಿಕರಿಗೆ ಆರೋಗ್ಯ ತಪಾಸಣೆ ಮಾಡಿಸಲು ಆದೇಶಿಸಿರುತ್ತಾರೆ.

ಅದರಂತೆ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ, ನೇರಪಾವತಿ, ಪಾಲಿಕೆಯ ಅನುದಾನದಡಿ ;ಪೌರಕಾರ್ಮಿಕರಿಗೆ ಹಾಗೂ ಒಳ ಚರಂಡಿ ಸಹಾಯಕರುಗಳಿಗೆ ಸಾಮಾನ್ಯ ಆರೋಗ್ಯ ತಪಾಸಣೆ, ವರ್ಷಕ್ಕೆ ಒಂದು ಬಾರಿ ಸಂಪೂರ್ಣ ದೇಹ ಪರೀಕ್ಷೆಯನ್ನು ಮಾಡಲು ಅಂಗೀಕೃತ ಸಂಸ್ಥೆಗಳಿಂದ ದರ ಪಟ್ಟಿಯನ್ನು ಆಹ್ವಾನಿಸಲಾಗಿದೆ.

ಕ್ರ ಸಂ.	ವಿವರಗಳು	ಒಬ್ಬರಿಗೆ ಅನುಮೋದಿತ ದರ (ರೂ.ಗಳಲ್ಲಿ)
1	ಸಾಮಾನ್ಯ ಆರೋಗ್ಯ ತಪಾಸಣೆ ಹಾಗೂ ವರ್ಷಕ್ಕೆ ಒಂದು ಬಾರಿ ಸಂಪೂರ್ಣ ದೇಹ ಪರೀಕ್ಷೆಯನ್ನು ಮಾಡಲು	

ಷರತ್ತುಗಳು: 1) ಕೊಟೇಷನ್‌ಗಳನ್ನು ಮುಚ್ಚಿದ ಲಕೋಟೆಗಳನ್ನು **ದಿನಾಂಕ: 18.01.2023 ರಿಂದ 20.01.2023ರ ಸಂಜೆ 4.30 ಗಂಟೆಯೊಳಗೆ** ಆರೋಗ್ಯ ಶಾಖೆಗೆ ಸಲ್ಲಿಸುವುದು. 2) ನೋಂದಾಯಿತ ಆಸ್ಪತ್ರೆಗಳು ಮಾತ್ರ ದರಪಟ್ಟಿ ಸಲ್ಲಿಸುವುದು. 3) ಸದರಿ ಕೊಟೇಷನ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಮಾನ್ಯ ಆಯುಕ್ತರು ಕಾಯ್ದಿರಿಸಿಕೊಂಡಿರುತ್ತಾರೆ. 4) ಹೆಚ್ಚಿನ ವಿವರಗಳಿಗಾಗಿ ಪಾಲಿಕೆಯ ಆರೋಗ್ಯ ಶಾಖೆಯನ್ನು ಸಂಪರ್ಕಿಸುವುದು.

ಸಹಿ/– ಪಾಲಿಕೆ ಆರೋಗ್ಯಾಧಿಕಾರಿಗಳು ಮೈಸೂರು ಮಹಾನಗರ ಪಾಲಿಕೆ, ಮೈಸೂರು.

ವಾಸಾಸಂಇ/ಮೈಸೂರು/ಶಿರಡಿ ಸಾಯಿ/890/2022–23

ಮೈಸೂರು ಮಿತ್ರ 43
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು